## ಮಂಗಳವಾರ, ೨೬ ಆಗಸ್ಟ್, ೧೯೪೭

ಭಾರತದ ಸಂವಿಧಾನ ರಚನಾಸಭೆಯು ನವದೆಹಲಿಯ ಸಂವಿಧಾನ ಸಭಾಂಗಣದಲ್ಲಿ ಬೆಳಗ್ಗೆ ೧೦ ಗಂಟೆಗೆ ಮಾನ್ಯ ಸಭಾಧ್ಯಕ್ಷರಾದ ಗೌರವಾನ್ವಿತ ಡಾ. ರಾಜೇಂದ್ರ ಪ್ರಸಾದ್ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು.

### ಪ್ರತಿಜ್ಞಾ ಸ್ವೀಕಾರ

ಈ ಮುಂದಿನ ಸದಸ್ಯರು ಪ್ರತಿಜ್ಞೆ ಸ್ವೀಕರಿಸಿದರು.

ಶ್ರೀ ಎಸ್.ಕೆ. ಪಾಟೀಲ್

**ಮಾನ್ಯ ಸಭಾಧ್ಯಕ್ಷರು** : ಈಗ ನಾವು ೧ನೇ ಪಟ್ಟಿಯ ಬಾಬನ್ನು ಪರಿಶೀಲನೆಗೆ ಎತ್ತಿಕೊಳ್ಳೋಣ.

**ಶ್ರೀ ಎಚ್.ವಿ. ಕಾಮತ್** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಆಗಸ್ಟ್ ೧೪–೧೫ರ ಮಧ್ಯರಾತ್ರಿ ನಡೆದ ಘಟನೆಯ ಕಡೆ ನಿಮ್ಮ ಗಮನ ಸೆಳೆಯಲು ನನಗೆ ಅವಕಾಶ ನೀಡಿ ಮತ್ತು ಹಳೆಯ ದಿನಗಳತ್ತ ಹೋಗುತ್ತಿರುವುದಕ್ಕೆ ನಿಮ್ಮ ಹಾಗೂ ಸದನದ ಕ್ಷಮೆ ಕೋರುತ್ತೇನೆ. ವಿಷಯ ಅತ್ಯಂತ ಮಹತ್ತ್ವದ್ದಾಗಿರುವುದರಿಂದ ಈ ವಿಷಯವನ್ನು ನಿಮ್ಮ ಗಮನಕ್ಕೆ ತರುವಲ್ಲಿ ಆಗಿರುವ ವಿಳಂಬವನ್ನು ಮನ್ನಿಸಬೇಕೆಂದು ಕೋರುತ್ತೇನೆ. ಅಧಿಕಾರ ಸ್ವೀಕಾರ ಸಮಾರಂಭದ ರಾತ್ರಿ ಕಾರ್ಯಸೂಚಿಯ ಮೊದಲ ಅಂಗ ವಂದೇ ಮಾತರಂ ಗಾಯನ ಆಗಿತ್ತು. ಇದು ನಿಮಗೆ ನೆನಪಿರಬಹುದು. ಸದನದಲ್ಲಿದ್ದ ನಾವು ಕೆಲವರು ನೋಡಿದ ಮೇರೆಗೆ ನಮ್ಮ ಕೆಲ ಗೌರವಾನ್ವಿತ ಸ್ನೇಹಿತರು ಹೆಚ್ಚು ಕಮ್ಮಿ ಗುಂಪುಗೂಡಿ, ಹಾಡು ಹೇಳುವುದು ಮುಗಿದೊಡನೆ ಈ ಸಭಾಂಗಣವನ್ನು ಪ್ರವೇಶಿಸಿದರು. ಅವರ ಈ ವರ್ತನೆಯಿಂದ ಕೆಲವು ಅಭಿಪ್ರಾಯಗಳು ಉದ್ಭವಿಸುವುದರಿಂದ ಈ ವಿಷಯದ ಬಗ್ಗೆ ಆಲೋಚಿಸಬೇಕೆಂದು ಕೋರುತ್ತೇನೆ. ಅವರು ಒಟ್ಟಿಗೆ ಈ ಸಭಾಂಗಣದಲ್ಲಿ ಪ್ರವೇಶಿಸಿದ ರೀತಿ ನೋಡಿದರೆ ಅದು ಆಕಸ್ಮಿಕವಲ್ಲ, ಪೂರ್ವ ಯೋಜಿತ ಎಂಬಂತಿತ್ತು. ಈ ಕಾರ್ಯಕ್ರಮ ಸಂಪೂರ್ಣವಾಗಿ ನಿಮ್ಮ ಹಿಡಿತದಲ್ಲಿರುತ್ತದೆಂದು ಸಭೆ ನಿರ್ಣಯಿಸಿತ್ತು ಮತ್ತು ಸದನದ ಸದಸ್ಯರಾಗಿ ಅವರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕಾದ ಕರ್ತವ್ಯಕ್ಕೆ ಬದ್ಧರಾಗಿದ್ದರು. ಈ ಸದನವು, ಈ ಗೀತೆಯನ್ನು ರಾಷ್ಟ್ರಗೀತೆ ಎಂದು ಅಂಗೀಕರಿಸಿರದಿದ್ದರೂ, ಈ ಗೀತೆ ನಮ್ಮ ದೇಶದ ಸಾವಿರಾರು ಸ್ತ್ರೀ–ಪುರುಷರ ಸಂಕಷ್ಟ, ತ್ಯಾಗ, ರಕ್ತ, ಕಣ್ಣೀರು ಹಾಗೂ ಬಲಿದಾನದಿಂದ ಪವಿತ್ರವಾಗಿದೆ ಎಂಬುದು ನನ್ನ ಮಿತ್ರರಿಗೆ ಗೊತ್ತು. ರಾಷ್ಟ್ರೀಯ ಗೀತೆ ಮುಗಿದ ಮೇಲೆ ಬಂದ ಸದಸ್ಯರು ಹೀಗೆ ಆಕಸ್ಮಿಕವೇ ಹೊರತು ಯೋಜಿತವಲ್ಲ ಎಂದು ಹೇಳುತ್ತಾರೆಂದು ಆಶಿಸುತ್ತೇನೆ. ಧನ್ಯವಾದಗಳು

**ಶ್ರೀ ಬಾಲಕೃಷ್ಣ ಶರ್ಮ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ಪ್ರೀತ್ಯಾದರಕ್ಕೆ ಪಾತ್ರರಾದ ಗೌರವಾನ್ವಿತ ಮಿತ್ರರು ಈ ವಿಷಯವನ್ನೆತ್ತಿದ್ದು ನನಗೆ ನೋವುಂಟುಮಾಡಿದೆ. ವಾಸ್ತವವಾಗಿ ಈ ಸದನದ ನಮ್ಮ ಕೆಲ ಸಹೋದ್ಯೋಗಿಗಳ ವರ್ತನೆ ತಕ್ಕುದಾಗಿಲ್ಲ ಎಂದು ನಮ್ಮಲ್ಲಿ ಬಹುಪಾಲು ಸದಸ್ಯರಿಗೆ ಕಂಡುಬಂದಿದೆ. ಆದರೆ ಇಲ್ಲಿರುವ ನಾವು ಯಾರನ್ನೂ ಆಗ್ರಹಿಸುವುದಿಲ್ಲ.....

**ಶ್ರೀ ಎಲ್. ಕೃಷ್ಣಸ್ವಾಮಿ ಭಾರತಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಕ್ರಿಯಾಲೋಪವನ್ನೆತ್ತಲು ಬಯಸುತ್ತೇನೆ, ನಾವು ಯಾವ ಅಂಶದ ಬಗ್ಗೆ ಮಾತನಾಡುತ್ತಿದ್ದೇವೆ? ಹಲವು ಸಂದರ್ಭಗಳಲ್ಲಿ ಕೆಲ ಸದಸ್ಯರು ಯಾವುದೇ ಪ್ರಸ್ತಾವವಿಲ್ಲದೆ ಸದನದಲ್ಲಿ ನಿಂತುಕೊಂಡಿದ್ದನ್ನು ನೋಡಿದ್ದೇವೆ. ಅಂಥದ್ದಕ್ಕೆ ಅನುಮತಿಸಿದ್ದು ನಿಮ್ಮ ಸೌಜನ್ಯ. ಆದರೆ ಒಬ್ಬ ಸದಸ್ಯ ನೀವು ಕರೆ ನೀಡದೆ ಎದ್ದು ನಿಂತು ಮಾತನಾಡುವುದು ಸೂಕ್ತವೇ? ಸದನದ ಮುಂದೆ ಒಂದು ನಿಖರ ಪ್ರಸ್ತಾವ ಇದ್ದು ಆ ಬಗ್ಗೆ ಮಾತನಾಡುವುದು ಸರಿಯಾದ ಕ್ರಮ. ಹೀಗಾಗಿ ಸದನದ ಮುಂದೆ ಯಾವುದೇ ಪ್ರಸ್ತಾವ ಇಲ್ಲದೆ ಕೆಲ ಸದಸ್ಯರು ಎದ್ದು ನಿಲ್ಲುವುದು ಸರಿಯಾದ ಕ್ರಮವಲ್ಲ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?

**ಕೆಲ ಗೌರವಾನ್ವಿತ ಸದಸ್ಯರು** : ಸದ್ದು, ಸದ್ದು.

**ಮಾನ್ಯ ಅಧ್ಯಕ್ಷರು** : ಈ ವಿಷಯವನ್ನು ಇಲ್ಲಿಗೇ ಮುಗಿಸುವುದು ಒಳಿತು. ಕಾಮತ್ ಅವರು ತಾವು ಹೇಳಬೇಕೆಂದಿದ್ದನ್ನು ಹೇಳಿದ್ದಾರೆ. ಶ್ರೀ ಬಾಲಕೃಷ್ಣ ಶರ್ಮ ಹೇಳಿದ್ದನ್ನು ಕೇಳಿದ್ದೇವೆ. ಈ ವಿಷಯವನ್ನು ಇನ್ನಷ್ಟು ಬೆಳೆಸಿ ಏನು ಪ್ರಯೋಜನ? ಇದನ್ನು ಇಲ್ಲಿಗೇ ಕೈಬಿಡುವುದು ಒಳಿತು.

ಈಗ ಬಾಬುಗಳನ್ನು ಎತ್ತಿಕೊಳ್ಳೋಣ. ಮುಂದಿನದು ೨೭ನೇ ಬಾಬು.

## ಕೇಂದ್ರ ಅಧಿಕಾರಗಳ ಸಮಿತಿ ವರದಿ ಮುಂದುವರಿದುದು

### ಬಾಬು – ೨೭

**ಶ್ರೀ ಕೆ. ಸಂತಾನಮ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನನ್ನ ಹೆಸರಿನಲ್ಲಿ ಪಟ್ಟಿ ೧ರಲ್ಲಿರುವುದಕ್ಕಿಂತ ಪಟ್ಟಿ ೭ರಲ್ಲಿ ಇರುವ ತಿದ್ದುಪಡಿಯನ್ನು ಮಂಡಿಸಲು ಇಚ್ಛಿಸುತ್ತೇನೆ. ನಾನು ಪರಿಷ್ಕೃತ ತಿದ್ದುಪಡಿ ನೀಡಿದ್ದೇನೆ.

**ಮಾನ್ಯ ಸಭಾಧ್ಯಕ್ಷರು** : ಹೌದು.

**ಶ್ರೀ ಕೆ. ಸಂತಾನಮ್** : ನಾನು ಪ್ರಸ್ತಾವಿಸಲು ಕೋರುತ್ತೇನೆ.

"೨೭ ಬಾಬಿನಲ್ಲಿ 'ಇತರ ಸಂಸ್ಥೆ' ಎಂಬ ಪದಗಳ ತರುವಾಯ 'ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣ ನೀಡಲಾದ' ಎಂಬ ಪದಗಳನ್ನು ಸೇರಿಸುವುದು."

ಈ ತಿದ್ದುಪಡಿಗೆ ಕಾರಣವೇನೆಂದರೆ ಕೇಂದ್ರ ಸರ್ಕಾರವು ಈ ಬಾಬಿನಿಂದ ಒಕ್ಕೂಟದ ಕಾನೂನಿನ ಮೂಲಕ ಯಾವುದೇ ಸಂಸ್ಥೆಯನ್ನು ರಾಷ್ಟ್ರೀಯ ಮಹತ್ತ್ವದ ಸಂಸ್ಥೆ ಎಂದು ಘೋಷಿಸಲು ಅಧಿಕಾರ ಪಡೆದಿದೆ. ಕೆಲವು ಸಂಸ್ಥೆಗಳನ್ನು ಪೂರ್ಣವಾಗಿ ಖಾಸಗಿ ಅಥವಾ ಪ್ರಾಂತೀಯ ಹಣದಿಂದ ಸ್ಥಾಪಿಸಿರಬಹುದು. ಅಂಥ ಒಂದು ಸಂಸ್ಥೆ ರಾಷ್ಟ್ರೀಯ ಮಹತ್ತ್ವದ ಸಂಸ್ಥೆಯಾಗುತ್ತದೆ ಎಂದು ಕೇಂದ್ರ ಸರ್ಕಾರ ಹೇಳುವುದು ಸರಿಯಲ್ಲ. ಆ ಸಂಸ್ಥೆ ಒಂದು ನಿರ್ದಿಷ್ಟ ಪ್ರದೇಶ ಅಥವಾ ನಿರ್ದಿಷ್ಟ ಸಮುದಾಯಕ್ಕಾಗಿ ಕೆಲಸಮಾಡುತ್ತಿದ್ದು, ಇಂಥ ಘೋಷಣೆಯಿಂದಾಗಿ ಅದು ಇಡೀ ದೇಶಕ್ಕೆ ಲಭ್ಯವಾಗಬಲ್ಲ ಅಖಿಲ ಭಾರತ ಸಂಸ್ಥೆ ಎಂದು ಹೇಳಿದಂತಾಗುತ್ತದೆ. ಕೆಲವು ಸಂಸ್ಥೆಗಳ ವಿಷಯದಲ್ಲಿ ಇಂಥ ಘೋಷಣೆ ಪ್ರಯೋಜನಕಾರಿಯಾಗಬಹುದು. ಕೇಂದ್ರ ಸರ್ಕಾರದಿಂದ ಭಾಗಶಃ ಅಥವಾ ಪೂರ್ಣವಾಗಿ ಆರ್ಥಿಕ ನೆರವು ಪಡೆಯುವ ಸಂಸ್ಥೆಗಳ ಮಟ್ಟಿಗೆ ಈ ಅಧಿಕಾರವನ್ನು ಸೀಮಿತಗೊಳಿಸಬೇಕು. ಆಗ ಮಾತ್ರ ಕೇಂದ್ರ ಸರ್ಕಾರವೂ ಒಂದು ಸಂಸ್ಥೆಯನ್ನು ರಾಷ್ಟ್ರೀಯ ಮಹತ್ತ್ವದ ಸಂಸ್ಥೆ ಎಂದು ಘೋಷಿಸಲು ಹಕ್ಕುಳ್ಳದ್ದಾಗಿರುತ್ತದೆ. ನಾನು ತಿದ್ದುಪಡಿಯನ್ನು ಮಂಡಿಸಲು ಬಯಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಪಾಟಸ್ಕರ್, ನಿಮ್ಮ ತಿದ್ದುಪಡಿಯೂ ಇದೇ ರೀತಿ ಇದೆಯಲ್ಲವೇ?

**ಶ್ರೀ ಎಚ್.ವಿ. ಪಾಟಸ್ಕರ್** (ಬಾಂಬೆ : ಸಾಮಾನ್ಯ) : ಮಾನ್ಯರೆ, ಶ್ರೀ ಸಂತಾನಮ್ ಮಂಡಿಸಿದ

ತಿದ್ದುಪಡಿಯ ಹಿನ್ನೆಲೆಯಲ್ಲಿ ನಾನು ನನ್ನ ತಿದ್ದುಪಡಿಯನ್ನು ಮಂಡಿಸುವುದಿಲ್ಲ. ಆದರೆ ೨೭ನೇ ಬಾಬು ೧೯೩೫ರ ಭಾರತ ಸರ್ಕಾರ ಅಧಿನಿಯಮದ ೧೧ನೇ ಬಾಬಿಗೆ ಸಂವಾದಿಯಾಗಿದೆ ಎಂದು ತಿಳಿಸಬಯಸುತ್ತೇನೆ. ಅದರಲ್ಲಿಯೂ ಯಾವುದೇ ಅಂಥ ಸಂಸ್ಥೆಗೆ ಒಕ್ಕೂಟ ಹಣಕಾಸು ನೀಡಬೇಕು ಎಂದು ಉಪಬಂಧ ಕಲ್ಪಿಸಲಾಗಿತ್ತು.

(ನಾನು ಈ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ, ನನ್ನದನ್ನು ಮಂಡಿಸುವುದಿಲ್ಲ)

**ಶ್ರೀ ನಜಿರುದ್ದೀನ್ ಅಹ್ಮದ್** (ಪಶ್ಚಿಮ ಬಂಗಾಳ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ನಾನು ಮುಂದಿನಂತೆ ಮಂಡಿಸಲು ಕೋರುತ್ತೇನೆ.

"೨೭ನೇ ಬಾಬಿನಲ್ಲಿ 'ಬೇರಾವುದೇ' ಎಂಬ ಪದಗಳ ತರುವಾಯ 'ಅಂಥದೇ' ಎಂಬ ಪದಗಳನ್ನು ಹಾಗೂ 'ರಾಷ್ಟ್ರೀಯ ಮಹತ್ತ್ವದ' ಎಂಬ ಪದಗಳಿಗೆ 'ಒಕ್ಕೂಟದ ನಿಯಂತ್ರಣಕ್ಕೊಳಪಟ್ಟ ಅಥವಾ ಹಣಕಾಸು ನೆರವು ಪಡೆದ' ಎಂಬ ಪದಗಳನ್ನು ಬದಲಿಸಬೇಕು."

ಮಾನ್ಯರೆ, ಈ ಬಾಬಿನ ಮೂಲವಾದ ಭಾರತ ಸರ್ಕಾರ ಅಧಿನಿಯಮದ ಪಟ್ಟಿ ೧ರ ೧೧ನೇ ಬಾಬನ್ನು ಆಧರಿಸಿಯೇ ಇದನ್ನು ತರಬೇಕು ಎಂಬುದು ಈ ತಿದ್ದುಪಡಿಯ ಉದ್ದೇಶ. ಇಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಭಾರತ ಸರ್ಕಾರ ಅಧಿನಿಯಮದ ಪಾಠ ಇದಕ್ಕಿಂತ ತುಸು ಉತ್ತಮವಾಗಿರುವಂತೆ ತೋರುತ್ತದೆ. ನನ್ನ ತಿದ್ದುಪಡಿಯ ಪರಿಣಾಮವಾಗಿ ಈ ಬಾಬಿನ ಕಾರ್ಯಾಚರಣೆ ಇಂಥ ಸಣ್ಣ ಸಂಸ್ಥೆಗಳಿಗೂ ವಿಸ್ತರಿಸುತ್ತದೆ. 'ಅಂಥದೇ' ಎಂಬ ಪದ ಹೆಚ್ಚು ಮಹತ್ತ್ವಪೂರ್ಣವಾಗಿದ್ದು, ಒಕ್ಕೂಟ ಪ್ರಾಧಿಕಾರವು ಈ ಬಾಬಿನ ಕಾರ್ಯಾಚರಣೆಯ ವ್ಯಾಪ್ತಿಗೆ ಒಳಪಡಿಸುವ ಅಂಥ ಸಂಸ್ಥೆಗಳ ಸ್ವರೂಪದ ಬಗ್ಗೆ ತಿಳಿಸುತ್ತದೆ.

ನಾನು ತಿಳಿಸಲಿಚ್ಛಿಸುವ ಇನ್ನೊಂದು ಬದಲಾವಣೆ ಎಂದರೆ 'ರಾಷ್ಟ್ರೀಯ ಮಹತ್ತ್ವವುಳ್ಳ ಸಂಸ್ಥೆ ಎಂದು ಒಕ್ಕೂಟದ ಕಾನೂನಿನ ಮೂಲಕ ಘೋಷಿಸಲಾದ' ಎಂಬ ಪದಗಳನ್ನು ಬಿಟ್ಟುಬಿಡುವುದು. ಅದರ ಬದಲು 'ಒಕ್ಕೂಟದ ನಿಯಂತ್ರಣಕ್ಕೊಳಪಡುವ ಹಾಗೂ ಅದರಿಂದ ಹಣಕಾಸು ನೆರವು ಪಡೆಯುವ ಸಂಸ್ಥೆಗಳು' ಎಂಬ ಪದಗಳನ್ನು ಪ್ರತಿಯೋಜಿಸಲು ಬಯಸುತ್ತೇನೆ. ಒಕ್ಕೂಟ ಕಾನೂನಿನ ಘೋಷಣೆಯ ಅಗತ್ಯವಿಲ್ಲ ಎಂದು ನನ್ನ ಅಭಿಪ್ರಾಯ. ಈ ಬಾಬು ಪಟ್ಟಿ – ೧ರಲ್ಲಿ ಸೇರಿರುವುದರಿಂದ ಒಕ್ಕೂಟಕ್ಕೆ ಸ್ವತಃ ಕಾನೂನು ರಚಿಸುವ ಅಧಿಕಾರವಿರುತ್ತದೆ. ಈ ಬಾಬಿನ ಬಗ್ಗೆ ಕಾನೂನು ರಚಿಸುವ ಅಧಿಕಾರ ಸೂಚಿತವಾಗುವುದರಿಂದ ಆ ಬಗ್ಗೆ ಒಕ್ಕೂಟ ಕಾನೂನಿನಿಂದ ಘೋಷಿತವಾಗುವಂತೆ ಉಪಬಂಧ ಕಲ್ಪಿಸುವ ಅಗತ್ಯವಿಲ್ಲ. ಅದರ ಬದಲು 'ಒಕ್ಕೂಟದ ನಿಯಂತ್ರಣಕ್ಕೊಳಪಟ್ಟ ಹಾಗೂ ಅದರಿಂದ ಹಣಕಾಸು ನೆರವು ಪಡೆದ' ಎಂಬ ಪದಗಳು ಹೆಚ್ಚು ಸೂಕ್ತವಾಗುತ್ತವೆ. ಇದು ತಿದ್ದುಪಡಿಯ ಪರಿಣಾಮ. ಇದು ಕೇವಲ ಪ್ರಾರೂಪಣೆಯ ಸ್ವರೂಪದ್ದಾದ್ದರಿಂದ ಬಾಬಿನ ಉದ್ದೇಶ ಹಾಗೂ ವ್ಯಾಪ್ತಿಯನ್ನು ಇದು ಗಂಭೀರವಾಗಿ ಬದಲಿಸುವುದಿಲ್ಲ. ಶ್ರೀ ಸಂತಾನಮ್ ಅವರ ತಿದ್ದುಪಡಿಗೆ ಸಂಬಂಧಿಸಿದಂತೆ ಹೇಳುವುದಾದರೆ ತಿದ್ದುಪಡಿಯ ತಾತ್ಪರ್ಯ ನನಗೆ ಸಮ್ಮತವಿದೆ.

**ಶ್ರೀ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ** (ಸಿಕ್ಕಿಮ್ ಮತ್ತು ಕೂಚ್ ಬೆಹಾರ್ ರಾಜ್ಯಗಳು) : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸಲು ಕೋರುತ್ತೇನೆ.

"೨೭ ಬಾಬಿನಲ್ಲಿ' 'ಇತರ ಯಾವುದೇ ಸಂಸ್ಥೆ' ಎಂಬ ಪದಗಳ ತರುವಾಯ 'ಒಂದು ಪ್ರಾಂತ್ಯದಲ್ಲಿ' ಎಂಬ ಪದಗಳನ್ನು ಸೇರಿಸುವುದು."

ಭಾರತೀಯ ರಾಜ್ಯಗಳಲ್ಲಿರುವ ಇಂಥ ಸಂಸ್ಥೆಗಳನ್ನು ಅವುಗಳ ಪಾಡಿಗೆ ಬಿಟ್ಟುಬಿಡುವುದು ಒಳಿತು ಎಂಬುದು ನನ್ನ ಸಲಹೆ. ಇಲ್ಲವಾದರೆ ಅಮಾಯಕವೆಂದು ಕಾಣಿಸುವ ಇಂಥ ಉಪಬಂಧದ ಮುಸುಕಿನಲ್ಲಿ ಮಾಡುವ ಹಸ್ತಕ್ಷೇಪಕ್ಕೆ ಕೊನೆಯೇ ಇರುವುದಿಲ್ಲ.

**ಮಾನ್ಯ ಸಭಾಧ್ಯಕ್ಷರು** : ಈ ತಿದ್ದುಪಡಿಗಳ ಬಗ್ಗೆ ನನಗೆ ಸೂಚನೆ ಬಂದಿದೆ.

ತಿದ್ದುಪಡಿಗಳು ಹಾಗೂ ಮೂಲ ಬಾಬಿನ ಬಗ್ಗೆ ಚರ್ಚಿಸಲು ಮುಕ್ತ ಅವಕಾಶವಿದೆ.

(ಯಾವ ಸದಸ್ಯರೂ ಮಾತನಾಡಲು ಎದ್ದು ನಿಲ್ಲಲಿಲ್ಲ)

**ಮಾನ್ಯ ಸಭಾಧ್ಯಕ್ಷರು** : ಯಾರೂ ಮಾತನಾಡುವುದಿಲ್ಲವೆಂದು ತೋರುತ್ತದೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರೇ, ನೀವು ಏನಾದರೂ ಹೇಳಬಯಸುತ್ತೀರಾ?

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಶ್ರೀ ಸಂತಾನಮ್ ಅವರು ಸೂಚಿಸಿದ ತಿದ್ದುಪಡಿ 'ಇತರ ಸಂಸ್ಥೆ' ಎಂಬ ಪದಗಳ ತರುವಾಯ 'ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಆರ್ಥಿಕ ನೆರವು ಪಡೆದ' ಎಂಬ ಪದಗಳನ್ನು ಸೇರಿಸಬೇಕೆಂಬುದನ್ನು ನಾನು ಒಪ್ಪುತ್ತೇನೆ.

ಶ್ರೀ ನಜಿರುದ್ದೀನ್ ಅಹ್ಮದ್‌ರ ತಿದ್ದುಪಡಿ ಸಂಬಂಧದಲ್ಲಿ ಹೇಳುವುದಾದರೆ 'ಅಂಥದೇ' ಎಂಬುದನ್ನು ಉದ್ದೇಶಪೂರ್ವಕವಾಗಿ 'ಬೇರಾವುದೇ' ಎಂಬುದಾಗಿ ಬದಲಿಸಲಾಯಿತು. ಏಕೆಂದರೆ ೨೭ನೇ ಬಾಬಿನಲ್ಲಿ ನಿರ್ದಿಷ್ಟವಾಗಿ ಉಲ್ಲೇಖಿಸಲಾದ ಸಂಸ್ಥೆಗಳೆಂದರೆ ಇಂಪೀರಿಯಲ್ ಲೈಬ್ರರಿ, ಇಂಡಿಯನ್ ಮ್ಯೂಜಿಯಂ, ಇಂಪೀರಿಯಲ್ ವಾರ್ ಮ್ಯೂಸಿಯಂ ಮತ್ತು ವಿಕ್ಟೋರಿಯಾ ಮೆಮೋರಿಯಲ್. ಈ ಸಂಸ್ಥೆಗಳು, ಒಕ್ಕೂಟವು ಹಣಕಾಸು ನೆರವು ನೀಡಲು ಆಯ್ಕೆಮಾಡಬಹುದಾದ ರೀತಿಯ ಸಂಸ್ಥೆಗಳಲ್ಲ, ಅವು ಒಕ್ಕೂಟ ಶಾಸಕಾಂಗವು ರಾಷ್ಟ್ರೀಯ ಮಹತ್ತ್ವವುಳ್ಳವುಗಳೆಂದು ಪರಿಗಣಿಸುವಂಥ ಸಂಸ್ಥೆಗಳು. ಆದ್ದರಿಂದ ಈ ಸಂಬಂಧದಲ್ಲಿ 'ಅಂಥದೇ' ಎಂಬ ಸೀಮಿತ ವಿಶೇಷಣವನ್ನು ಬಳಸುವಂತಿಲ್ಲ.

ಶ್ರೀ ನಜಿರುದ್ದೀನ್ ಅಹ್ಮದ್‌ರ ತಿದ್ದುಪಡಿಯಲ್ಲಿರುವ ಇನ್ನೊಂದು ಅಂಶವೆಂದರೆ ಭಾರತ ಸರ್ಕಾರ ಅಧಿನಿಯಮದ ೧೧ನೇ ಬಾಬಿನಲ್ಲಿ ಬಳಸಿದ ಭಾಷೆ ಸೂಕ್ತವಾಗಿದೆ ಎಂಬುದು. ಆ ಭಾಷೆ ಮತ್ತು ಈ ಬಾಬಿನಲ್ಲಿ ಬಳಸುವ ಪದಗಳಲ್ಲಿರುವ ವ್ಯತ್ಯಾಸವೆಂದರೆ "ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ನೆರವು ಪಡೆದ" ಎಂಬ ಪದಗಳ ಬದಲಾಗಿ "ಒಕ್ಕೂಟದಿಂದ ನಿಯಂತ್ರಿತವಾದ ಮತ್ತು ಹಣಕಾಸು ನೆರವು ಪಡೆದ" ಎಂಬ ಪದಗಳಿರುತ್ತವೆ. ಎರಡನೇ ಭಾಗಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ಅದು ಸಂತಾನಮ್ ಅವರ ತಿದ್ದುಪಡಿಯಂತೆಯೇ ಇದೆ. "ನಿಯಂತ್ರಿತವಾದ ಅಥವಾ" ಎಂಬ ಪದಗಳ ಬಳಕೆಯಿಂದ, ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ನೆರವು ಪಡೆಯದ ಆದರೆ ಒಕ್ಕೂಟದ ನಿಯಂತ್ರಣದಲ್ಲಿರುವ ಸಂಸ್ಥೆಗಳು ಈ ಬಾಬಿನ ಪರಿಧಿಯಲ್ಲಿ ಬರುತ್ತವೆ. ಶ್ರೀ ಸಂತಾನಮ್ ಅವರ ತಿದ್ದುಪಡಿಯ ಹಿಂದಿನ ಉದ್ದೇಶವೆಂದರೆ ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ನೆರವು ಪಡೆಯದ ಸಂಸ್ಥೆಗಳನ್ನು ಕುರಿತು ಒಕ್ಕೂಟವು ಕಾನೂನುಮಾಡಬಾರದು. ಸಮ್ಮತವಾದ ತಿದ್ದುಪಡಿಯ ಉದ್ದೇಶದ ಉಪಯೋಗಕ್ಕಾಗಿ ಭಾರತ ಸರ್ಕಾರ ಅಧಿನಿಯಮದಲ್ಲಿರುವ ಭಾಷೆಯನ್ನು ಒಪ್ಪಿಕೊಳ್ಳಲಾಗುವುದಿಲ್ಲ.

ಶ್ರೀ ಹಿಮ್ಮತ್‌ಸಿಂಗ್ ಮಹೇಶ್ವರಿಯವರ ತಿದ್ದುಪಡಿ ಸಂಬಂಧದಲ್ಲಿ ಹೇಳುವುದಾದರೆ ಪ್ರಾಂತ್ಯ ಭಾರತೀಯ ರಾಜ್ಯಗಳನ್ನು ಒಕ್ಕೂಟವು ಅತಿಕ್ರಮಿಸುವ ಬಗ್ಗೆ ಅನುಚಿತ ಭಾವಾವೇಶವನ್ನು ತೋರಿಸುತ್ತಿದ್ದಾರೆ. ಈ ಬಾಬು ಈಗ ಇರುವಂತೆಯೇ ಇದ್ದರೆ, ಭಾರತೀಯ ರಾಜ್ಯಗಳಲ್ಲಿರುವ ಅಂಥ ಸಂಸ್ಥೆಗಳನ್ನು ಒಕ್ಕೂಟದ ಹಣಕಾಸು ನೆರವಿನಿಂದ ಹೊರತುಪಡಿಸಿದರೆ, ಭಾರತೀಯ ರಾಜ್ಯಗಳಿಗೆ ಎಷ್ಟು ಹಾನಿಯಾಗುತ್ತದೆ ಎಂಬುದನ್ನು ಅವರು ತಿಳಿಯಬೇಕು. ಈ ಬಾಬಿನಲ್ಲಿ ಭಾರತೀಯ ರಾಜ್ಯಗಳಲ್ಲಿರುವ ಅಂಥ ಸಂಸ್ಥೆಗಳ ಮೇಲೆ ಅತಿಕ್ರಮಣ ಮಾಡುವ ಉದ್ದೇಶವಿಲ್ಲ ಎಂದು ಅವರಿಗೆ ಭರವಸೆ ಕೊಡಬಲ್ಲೆ. ಭಾರತೀಯ ರಾಜ್ಯಗಳ ಆಡಳಿತಗಾರರು ಹಾಗೂ ಜನರೂ ತಾವೇ ಹಣಕಾಸು ಒದಗಿಸಿ ಅಂಥ ಸಂಸ್ಥೆಗಳನ್ನು ನಡೆಸಬಲ್ಲರಾದರೆ ಅಂಥ ಸಂಸ್ಥೆಗಳ ಮೇಲೆ ಅಧಿಕಾರ ವ್ಯಾಪ್ತಿ ಚಲಾಯಿಸಲು ಒಕ್ಕೂಟ ತವಕಿಸುವುದಿಲ್ಲ ಎಂದು ನನ್ನ ಭಾವನೆ. ಆದರೆ ಭಾರತೀಯ ರಾಜ್ಯಗಳ ಜನ ರಾಷ್ಟ್ರೀಯ ಮಹತ್ತ್ವದ ಸಂಸ್ಥೆಗಳನ್ನು ನಡೆಸಲು ಕೇಂದ್ರದ ಸಹಾಯವನ್ನು ನಿರೀಕ್ಷಿಸುತ್ತಾರೆಯೇ ಹೊರತು, ಅಂಥ ಸಂಸ್ಥೆಗಳನ್ನು ಒಳ್ಳೆಯ ಗುಣಮಟ್ಟದಲ್ಲಿ ನಿರ್ವಹಿಸುವ ಆರ್ಥಿಕ ಸಾಮರ್ಥ್ಯ ಆಳ್ವಿಕೆದಾರರಿಗಾಗಲಿ

ಜನರಿಗಾಗಲಿ ಇಲ್ಲ. ಭಾರತೀಯ ರಾಜ್ಯದ ಪ್ರಯೋಜನದ ದೃಷ್ಟಿಯಿಂದ ಈ ಬಾಬು ಹೀಗೇ ಇರಲು ಬಿಡುತ್ತಾರೆ ಎನಿಸುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರು ಶ್ರೀ ಸಂತಾನಮ್ ಅವರು ಮಂಡಿಸಿದ ಮೊದಲ ತಿದ್ದುಪಡಿಯನ್ನು ಒಪ್ಪಿದ್ದಾರೆ.

ಮುಂದಿಟ್ಟಿರುವ ವಿಷಯ :

೨೭ನೇ ಬಾಬಿನಲ್ಲಿ 'ಇತರ ಸಂಸ್ಥೆಗಳು' ಎಂಬ ಪದಗಳ ತರುವಾಯ 'ಒಕ್ಕೂಟದಿಂದ ಪೂರ್ಣವಾಗಿ ಅಥವಾ ಭಾಗಶಃ ಹಣಕಾಸು ನೆರವು ಪಡೆದ ಮತ್ತು' ಎಂಬ ಪದಗಳನ್ನು ಸೇರಿಸುವುದು.

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಶ್ರೀ ನಜಿರುದ್ದೀನ್ ಅಹ್ಮದ್ :** ನನ್ನ ತಿದ್ದುಪಡಿಯನ್ನು ಹಿಂಪಡೆಯಲು ನನಗೆ ಅನುಮತಿ ನೀಡುವಿರಾ? ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಇನ್ನು ಹಿಮ್ಮತ್‌ಸಿಂಗ್ ಮಹೇಶ್ವರಿಯವರ ತಿದ್ದುಪಡಿ.

"೨೭ನೇ ಬಾಬಿನಲ್ಲಿ 'ಇನ್ನಾವುದೇ ಸಂಸ್ಥೆ' ಎಂಬ ಪದಗಳ ತರುವಾಯ 'ಒಂದು ಪ್ರಾಂತದಲ್ಲಿ' ಎಂಬ ಪದಗಳನ್ನು ಸೇರಿಸುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"ಶ್ರೀ ಸಂತಾನಮ್ ಅವರ ತಿದ್ದುಪಡಿ ಮೂಲಕ ತಿದ್ದುಪಡಿಯಾದಂತೆ ೨೭ನೇ ಬಾಬನ್ನು ಅಂಗೀಕರಿಸುವುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಬಾಬು – ೨೮

(೨೮ನೇ ಬಾಬಿಗೆ ಯಾವುದೇ ತಿದ್ದುಪಡಿಯನ್ನು ಮಂಡಿಸಲಾಗಲಿಲ್ಲ.)

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

೨೮ನೇ ಬಾಬನ್ನು ಅಂಗೀಕರಿಸುವುದು

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ೨೮ನೇ ಬಾಬಿನ ತರುವಾಯ ೨೮ (ಎ) ಎಂಬ ಹೊಸ ಬಾಬನ್ನು ಸೇರಿಸಬೇಕೆಂದು ಶ್ರೀಮತಿ ರೇಣುಕಾ ರಾಯ್ ಅವರ ಹೆಸರಿನಲ್ಲಿ ಒಂದು ಪ್ರಸ್ತಾವ ಇದೆ.

**ಶ್ರೀಮತಿ ರೇಣುಕಾ ರಾಯ್** (ಪಶ್ಚಿಮ ಬಂಗಾಳ : ಸಾಮಾನ್ಯ) : ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಮಂಡಿಸಲು ಬಯಸುವುದಿಲ್ಲ.

## ಬಾಬು – ೨೯

**ಗೌರವಾನ್ವಿತ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ :** ಮಾನ್ಯರೆ, ನಾನು ಮಂಡಿಸಲು ಕೋರುತ್ತೇನೆ :

"೨೯ನೇ ಬಾಬಿಗೆ ಈ ಮುಂದಿನದನ್ನು ಬದಲಿಸುವುದು:

"ಒಂದು ಒಕ್ಕೂಟ ರಾಜ್ಯಕ್ಕೆ ತನ್ನಲ್ಲಿಯೇ ವಾಯುಸಂಪರ್ಕಗಳನ್ನು ಅಭಿವೃದ್ಧಿಪಡಿಸಲು ಇರುವ ಹಕ್ಕಿಗೆ ಒಳಪಟ್ಟ ವಾಯುಮಾರ್ಗಗಳು."

ಸದನಕ್ಕೆ ತಿಳಿದಿರುವಂತೆ ತಮ್ಮ ಪ್ರದೇಶಗಳೊಳಗೆ ವಾಯು ಸಂಪರ್ಕವನ್ನು ಅಭಿವೃದ್ಧಿಪಡಿಸುವ ಹಕ್ಕು

ಈಗ ರಾಜ್ಯಗಳಿಗೆ ಇದೆ. ರಾಜ್ಯಗಳಿಗೆ ಈ ಹಕ್ಕನ್ನು ಉಳಿಸಿಕೊಡಲಾಗುತ್ತದೆಯೇ ಅಥವಾ ಭವಿಷ್ಯದಲ್ಲಿ ರಾಜ್ಯಗಳಲ್ಲಿರುವ ವಿಮಾನ ಇಳಿಯುವ ಜಾಗ ಹಾಗೂ ವಾಯುಸಂಪರ್ಕ ವ್ಯವಸ್ಥೆಯನ್ನು ಒಕ್ಕೂಟದ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗುತ್ತದೆಯೇ ಎಂಬುದು ಖಚಿತವಾಗಿ ಗೊತ್ತಾಗಬೇಕು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಈ ಬಾಬಿನಲ್ಲಿ ವಾಯುಮಾರ್ಗಕ್ಕೆ ಸಂಬಂಧಿಸಿದ ಕಾನೂನು ಮಾಡಲು ಉಪಬಂಧ ಕಲ್ಪಿಸುವ ಸಾಮಾನ್ಯ ವಿವರಣೆ ಇದೆ. ಭಾರತೀಯ ರಾಜ್ಯಗಳು ತಮ್ಮ ರಾಜ್ಯಗಳಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ಉದ್ಯಮದಲ್ಲಿ ತೊಡಗುವುದನ್ನು ಒಟ್ಟಾರೆ ನಿಲ್ಲಿಸುವ ಸೂಚನೆ ಈ ಬಾಬಿನಲ್ಲಿ ಇಲ್ಲ. ಒಕ್ಕೂಟ ಕಾನೂನನ್ನು ಮಾಡುವಾಗ, ಅದರಲ್ಲಿ ಏನಿರಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಭಾರತೀಯ ರಾಜ್ಯಗಳ ಇಂಥ ಕಾನೂನು ಸಮ್ಮತ ಹಿತಾಸಕ್ತಿಗಳಿಗೆ ಕಾನೂನಿನಲ್ಲಿ ಖಂಡಿತವಾಗಿಯೂ ಉಪಬಂಧ ಕಲ್ಪಿಸಲಾಗುತ್ತದೆ. ಸಾಮಾನ್ಯವಾಗಿ ವಾಯುಮಾರ್ಗಕ್ಕೆ ಸಂಬಂಧಿಸಿದಂತೆ ವಾಯು ಸಂಪರ್ಕ, ಚಲನೆಯ ಮಾರ್ಗ ಇತ್ಯಾದಿಗಳಿಗೆ ಸಂಬಂಧಿಸಿದ ಶಾಸನವನ್ನು ಕೇಂದ್ರವೇ ವಿನಿಯಮಿಸಬೇಕು ಮತ್ತು ನಿಯಂತ್ರಿಸಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಶ್ರೀ ಹಿಮ್ಮತ್‌ಸಿಂಗ್‌ರು ಸಂದೇಹಪಡುವಂತೆ ಘಟಿಸುವುದಿಲ್ಲ. ಭಾರತೀಯ ರಾಜ್ಯಗಳು ತಮ್ಮ ಗಡಿಗಳೊಳಗೆ ನಡೆಸುವ ವಾಯುಮಾರ್ಗಗಳಿಗೆ ಸಂಬಂಧಿಸಿದಂತೆ ನಿಯಂತ್ರಣದ ಕೆಲವು ವಿಷಯಗಳಲ್ಲಿ ಕೇಂದ್ರಕ್ಕೆ ಅಧಿಕಾರವಿರುವುದು ಅಗತ್ಯವಾಗುತ್ತದೆ.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯ :

"೨೯ನೇ ಬಾಬಿಗೆ ಈ ಮುಂದಿನದನ್ನು ಬದಲಿಸುವುದು:

'ಒಂದು ಒಕ್ಕೂಟ ರಾಜ್ಯಕ್ಕೆ ತನ್ನಲ್ಲಿಯೇ ವಾಯುಸಂಪರ್ಕವನ್ನು ಅಭಿವೃದ್ಧಿಪಡಿಸಲು ಇರುವ ಹಕ್ಕಿಗೆ ಒಳಪಟ್ಟ ವಾಯುಮಾರ್ಗಗಳು'."

ಈ ಪ್ರಸ್ತಾವವನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ಪ್ರಶ್ನೆ :

"೨೯ನೇ ಬಾಬನ್ನು ಅಂಗೀಕರಿಸುವುದು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಬಾಬು – ೩೦

**ಶ್ರೀ ಎಚ್.ವಿ. ಪಾಟಸ್ಕರ್ :** ಮಾನ್ಯರೆ, ನಾನು ಮಂಡಿಸುತ್ತಿರುವುದು:

"೩೦ನೇ ಬಾಬಿನಲ್ಲಿ 'ಒಕ್ಕೂಟ' ಎಂಬ ಪದ ಎರಡನೇ ಬಾರಿ ಬಂದಾಗ 'ರಾಷ್ಟ್ರೀಯ' ಎಂಬುದನ್ನು ಪ್ರತಿಯೋಜಿಸುವುದು."

ಪ್ರಾಂತೀಯ ಪಟ್ಟಿಯ ೧೭ನೇ ಬಾಬಿನಲ್ಲಿ ಪ್ರಾಂತೀಯ ಹೆದ್ದಾರಿಗಳು ಹಾಗೂ ಜಲಮಾರ್ಗಗಳ ಬಗ್ಗೆ ಉಲ್ಲೇಖಿಸಲಾಗಿದ್ದು ಅಲ್ಲಿ ಅವುಗಳನ್ನು ರಾಷ್ಟ್ರೀಯ ಹೆದ್ದಾರಿಗಳು ಹಾಗೂ ಜಲಮಾರ್ಗಗಳೆಂದು ಬಳಸುವುದು ಸೂಕ್ತವೆನಿಸುತ್ತದೆ. ಇದು ಸ್ವೀಕೃತವಾಗುವುದೆಂದು ಆಶಿಸುತ್ತೇನೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ನಾನು ಮಂಡಿಸಲು ಕೋರುತ್ತೇನೆ:

"೩೦ನೇ ಬಾಬಿನಲ್ಲಿ 'ಮತ್ತು ಜಲಮಾರ್ಗಗಳನ್ನು' ಎಂಬ ಪದಗಳನ್ನು ತೆಗೆದು ಹಾಕುವುದು ಮತ್ತು 'ಒಕ್ಕೂಟ ಸರ್ಕಾರ' ಎಂಬ ಪದಗಳಿಗೆ 'ಒಕ್ಕೂಟ ಕಾನೂನು' ಎಂಬುದನ್ನು ಬದಲಿಸುವುದು."

ನಾನು ಇದನ್ನು ಮಂಡಿಸುತ್ತಿರುವ ಉದ್ದೇಶವೇನೆಂದರೆ ೩೧ನೇ ಬಾಬಿನಲ್ಲಿ "ಒಕ್ಕೂಟ ಸರ್ಕಾರವು

ಒಕ್ಕೂಟ ಜಲಮಾರ್ಗಗಳೆಂದು ಘೋಷಿಸಿದ ಒಳನಾಡು ಜಲಮಾರ್ಗಗಳ ಮೇಲೆ ಹಡಗುಯಾನ ಮತ್ತು ನೌಕಾಯಾನ"ಕ್ಕೆ ಉಪಬಂಧ ಕಲ್ಪಿಸಿದ್ದೀರಿ. ಆದ್ದರಿಂದ ನೀವು ಇಲ್ಲಿ ಜಲಮಾರ್ಗಗಳನ್ನು ಉಳಿಸಿಕೊಂಡರೆ ೩೦ ಹಾಗೂ ೩೧ನೇ ಬಾಬುಗಳು ಒಂದರ ಮೇಲೊಂದು ಬಂದಂತಾಗುತ್ತದೆ. ಎರಡನೆಯದಾಗಿ ನೀವು "ಜಲಮಾರ್ಗಗಳು" ಎಂಬ ಸಾಮಾನ್ಯ ಪದಪ್ರಯೋಗ ಮಾಡಿದರೆ ಅದರಿಂದ ನೀರಾವರಿ ಹಾಗೂ ಇತರ ಹಕ್ಕುಗಳು ಸೇರಿದಂತೆ ಜಲಮಾರ್ಗಗಳ ಮೇಲೆ ಕೇಂದ್ರವು ಸಂಪೂರ್ಣ ನಿಯಂತ್ರಣ ಹೊಂದಿರುತ್ತದೆ ಎಂದು ಅರ್ಥೈಸಲು ಅವಕಾಶವಾಗುತ್ತದೆ. ಆದರೆ ಮೂಲ ಬಾಬಿನ ಉದ್ದೇಶ ಅದು ಅಲ್ಲ. ಆದ್ದರಿಂದ ಅದರ ಕಾರ್ಯಾಚರಣೆ ಸೀಮಿತವಾಗಿರಬೇಕು ಎಂದು ತೋರಿಸಲು ಜಲಮಾರ್ಗಗಳನ್ನು ೩೦ನೇ ಬಾಬಿನಿಂದ ತೆಗೆದು ೩೧ನೇ ಬಾಬಿಗೆ ತರುವುದು ಉತ್ತಮ. ಆ ತರುವಾಯ ಜಲಮಾರ್ಗಗಳ ಅಭಿವೃದ್ಧಿಗೆ ವಿಶೇಷ ಏರ್ಪಾಡು ಕಲ್ಪಿಸಲಾಗಿದೆ. ಜಲಮಾರ್ಗಗಳ ಸಂಬಂಧದಲ್ಲಿ ಪ್ರಾಂತ್ಯಗಳ ಹಕ್ಕನ್ನು ಕಾಪಾಡುವುದು ಇದರ ಉದ್ದೇಶ. ಈ ಎಲ್ಲ ಕಾರಣಗಳಿಗಾಗಿ ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ.

ಒಕ್ಕೂಟ ಹೆದ್ದಾರಿಗಳು ಎಂಬುದನ್ನು ರಾಷ್ಟ್ರೀಯ ಹೆದ್ದಾರಿಗಳು ಎಂದು ಪ್ರತಿಯೋಜಿಸಲು ಕೋರಿ ಶ್ರೀ ಪಾಟಸ್ಕರ್ ಮಂಡಿಸಿದ ತಿದ್ದುಪಡಿ ಬಗ್ಗೆ ನನ್ನ ಆಕ್ಷೇಪಣೆ ಇಲ್ಲ. ಮಾನ್ಯರೆ, ನಾನು ಮಂಡಿಸುತ್ತೇನೆ.

**ಶ್ರೀ ಎನ್. ಮಾಧವರಾವ್** (ಪೂರ್ವ ರಾಜ್ಯಗಳು) : ಮಾನ್ಯರೆ, ಈ ಬಾಬಿಗೆ ನನ್ನ ತಿದ್ದುಪಡಿಯ ಸಂಖ್ಯೆ ೧೯ರಲ್ಲಿ ಹೇಳುವುದೇನೆಂದರೆ ಬಾಬು ೩೦ರಲ್ಲಿ "ಒಕ್ಕುಟ ಸರ್ಕಾರವು ಘೋಷಿಸಿದ" ಎಂಬ ಶಬ್ದಗಳ ಅನಂತರ "ಸಂಬಂಧಪಟ್ಟ ಪ್ರತಿಯೊಂದು ಘಟಕಗಳೊಂದಿಗೆ ಅಥವಾ ಭಾರತ ಸರ್ಕಾರದೊಡನೆ ಸಮಾಲೋಚನೆ" ಎಂಬ ಶಬ್ದಗಳನ್ನು ಸೇರಿಸುವುದು ಎಂಬುದನ್ನು ಮಂಡಿಸುವ ಉದ್ದೇಶವೆಂದರೆ ಈ ಪಟ್ಟಿಯನ್ನು ಸಿದ್ಧಪಡಿಸಿದವರ ಮನಸ್ಸಿನಲ್ಲಿ ಏನಿತ್ತು ಎಂಬುದಕ್ಕೆ ಒತ್ತು ನೀಡುವುದು. ಸಾಮಾನ್ಯವಾಗಿ ಹೆದ್ದಾರಿಗಳು ಹಾಗೂ ಜಲಮಾರ್ಗಗಳು, ಘಟಕಗಳ ಪರಿಧಿಯಲ್ಲಿ ಬರುತ್ತವೆ. ಆದರೆ ಯಾವುದೊಂದು ನಿರ್ದಿಷ್ಟ ಪ್ರಕರಣದ ಸಂಬಂಧದಲ್ಲಿ ಒಕ್ಕೂಟಕ್ಕೆ ಸೇರಿವೆ ಎಂದು ಘೋಷಿಸಬೇಕಾದರೆ ಸಂಬಂಧಪಟ್ಟ ಒಕ್ಕೂಟ ಅಥವಾ ಒಕ್ಕೂಟಗಳ ಸರ್ಕಾರದೊಂದಿಗೆ ಸಮಾಲೋಚಿಸಲಾಗಿದೆ ಎಂಬುದು ಗೃಹೀತ ಮತ್ತು ಅವುಗಳ ಅಭಿಪ್ರಾಯಕ್ಕೆ ಪ್ರಾಮುಖ್ಯವಿರುತ್ತದೆ. ಒಕ್ಕೂಟವು ಅಂಥ ಘೋಷಣೆ ಮಾಡಿದರೆ ಅದು ಪ್ರಶ್ನಿತ ಹೆದ್ದಾರಿ ಅಥವಾ ಜಲಮಾರ್ಗದ ಸುಧಾರಣೆಗಾಗಿ ಮತ್ತು ಘಟಕಗಳ ಸಂಪನ್ಮೂಲಗಳ ಸಾಮರ್ಥ್ಯದಿಂದ ಸಾಧ್ಯವಿರುವುದಕ್ಕಿಂತ ಹೆಚ್ಚಿನ ಗುಣಮಟ್ಟವನ್ನು ಕಾಯ್ದುಕೊಳ್ಳುವುದಕ್ಕಾಗಿ ಆಗಿರುತ್ತದೆ. ಸಂದರ್ಭ ಹೀಗಿರುವಾಗ ಯಾವುದೇ ಘಟಕ ಆಕ್ಷೇಪಣೆ ಎತ್ತುವ ಸಂಭವವಿರುವುದಿಲ್ಲ. ಒಕ್ಕೂಟ ಪಟ್ಟಿಯಲ್ಲಿನ ಹಲವಾರು ನಮೂದುಗಳ ಬಗ್ಗೆ, ಒಕ್ಕೂಟ ಸರ್ಕಾರವು ಏಕಪಕ್ಷೀಯವಾಗಿ ಕ್ರಮ ಕೈಗೊಳ್ಳುವ ಉದ್ದೇಶ ಹೊಂದಿದೆ ಎಂಬಂತೆ ಅರ್ಥೈಸಲಾಗುತ್ತದೆ. ಈ ಅಭಿಪ್ರಾಯವನ್ನು ನಿವಾರಿಸಬೇಕಾದದ್ದು ಅತ್ಯಗತ್ಯ. ನಾನು ಈ ತಿದ್ದುಪಡಿಯನ್ನು ಮಂಡಿಸುವ ಉದ್ದೇಶವಿರಲಿಲ್ಲ. ಇಂಥ ಘೋಷಣೆಗೆ ಮುಂಚೆ ಘಟಕಗಳೊಂದಿಗೆ ಸಮಾಲೋಚಿಸಬೇಕು ಎಂದು ಭಾವಿಸಿದ್ದರೆ ಸಮಯ ಉಳಿತಾಯವಾಗುತ್ತಿತ್ತು. ಆದರೆ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿಯ ಅನಂತರ, ಈ ಬಾಬಿನ ಉದ್ದೇಶದ ಬಗ್ಗೆ ಗೊಂದಲವುಂಟಾಗಿದೆ. ಇದು ಮುಖ್ಯವಾಗಿ ಹೆದ್ದಾರಿಗಳ ನಿರ್ಮಾಣ ಹಾಗೂ ಸುಧಾರಣೆ ಹಾಗೂ ಅವುಗಳನ್ನು ಸುಸ್ಥಿತಿಯಲ್ಲಿ ಕಾಪಾಡುವುದಕ್ಕೆ ಸಂಬಂಧಿಸಿದೆಯೇ ಅಥವಾ ಸರಕು ಹಾಗೂ ಪ್ರಯಾಣಿಕರ ಸಾಗಣೆಗೆ ಸಂಬಂಧಿಸಿದಂತೆ ಕಾನೂನು ರಚಿಸಲು ಒಕ್ಕೂಟ ಸಂಸ್ಥೆಯನ್ನು ಶಕ್ತಗೊಳಿಸುತ್ತದೆಯೇ? ೩೦ ಹಾಗೂ ೩೧ನೇ ಬಾಬುಗಳು ಈಗ ಇರುವಂತೆ ನನಗೆ ಸ್ಪಷ್ಟವಾಗಿ ತಿಳಿದಿವೆ. ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರ ತಿದ್ದುಪಡಿ ಸಂಶಯ ಹುಟ್ಟು ಹಾಕಿದೆ. ತಿದ್ದುಪಡಿಗಳ ಉದ್ದೇಶದ ಬಗ್ಗೆ ನಾನು ತಿಳಿದುಕೊಳ್ಳಬೇಕಾಗಿದೆ. ಈಗ ಪ್ರಸ್ತಾವಿಸಿರುವ ತಿದ್ದುಪಡಿಗಳೊಂದಿಗೆ ಬಾಬಿನ ನಮೂದಿತ ಪಾಠ ಹೇಗಿರುತ್ತದೆ? ಮತ್ತು (ಎ) ಹೆದ್ದಾರಿಗಳ ನಿರ್ವಹಣೆ (ಬಿ) ಅಂಥ ಹೆದ್ದಾರಿಗಳ ಮೇಲೆ ಪ್ರಯಾಣಿಕರು

ಹಾಗೂ ಸರಕುಗಳ ಸಾಗಣೆಯ ನಿರ್ವಹಣೆ ಕುರಿತಂತೆ ಕೇಂದ್ರದ ಅಧಿಕಾರ ಹಾಗೂ ಹೊಣೆಯ ಮೇಲೆ ತಿದ್ದುಪಡಿ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬ ಬಗ್ಗೆ ನಾನು ಅರಿತುಕೊಳ್ಳಬೇಕಾಗಿದೆ.

**ಶ್ರೀ ಹುಸೇನ್ ಇಮಾಮ್** (ಬಿಹಾರ : ಮುಸ್ಲಿಮ್) : ಮಾನ್ಯ ಸಭಾಧ್ಯಕ್ಷರೆ, ಸದನದ ಪರಿಶೀಲನೆಗಾಗಿ ನಾನು ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬಯಸುತ್ತೇನೆ ಹಾಗೂ ನನ್ನ ಸಲಹೆ ಅಂಗೀಕೃತವಾದರೆ ಅದು ಪ್ರಾರೂಪಣಕಾರರಿಗೆ ಮಾರ್ಗದರ್ಶಿಯಾಗುತ್ತದೆ. ಜಲಮಾರ್ಗಗಳಿಗೆ ಸಂಬಂಧಿಸಿದಂತೆ ನಾನು ಒಂದು ನಿರ್ದಿಷ್ಟ ವಿಷಯವನ್ನು ತಿಳಿಸುತ್ತೇನೆ. ಹಡಗುಸಾಗಣೆ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಈ ವಿಷಯ ೩೧ನೇ ಬಾಬಿನಲ್ಲಿ ಬಂದಿದೆ. ಇದನ್ನು ೩೦ನೇ ಬಾಬಿಗೆ ಸೇರಿಸುವ ಅಗತ್ಯವಿಲ್ಲ. ಆದರೆ ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಇನ್ನೊಂದು ವಿಷಯವಿದೆ. ಅದು ವಿದ್ಯುಚ್ಛಕ್ತಿ ಹಾಗೂ ನೀರಾವರಿಯ ಅಭಿವೃದ್ಧಿ ಮತ್ತು ಅದರಿಂದಾಗುವ ಪರಿಣಾಮಗಳು. ದಾಮೋದರ ಕಣಿವೆ ಯೋಜನೆಯ ವಿಷಯದಲ್ಲಿ ಬಿಹಾರ ಹಾಗೂ ಪಶ್ಚಿಮ ಬಂಗಾಳ ಎರಡೂ ಪ್ರಾಂತ್ಯಗಳಿಗೂ ಆಸಕ್ತಿ ಇದೆ. ಈಗಿರುವ ವ್ಯವಸ್ಥೆಯ ಪ್ರಕಾರ ಕೇಂದ್ರ ಸರ್ಕಾರವು, ಸಂಬಂಧಪಟ್ಟ ಎರಡು ಪ್ರಾಂತ್ಯಗಳ ಒಪ್ಪಿಗೆಯಿಲ್ಲದೆ ಆ ಬಗ್ಗೆ ಕಾನೂನು ಮಾಡುವಂತಿಲ್ಲ. ಅಂತೆಯೇ ಉತ್ತರಪ್ರದೇಶದ ಮಿರ್ಜಾಪುರ ಜಿಲ್ಲೆ ಹಾಗೂ ಬಿಹಾರದ ಪಲಮಾವ್ ಜಿಲ್ಲೆಗಳ ನಡುವೆ ರಿಹಂದ್ ಕಣಿವೆ ಯೋಜನೆಯ ವಿಷಯವಿದೆ. ಈ ಯೋಜನೆಯ ಅಭಿವೃದ್ಧಿ ಕಾಮಗಾರಿ ಸಂಬಂಧಪಟ್ಟ ಎರಡು ಜಿಲ್ಲೆಗಳ ಒಪ್ಪಿಗೆಯನ್ನು ಅವಲಂಬಿಸಿದೆ. ನಾವು ಈಗ ಹೊಸದಾಗಿ ಕಾನೂನು ಮಾಡುತ್ತಿರುವುದರಿಂದ ನೀರಾವರಿ ಹಾಗೂ ವಿದ್ಯುಚ್ಛಕ್ತಿ ವಿಷಯಗಳನ್ನು ಪ್ರತ್ಯೇಕಿಸುವಂತೆ ಉಪಬಂಧ ಮಾಡುವುದು ಅಗತ್ಯ. ಸಣ್ಣ ನದಿಗಳ ವಿಷಯದಲ್ಲಿ ಅಥವಾ ಒಂದೇ ಪ್ರಾಂತ್ಯ ಸಂಬಂಧಪಟ್ಟಿರುವ ನದಿಗಳ ವಿಷಯದಲ್ಲಿ ಈಗಿರುವಂತೆ ಪ್ರಾಂತೀಯ ವಿಷಯವಾಗಿ ಉಳಿಯಬಹುದು. ದೊಡ್ಡ ನದಿಗಳ ವಿಷಯದಲ್ಲಿ ಎರಡು ಅಥವಾ ಹೆಚ್ಚು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಹಾಗೂ ಅವು ಆಸಕ್ತಿ ಹೊಂದಿದ್ದರೆ, ಈ ವಿಷಯ ಕೇಂದ್ರ ಅಥವಾ ಒಕ್ಕೂಟ ವಿಷಯವಾಗಿ ಉಳಿದರೆ ಪ್ರಾಂತ್ಯಗಳ ಒಪ್ಪಿಗೆ ಪಡೆಯಲು ಹಾಗೂ ಯೋಜನೆಗೆ ತಗಲುವ ವೆಚ್ಚವನ್ನು ಭಾಗಶಃ ಭರಿಸುವಂತೆ ಪ್ರಾಂತ್ಯಗಳನ್ನು ಕೇಳಲು ನಾವು ಎದುರಿಸುತ್ತಿರುವ ತೊಂದರೆಗಳನ್ನು ತಡೆಯಬಹುದು. ಪ್ರಾಂತ್ಯಗಳಂತೂ ತೀರ ಬಡತನದಲ್ಲಿವೆ. ಅವುಗಳಿಗಿರುವ ಸಂಪನ್ಮೂಲಗಳು ಅತ್ಯಲ್ಪ. ಉದಾಹರಣೆಗೆ ಒರಿಸ್ಸಾದ ಮಹಾನದಿ ಯೋಜನೆ. ಆದರೆ ಆ ಪ್ರಾಂತ್ಯವು ತನ್ನಲ್ಲಿರುವ ಸಂಪನ್ಮೂಲಗಳಿಂದ ಆ ಯೋಜನೆಗೆ ಹಣ ಒದಗಿಸುವುದು ಅಸಾಧ್ಯ. ಆದ್ದರಿಂದ ಈ ಬಾಬನ್ನು ರೂಪಿಸುವ ಹಂತದಲ್ಲಿ ನನ್ನ ಸಲಹೆ ಏನೆಂದರೆ ನದಿಗಳ ವಿಷಯದಲ್ಲಿ ಒಂದೇ ಪ್ರಾಂತ್ಯ ಸಂಬಂಧಪಟ್ಟಿದ್ದರೆ ಅಥವಾ ಆಸಕ್ತಿ ಹೊಂದಿದ್ದರೆ ಪ್ರಾಂತೀಯ ಹಕ್ಕುಗಳ ಅತಿಕ್ರಮಣವಾಗದಂತೆ ಎಚ್ಚರ ವಹಿಸಬೇಕು. ಒಂದು ನದಿಯ ಬಗ್ಗೆ ಒಂದಕ್ಕಿಂತ ಹೆಚ್ಚು ಪ್ರಾಂತ್ಯಗಳು ಆಸಕ್ತಿ ಹೊಂದಿದ್ದರೆ ಹಾಗೂ ಕಾಮಗಾರಿ ದೊಡ್ಡ ಸ್ವರೂಪದ್ದಾಗಿದ್ದು ಅದರಲ್ಲಿ ವಿದ್ಯುಚ್ಛಕ್ತಿ ಹಾಗೂ ನೀರಾವರಿಯಂಥ ಎರಡೂ ಅಂಶಗಳೂ ಸೇರಿದ್ದರೆ ಅದು ಒಕ್ಕೂಟ ವಿಷಯವಾಗಿ ಉಳಿಯಬೇಕು. ಇದು ಸದನದ ಪರಿಶೀಲನೆಗೆ ಬಿಟ್ಟ ವಿಷಯ. ಆದ್ದರಿಂದ ನಾನು ಯಾವುದೇ ತಿದ್ದುಪಡಿಯನ್ನು ಮಂಡಿಸಿಲ್ಲ. ಈ ವಿಚಾರವನ್ನು ಸದನವು ಅನುಮೋದಿಸಿದರೆ ಪ್ರಾರೂಪಣಕಾರರು ವಿಧೇಯಕವನ್ನು ಸಿದ್ಧಪಡಿಸುವಾಗ ಈ ಅಂಶವನ್ನು ಸೇರಿಸಬಹುದು.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಒಂದು ಪ್ರಾಂತೀಯ ವಿಷಯದಲ್ಲಿ ಎರಡು ಅಥವಾ ಹೆಚ್ಚು ಘಟಕಗಳ ಪಾತ್ರವಿದ್ದರೆ, ಕಾನೂನು ರಚಿಸುವ ಅಧಿಕಾರವನ್ನು ಒಕ್ಕೂಟ ಶಾಸಕಾಂಗಕ್ಕೆ ನೀಡಿರುವ ಭಾರತ ಸರ್ಕಾರ ಅಧಿನಿಯಮದ ಉಪಬಂಧದ ಮೂಲಕ, ಮೊದಲಿನ ಭಾಷಣಕಾರರು ನಿರೀಕ್ಷಿಸಿದ ತೊಂದರೆಯನ್ನು ನಿವಾರಿಸಬಹುದು. ಈಗಿರುವ ಬಾಬನ್ನು ಬದಲಿಸುವ ಅಗತ್ಯವಿಲ್ಲ ಮತ್ತು ಅದನ್ನು ಪಟ್ಟಿ – ೧ರಲ್ಲಿ ಸೇರಿಸುವ ಅಗತ್ಯವಿಲ್ಲ. ಒಂದು ಘಟಕವು ತನ್ನ ಪರವಾಗಿ ಅಧಿಕಾರ

ಚಲಾಯಿಸಲು ಬಯಸುತ್ತಿರಲಿ ಅಥವಾ ಇಲ್ಲದಿರಲಿ ಒಕ್ಕೂಟ ಶಾಸಕಾಂಗಕ್ಕೆ ಎಲ್ಲ ಅಧಿಕಾರ ನೀಡುವ ಅಗತ್ಯವಿಲ್ಲ. ಇದು ನನ್ನ ಮೊದಲನೆಯ ಅಂಶ.

ಅನಂತರ, ಶ್ರೀ ಮಾಧವರಾವ್ ಮಂಡಿಸಿದ ತಿದ್ದುಪಡಿ ಕುರಿತಂತೆ ಹೇಳುವುದಾದರೆ ಅವರ ಮಾತಿಗೆ ಒಂದು ಅರ್ಥವಿದೆ. ಹೆದ್ದಾರಿಗಳನ್ನು ಕೇಂದ್ರ ಸರ್ಕಾರಕ್ಕೆ ವಹಿಸಿ ಆ ವಿಷಯವನ್ನು ಒಕ್ಕೂಟ ಪಟ್ಟಿಗೆ ಸೇರಿಸಿದರೆ ಹೆದ್ದಾರಿಗಳ ಮೇಲಿನ ಸಂಚಾರ ನಿಯಂತ್ರಣವು ಕೇಂದ್ರದ ವಿಷಯವಾಗುತ್ತದೆ. ಹೆದ್ದಾರಿಗಳು ಹಲವು ಘಟಕಗಳ ಮೂಲಕ ಹಾಯ್ದುಹೋಗುವುದು ಸಹಜ. ಘಟಕಗಳ ಮೂಲಕ ಹಾಯ್ದು ಹೋಗದಿರುವ ಹೆದ್ದಾರಿಯೇ ಇಲ್ಲ. ರಸ್ತೆಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಅದು ಪ್ರಾಂತೀಯ ವಿಷಯ. ಆದ್ದರಿಂದ ರಸ್ತೆ ಸಂಚಾರಕ್ಕೆ ಸಂಬಂಧಿಸಿದಂತೆ ಇದನ್ನು ಪ್ರಾಂತೀಯ ಶಾಸಕಾಂಗದ ಕಾರ್ಯಾಚರಣೆಯ ಪರಿಧಿಯಿಂದ ಹೊರತುಪಡಿಸುವ ಉದ್ದೇಶ ಕೇಂದ್ರಕ್ಕಿದೆಯೇ ಎಂದು ಅವರು ಕೇಳಿರುವುದು ನ್ಯಾಯಯುತವಾಗಿದೆ. ಇದು ಕೇಂದ್ರಕ್ಕೇ ಸೇರಬೇಕಾದ ವಿಷಯ ಎಂಬುದು ನನ್ನ ಅಭಿಪ್ರಾಯ. ಕೆಲವು ಸಂದರ್ಭಗಳಲ್ಲಿ ಈ ರಸ್ತೆಗಳಲ್ಲಿನ ಸಂಚಾರವನ್ನು ಒಕ್ಕೂಟದ ಹಿತದೃಷ್ಟಿಯಿಂದ ನಿಯಂತ್ರಿಸಬಹುದು. ಆದರೆ ಸಾಮಾನ್ಯ ಸ್ವರೂಪದ ಸಂಚಾರವನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡುಬಹುದು. ಕೇಂದ್ರದಲ್ಲಿ ನಮಗೆ ಮೋಟಾರು ವಾಹನಗಳ ಶಾಸನಬದ್ಧ ಕಾನೂನಿನ ಪರಿಚಯವಿದೆ, ಕೇಂದ್ರ ಸರ್ಕಾರವು ಮೋಟಾರು ವಾಹನಗಳ ಅಧಿನಿಯಮವನ್ನು ಅಂಗೀಕರಿಸಿದ್ದು ಅದರಲ್ಲಿ ಪ್ರಾಂತ್ಯಗಳಲ್ಲಿನ ಸಂಚಾರ ಕುರಿತು ವ್ಯವಹರಿಸುವುದಕ್ಕಾಗಿ ಪ್ರಾಂತೀಯ ಸಂಚಾರ ಸಮಿತಿಗಳ ರಚನೆಗೆ ಉಪಬಂಧ ಕಲ್ಪಿಸಲಾಗಿದೆ. ಅಂತೆಯೇ ಹೆದ್ದಾರಿಗಳ ವಿಷಯವನ್ನು ಪಟ್ಟಿ–೧ರಲ್ಲಿ ಸೇರಿಸಿದರೂ. ತುರ್ತುಸಂದರ್ಭಗಳಲ್ಲಿ ಸಂಚಾರ ನಿಯಂತ್ರಣಕ್ಕೆ ಕೆಲವು ಅಧಿಕಾರಗಳನ್ನು ಮೀಸಲಿರಿಸುವ ಉಪಬಂಧ ಕಲ್ಪಿಸಿ, ಸಾಮಾನ್ಯ ಸಂಚಾರ ನಿರ್ವಹಣೆಯನ್ನು ಪ್ರಾಂತ್ಯಗಳಿಗೆ ವಹಿಸಬಹುದು. ಆದ್ದರಿಂದ ಶ್ರೀ ಮಾಧವರಾವ್ ಸೂಚಿಸಿದ ತಿದ್ದುಪಡಿ ಅಗತ್ಯವಿಲ್ಲ. ಈಗಿರುವ ಬಾಬನ್ನು ಹೀಗೇ ಉಳಿಸಬಹುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರು ನೀಡಿದ ಕಾರಣಗಳಿಗಾಗಿ "ಜಲಮಾರ್ಗಗಳನ್ನು" ೩೦ನೇ ಬಾಬಿನಿಂದ ಕೈಬಿಡಬೇಕೆಂಬ ಅವರ ಸೂಚನೆಯನ್ನು ನಾನು ಒಪ್ಪುತ್ತೇನೆ. ನಾವು ಅದನ್ನು ಅಲ್ಲೇ ಉಳಿಸಿಕೊಂಡರೆ, ಪಟ್ಟಿಯಲ್ಲಿಯ ಇತರ ಬಾಬುಗಳಲ್ಲಿರುವ, ಜಲಮಾರ್ಗಗಳ ವಿಷಯ ಹಾಗಿರಲಿ, ೩೦ ಹಾಗೂ ೩೧ನೇ ಬಾಬುಗಳು ತುಸುಮಟ್ಟಿಗೆ ಒಂದರ ಮೇಲೊಂದು ಎಂದಂತಾಗುತ್ತದೆ. ಅವರು ಪ್ರಸ್ತಾವಿಸಿದ ತಿದ್ದುಪಡಿ ಮೂಲದಲ್ಲಿ "ಒಕ್ಕೂಟ ಕಾನೂನು, ಹೆದ್ದಾರಿಗಳಾಗಿರಬೇಕೆಂದು ಘೋಷಿಸಿದ ಅಂಥ ಹೆದ್ದಾರಿಗಳು" ಎಂದಿತ್ತು. ಮತ್ತು ಶ್ರೀ ಪಾಟಸ್ಕರ್ ಅವರು "ಒಕ್ಕೂಟ ಹೆದ್ದಾರಿಗಳು ಮತ್ತು ಜಲಮಾರ್ಗಗಳು" ಎಂಬ ಪದಗಳಿಗೆ "ರಾಷ್ಟ್ರೀಯ ಹೆದ್ದಾರಿಗಳು ಮತ್ತು ಜಲಮಾರ್ಗಗಳು" ಎಂಬ ಪದಗಳನ್ನು ಪ್ರತಿಯೋಜಿಸಬೇಕೆಂದು ತಿದ್ದುಪಡಿಯನ್ನು ಮಂಡಿಸಿದರು. "ಜಲಮಾರ್ಗಗಳು" ಎಂಬುದನ್ನು ಈ ಬಾಬಿನಿಂದ ಕೈಬಿಡುತ್ತೇವೆಂದು ನಾನು ಈಗಾಗಲೇ ತಿಳಿಸಿದ್ದೇನೆ. ಈ ಬಾಬು ಮುಂದಿನಂತೆ ಎಂದರೆ :

"ಒಕ್ಕೂಟ ಕಾನೂನು ರಾಷ್ಟ್ರೀಯ ಹೆದ್ದಾರಿಗಳಾಗಿರಬೇಕೆಂದು ಘೋಷಿಸಿದ ಅಂಥವು."

ಎಂದಾದರೆ ಇಬ್ಬರೂ ಸದಸ್ಯರ ಅಭಿಪ್ರಾಯಗಳನ್ನು ಪರಿಗಣಿಸಿದಂತಾಗುತ್ತದೆ ಎಂದು ನನ್ನ ಭಾವನೆ. ಈ ಸಣ್ಣ ತಿದ್ದುಪಡಿಯನ್ನು ಸದನವು ಒಪ್ಪಿದರೆ ನಾವು ಮುಂದುವರಿಯಬಹುದು.

ಅನಂತರದ ತಿದ್ದುಪಡಿಯನ್ನು ಶ್ರೀ ಮಾಧವರಾವ್ ಅವರು ಮಂಡಿಸಿದರು. ಘಟಕಗಳೊಂದಿಗೆ ಮುಂಚಿತವಾಗಿ ಸಮಾಲೋಚಿಸದೆ ಯಾವ ಹೆದ್ದಾರಿಗಳನ್ನೂ ರಾಷ್ಟ್ರೀಯ ಹೆದ್ದಾರಿಗಳೆಂದು ಘೋಷಿಸಲಾಗದು ಎಂದು ಅವರೇ ಒಪ್ಪಿದರು. ಇದು ಆಡಳಿತಾತ್ಮಕ ಕ್ರಮದ ವಿಷಯವಾಗಿರುವುದರಿಂದ ಅವರು ೩೦ನೇ ಬಾಬಿಗೆ ಸೂಚಿಸಿದ ಪದಗಳ ಸೇರ್ಪಡೆ ಅಗತ್ಯವಿಲ್ಲ ಎಂಬುದು ನನ್ನ ಅನಿಸಿಕೆ. ಬಾಬು ಈಗ ಇರುವಂತೆ, ಅದರ ಅರ್ಥದ ಬಗ್ಗೆ ಅವರು ಸ್ವಲ್ಪ ಸ್ಪಷ್ಟೀಕರಣವನ್ನು ಬಯಸಿದರು. ಎಂದರೆ ರಸ್ತೆಗಳ ಸಂಚಾರ ನಿಯಂತ್ರಣಕ್ಕಾಗಿ

ಒಕ್ಕೂಟ ಶಾಸಕಾಂಗವು ತೆಗೆದುಕೊಳ್ಳುತ್ತಿರುವ ಅಧಿಕಾರವು ಇದರಲ್ಲಿ ಸೇರುತ್ತದೆಯೇ ಎಂಬುದು ಅವರ ಪ್ರಶ್ನೆ. ಬಾಬು ಈಗ ಇರುವಂತೆ ಪ್ರಾಥಮಿಕವಾಗಿ ಅದರಲ್ಲಿ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಹಾಗೂ ನಿರ್ವಹಣೆಯ ಬಗ್ಗೆ ತಿಳಿಸಲಾಗಿದೆ. ತದನಂತರದ ಸಂಚಾರ ನಿಯಂತ್ರಣದ ಪ್ರಶ್ನೆ ಬಂದರೆ, ಆ ಬಗ್ಗೆ ಕೇಂದ್ರಕ್ಕೆ ನಾವು ಯಾವುದೇ ನಿರ್ದಿಷ್ಟ ಅಧಿಕಾರವನ್ನು ನೀಡಿಲ್ಲ. ಸಂಪರ್ಕದ ಇತರ ಪ್ರಕಾರಗಳಾದ ಜಲಮಾರ್ಗ, ರೈಲುಮಾರ್ಗ ಹಾಗೂ ವಾಯುಮಾರ್ಗಗಳ ಸಂಬಂಧದಲ್ಲಿ ಪ್ರಯಾಣಿಕರ ಸಾಗಣೆಯನ್ನು ನಿಯಂತ್ರಿಸುವ ಅಧಿಕಾರವನ್ನು ಕೇಂದ್ರ ತೆಗೆದುಕೊಳ್ಳುವ ಬಗ್ಗೆ ಈ ಪಟ್ಟಿಯಲ್ಲಿ ನಿರ್ದಿಷ್ಟವಾಗಿ ಉಪಬಂಧ ಕಲ್ಪಿಸಿದ್ದೇವೆ. ಇಲ್ಲಿ ಅಂಥ ಯಾವುದೇ ಉಪಬಂಧವಿಲ್ಲ. ಆದ್ದರಿಂದ ಅವರಿಗೆ ನನ್ನ ಸಲಹೆ-ಘಟಕವು ಹೊಂದಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಚಾರ ನಿಯಂತ್ರಣದ ಅಧಿಕಾರದಿಂದ ವಂಚಿತವಾಗುವುದಿಲ್ಲ.

ನನ್ನ ಗೌರವಾನ್ವಿತ ಮಿತ್ರ ಶ್ರೀ ಹುಸೇನ್ ಇಮಾಮ್ ತಿಳಿಸಿದ ವಿಷಯದ ಬಗ್ಗೆ ಉಲ್ಲೇಖಿಸುತ್ತಿದ್ದೇನೆ. ಅವರು ಜಲಮಾರ್ಗಗಳ ಬಗ್ಗೆ ತಿಳಿಸಿದರು. ಆದರೆ ನಾವು ಈ ಬಾಬಿನಿಂದ ಜಲಮಾರ್ಗಗಳನ್ನು ಬಿಡಲು ಉದ್ದೇಶಿಸಿದ್ದೇವೆ. ಇದಲ್ಲದೆ ಅವರು ಹೇಳಿದ ಅಂಶಗಳನ್ನಾಧರಿಸಿ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು ವಾದ ಮಾಡುತ್ತ, ಒಂದೇ ಜಲಮಾರ್ಗಕ್ಕೆ ಸಂಬಂಧಪಟ್ಟ ಎರಡು ಘಟಕಗಳು ತತ್ಸಂಬಂಧದಲ್ಲಿ ಕಾನೂನು ರಚಿಸಿ ಅದನ್ನು ಕ್ರಮಬದ್ಧಗೊಳಿಸಲು ಹಾಗೂ ನಿಯಂತ್ರಿಸಲು ಕೇಂದ್ರವನ್ನು ಹೇರುವ ಬಗ್ಗೆ ಸಂವಿಧಾನದಲ್ಲಿ ಉಪಬಂಧ ಕಲ್ಪಿಸಲಾಗುವುದೆಂದು ತಿಳಿಸಿದ್ದಾರೆ. ಅಂಥ ಉಪಬಂಧವನ್ನು ಖಂಡಿತ ಕಲ್ಪಿಸಲಾಗುವುದಲ್ಲದೆ ನಾನು ಒಕ್ಕೂಟ ಪಟ್ಟಿಯ ೮೩ನೇ ಬಾಬಿನ ಬಗ್ಗೆ ಶ್ರೀ ಹುಸೇನ್ ಇಮಾಮ್ ಅವರಿಗೆ ತಿಳಿಸಬಯಸುತ್ತೇನೆ. ಅದರಲ್ಲಿ ಪ್ರವಾಹ ನಿಯಂತ್ರಣದ ಉದ್ದೇಶಕ್ಕಾಗಿ ನೀರಾವರಿ, ನೌಕಾಯಾನ ಹಾಗೂ ಜಲವಿದ್ಯುಚ್ಛಕ್ತಿಗಾಗಿ ಅಂತರ್-ಘಟಕ ಜಲಮಾರ್ಗಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ತಿಳಿಸಲಾಗಿದೆ. ಇದರಿಂದ ಅವರಿಗೆ ಸಂಪೂರ್ಣ ತೃಪ್ತಿಯಾಗಿರಬೇಕು.

**ಶ್ರೀ ಎಂ. ಅನಂತಶಯನಮ್ ಅಯ್ಯಂಗಾರ್** : ನಾನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರನ್ನು ಒಂದು ಪ್ರಶ್ನೆ ಕೇಳಬಹುದೇ? ಯಾವುದೇ ಇತರ ಪರಿಮಿತಿಗಳಿಲ್ಲದೆ "ರಾಷ್ಟ್ರೀಯ ಹೆದ್ದಾರಿಗಳು" ಎಂದರೆ ಕೇವಲ ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಹಾಗೂ ನಿರ್ವಹಣೆ ಎಂದು ತಿಳಿಸುತ್ತ ಅವರು ೩೧ನೇ ಬಾಬಿನಲ್ಲಿ "ಅಂಥ ಜಲಮಾರ್ಗಗಳ ಮೇಲೆ ಪ್ರಯಾಣಿಕರು ಹಾಗೂ ಸರಕುಗಳ ಸಾಗಣೆಗೆ ಉಪಬಂಧ ಕಲ್ಪಿಸಲಾಗಿದೆ" ಎಂದರು. ಅವರ ಪ್ರಕಾರ ಇವು, ಕೇಂದ್ರಕ್ಕೆ ಪ್ರದತ್ತವಾದ ಅಧಿಕಾರಗಳಿಂದ ನಿರ್ಬಂಧಿತವಾಗಿಲ್ಲ ಅದಿಲ್ಲದೆ ಕೇಂದ್ರಕ್ಕೆ ಅಂಥ ಅಧಿಕಾರವಿಲ್ಲ. ಇದು ಕೇಂದ್ರದ ಅಧಿಕಾರಗಳನ್ನು ನಿರ್ಬಂಧಿಸಿದಂತಾಗುವುದಿಲ್ಲವೇ? ಹಾಗಿದ್ದರೆ, ಶ್ರೀ ಮಾಧವರಾವ್ ಅವರ ತಿದ್ದುಪಡಿಯನ್ನು ಒಂದು ರೀತಿಯಲ್ಲಿ ಅಂಗೀಕರಿಸುವುದು ಅಗತ್ಯವಲ್ಲವೇ?

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ನನ್ನ ಉತ್ತರ ಹೀಗಿದೆ. ನಾನು ಯೋಚನೆ ಮಾಡಿಯೇ ನನ್ನ ಅಭಿಪ್ರಾಯ ತಿಳಿಸಿದ್ದೆ. ಕಾನೂನು ಅಂಶದ ದೃಷ್ಟಿಯಿಂದ ನಾನು ಬಹಳ ಎಚ್ಚರವಹಿಸಿದ್ದೆ. ಈ ಬಾಬಿನಲ್ಲಿ ಹೆದ್ದಾರಿಗಳು ಎಂಬುದರಲ್ಲಿ ಸಂಚಾರ ಕುರಿತಂತೆಯೂ ವಿನಿಯಮಗಳನ್ನು ರಚಿಸುವ ಅಧಿಕಾರ ಸೇರುತ್ತದೆ. ಕೇಂದ್ರಕ್ಕೆ ಆ ಅಧಿಕಾರವಿರುವುದಿಲ್ಲ ಎಂಬ ಮಾತನ್ನು ನಾನು ನನ್ನ ಅಭಿಪ್ರಾಯದಲ್ಲಿ ತಿಳಿಸಿಲ್ಲ. ನಾನು ತಿಳಿಸಲು ಉದ್ದೇಶಿಸಿದ್ದು ಕೇಂದ್ರಕ್ಕೆ ನಾವು ಪೂರ್ಣ ಅಧಿಕಾರ ನೀಡುವುದಿಲ್ಲ ಎಂಬ ಅಂಶ. ಎಂದರೆ ರಾಷ್ಟ್ರೀಯ ಹೆದ್ದಾರಿಗಳ ಮೇಲೆಯೂ ಸಂಚಾರವನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ ಈ ಪಟ್ಟಿಯಲ್ಲಿ ಈ ಬಾಬನ್ನು ಸೇರಿಸಲಾಗಿದೆ ಎಂದು ಅರ್ಥ. ಬಾಬನ್ನು ಈಗಿರುವಂತೆ ಬಿಟ್ಟರೂ ಘಟಕಗಳಿಗಿರುವ ಅವು ತಮಗೆ ಬೇಕಾದಂತೆ ವಿನಿಯಮಗಳನ್ನು ಮಾಡುವ ಅಧಿಕಾರವನ್ನು ಕಿತ್ತುಕೊಂಡಿಲ್ಲ ಎಂದು ನಾನು ಶ್ರೀ ಮಾಧವರಾವ್ ಅವರಿಗೆ ತಿಳಿಸಿದೆ. ಈ ಬಾಬುಗಳಲ್ಲಿರುವುದರ ಬಗ್ಗೆ ನಾನು ಹೇಳಿದ್ದನ್ನು ಕೆಲಮಟ್ಟಿಗೆ ಸೂಕ್ಷ್ಮವಾಗಿ ಅರ್ಥೈಸಲಾಗಿದೆ. ಆದರೆ ನಾನು ಹೇಳಿದ್ದರ ತಾತ್ಪರ್ಯ ಅರ್ಥವಾಗಿದೆ ಎಂದು ಭಾವಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಹಾಗೂ ಶ್ರೀ ಪಾಟಸ್ಕರ್ ಮಂಡಿಸಿದ ತಿದ್ದುಪಡಿಗಳನ್ನು ಒಪ್ಪಿದ್ದಾರೆ. ಅವು ಹೇಗಿರಬೇಕು ಎಂದು ಅವರು ಉದ್ದೇಶಿಸಿದ್ದರೋ ಅದೇ ರೀತಿಯಲ್ಲಿ ಎರಡೂ ತಿದ್ದುಪಡಿಗಳನ್ನು ಇರಿಸುತ್ತೇನೆ, ಎಂದರೆ :

೩೦ನೇ ಬಾಬಿಗೆ ಮುಂದಿನದನ್ನು ಬದಲಿಸುವುದು :

"ಒಕ್ಕೂಟ ಕಾನೂನು ರಾಷ್ಟ್ರೀಯ ಹೆದ್ದಾರಿಗಳಾಗಿರಬೇಕೆಂದು ಘೋಷಿಸಿದ ಅಂತಾರಾಷ್ಟ್ರೀಯ ಹೆದ್ದಾರಿಗಳು"

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಮಾಧವರಾವ್ ಅವರ ತಿದ್ದುಪಡಿ ಇದೆ.

**ಶ್ರೀ ಮಾಧವರಾವ್** : ಮಾನ್ಯರೆ, ನಾನು ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ಮಾಧವರಾವ್ ತಮ್ಮ ತಿದ್ದುಪಡಿಯನ್ನು ಹಿಂಪಡೆದಿದ್ದಾರೆ.

ಸದನವು ಅವರಿಗೆ ತಿದ್ದುಪಡಿ ಹಿಂಪಡೆಯಲು ಅನುಮತಿ ನೀಡಲೆಂದು ಆಶಿಸುತ್ತೇನೆ.

ಸಭೆಯ ಅನುಮತಿ ಪಡೆದು ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಮರುರೂಪ ಪಡೆದ ಬಾಬನ್ನು ಈಗ ಮತಕ್ಕೆ ಹಾಕುತ್ತೇನೆ. ಎಂದರೆ :

"೩೦ ಒಕ್ಕೂಟ ಕಾನೂನು ರಾಷ್ಟ್ರೀಯ ಹೆದ್ದಾರಿಗಳಾಗಬೇಕೆಂದು ಘೋಷಿಸುವ ಅಂತಾರಾಷ್ಟ್ರೀಯ ಹೆದ್ದಾರಿಗಳು."

ಈ ಪ್ರಸ್ತಾವವನ್ನು ಅಂಗೀಕರಿಸಲಾಯಿತು.

## ಬಾಬು – ೩೧

**ಮಾನ್ಯ ಸಭಾಧ್ಯಕ್ಷರು** : ಬಾಬು ೩೧, ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರಿಂದ ಒಂದು ತಿದ್ದುಪಡಿ ಇದೆ.

**ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್** : ಮಾನ್ಯರೆ, ೩೦ನೇ ಬಾಬಿನಂತೆಯೇ ೩೧ನೇ ಬಾಬನ್ನು ಈ ಬದಲಾಣೆಯೊಂದಿಗೆ ಉಳಿಸಿಕೊಳ್ಳಬೇಕು. ನಾನು ೩೧ನೇ ಬಾಬಿನಲ್ಲಿ 'ಒಕ್ಕೂಟ ಸರ್ಕಾರ' ಎಂಬ ಪದಗಳಿಗೆ 'ಒಕ್ಕೂಟ ಕಾನೂನು' ಎಂಬ ಪದಗಳನ್ನು ಬದಲಿಸಲು ಸೂಚಿಸುತ್ತೇನೆ. ತಿದ್ದುಪಡಿ ಅನಂತರ ಬಾಬಿನ ಪಾಠ ಮುಂದಿನಂತಿರುತ್ತದೆ.

"ಯಂತ್ರಚಾಲಿತ ನೌಕೆಗಳ ಸಂಬಂಧದಲ್ಲಿ ಒಕ್ಕೂಟ ಕಾನೂನಿನ ಮೂಲಕ ಒಕ್ಕೂಟ ಜಲಮಾರ್ಗಗಳಾಗಿರಬೇಕೆಂದು ಘೋಷಿಸಲಾದ ಒಳನಾಡು ಜಲಮಾರ್ಗಗಳ ಮೇಲೆ ಹಡಗುಸಾಗಣೆ ಮತ್ತು ನೌಕಾಯಾನ, ಅಂತರ್‌ಜಲಮಾರ್ಗಗಳ ಮೇಲಿನ ಮಾರ್ಗನಿಯಮ, ಮುಂತಾದವು."

ಇದರಿಂದ ೩೧ನೇ ಬಾಬು ೩೦ನೇ ಬಾಬಿನಂತೆ ಆಗುತ್ತದೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯ ಸಭಾಧ್ಯಕ್ಷರೆ, ನನ್ನ ಹೆಸರಿನಲ್ಲಿರುವ ತಿದ್ದುಪಡಿ ಇದರ ಬದಲಿ ರೂಪದಲ್ಲಿದೆ. ೧ನೇ ಭಾಗವನ್ನು ಮಂಡಿಸಲು ನಾನು ಬಯಸುವುದಿಲ್ಲ. ನಾನು ಕೇವಲ ಬದಲಿ ಭಾಗವನ್ನು ಎತ್ತಿಕೊಳ್ಳಲು ಬಯಸುತ್ತೇನೆ ಈ ಭಾಗವು ಎರಡು ಭಾಗಗಳಲ್ಲಿದೆ. ನಾನು ಈ ಬಗ್ಗೆ ಸೂಚನೆಯನ್ನು ಎರಡು ಪ್ರತ್ಯೇಕ ಭಾಗಗಳಲ್ಲಿ ನೀಡಿದ್ದರೂ ಅವರು ಒಟ್ಟಿಗೇ ಮುದ್ರಿಸಿದ್ದಾರೆ. ನಾನು ಬದಲಿ ತಿದ್ದುಪಡಿಯ ಕೊನೆಯ ಭಾಗವನ್ನು ಮಂಡಿಸಲು ಬಯಸುತ್ತೇನೆ, ನಾನು ಮಂಡಿಸಲು ಬಯಸುವ ಭಾಗ ಮುಂದಿನಂತಿದೆ :

"೩೧ನೇ ಬಾಬಿನಲ್ಲಿ 'ಅಂತರ್‌ಜಲಮಾರ್ಗಗಳ ಮೇಲೆ' ಎಂಬ ಪದಗಳಿಗೆ 'ಅಂತರ್‌ಜಲಮಾರ್ಗಗಳಲ್ಲಿ' ಎಂಬ ಪದಗಳನ್ನು ಬದಲಿಸುವುದು."

ಮಾನ್ಯರೆ, ಇದು ಕೇವಲ ಪ್ರಾರೂಪಣೆಯಲ್ಲಿನ ತಿದ್ದುಪಡಿ. ಭೂಮಾರ್ಗಗಳ ಬಗ್ಗೆ ಹೇಳುವಾಗ "ಅಂಥ ಭೂಮಾರ್ಗಗಳ ಮೇಲೆ" ಎಂದು ಜಲಮಾರ್ಗಗಳನ್ನು ಕುರಿತು ಹೇಳುವಾಗ "ಅಂಥ ಜಲಮಾರ್ಗಗಳಲ್ಲಿ"

ಎಂದಿರಬೇಕು ಎಂದು ನನ್ನ ಭಾವನೆ. ರಸ್ತೆ ಪ್ರಯಾಣದಲ್ಲಿ ನೀವು ರಸ್ತೆ ಮೇಲೆ ಚಲಿಸುತ್ತೀರಿ, ಆದರೆ ಜಲಮಾರ್ಗಗಳಲ್ಲಿ ಹೋಗುವಾಗ ದೋಣಿಗಳು ಭಾಗಶಃ ಭೂಭಾಗದ ಕೆಳಗೆ ಹೋಗುತ್ತವೆ. ವಿಷಯದ ಬಗ್ಗೆ ನನಗೆ ಈ ಅಭಿಪ್ರಾಯವಿದೆ. ನಾನು ಹೇಳಿರುವಂತೆ ಇದು ಪ್ರಾರೂಪಣ ತಿದ್ದುಪಡಿ, ಮಂಡನೆಕಾರರು ಇದನ್ನು ಒಪ್ಪುವ ಬಗ್ಗೆ ಪರಿಶೀಲಿಸಬಹುದು.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ೩೧ನೇ ಬಾಬಿನಲ್ಲಿ "ಒಕ್ಕೂಟ ಸರ್ಕಾರ" ಎಂಬ ಪದಗಳಿಗೆ "ಒಕ್ಕೂಟ ಕಾನೂನು" ಎಂಬ ಪದಗಳನ್ನು ಪ್ರತಿಯೋಜಿಸುವ ಅಲ್ಲಾದಿಯವರ ತಿದ್ದುಪಡಿಯನ್ನು ನಾನು ಒಪ್ಪುತ್ತೇನೆ.

ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿಯ ಬಗ್ಗೆ ಹೇಳುವುದಾದರೆ ಇದು ಸರಿಯಾದ ಇಂಗ್ಲಿಷ್ ಬಳಕೆಗೆ ಸಂಬಂಧಿಸಿದೆ. ಒಟ್ಟಿನಲ್ಲಿ ಇದು ಚಲನೆಗೆ ಸಂಬಂಧಿಸಿದ ವಿಷಯ. ನಾವು ರಸ್ತೆ ಮೇಲೆ ಚಲಿಸುತ್ತೇವೆ ಎಂಬುದು ಒಪ್ಪಿರುವ ವಿಷಯ. ನಾವು ನೀರಿನಲ್ಲಿ ಚಲಿಸುತ್ತೇವೆ ಎಂದು ಹೇಳುವುದು ಸರಿಯಾದ ಬಳಕೆಯೇ ನನಗೆ ಗೊತ್ತಿಲ್ಲ. ಅದು ತಪ್ಪಿರಲಾರದು, ನಾನು ತಿದ್ದುಪಡಿಯನ್ನು ನೇರವಾಗಿ ಒಪ್ಪಿದೆ. ಆದರೂ ನಾನು ಪ್ರಾರೂಪಣಕಾರರಿಗೆ, ಮೇಲೆ ಮತ್ತು ಒಳಗೆ – ಇವೆರಡೂ ಯಾವುದಿರಬೇಕೆಂದು ಎಚ್ಚರಿಕೆಯಿಂದ ಪರೀಕ್ಷಿಸಬೇಕೆಂದು ಹೇಳುತ್ತೇನೆ.

**ಶ್ರೀ ಆರ್.ವಿ. ಧುಳೇಕರ್** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : *[ಮಾನ್ಯ ಸಭಾಧ್ಯಕ್ಷರೆ, ಶ್ರೀ ನಜಿರುದ್ದೀನ್ ಅಹ್ಮದ್ ಅವರ 'ಮೇಲೆ' ಅಥವಾ 'ಒಳಗೆ' ಪದಪ್ರಯೋಗದ ಕುರಿತ ತಿದ್ದುಪಡಿ ಸರಿಯಿಲ್ಲ ಇಂಗ್ಲಿಷ್ ಜನ ಅದನ್ನು ನಿರ್ಧರಿಸಬಲ್ಲರು ಮತ್ತು ತಮಗೆ ಇಷ್ಟಬಂದಂತೆ ಮಾಡಬಲ್ಲರು, ಸಂವಿಧಾನವನ್ನು ಹಿಂದಿಯಲ್ಲಿ ಪ್ರಾರೂಪಿಸುವುದರಿಂದ ಇಂಥ ಚರ್ಚೆಗಳ ಅಗತ್ಯವಿಲ್ಲ.]*

**ಮಾನ್ಯ ಸಭಾಧ್ಯಕ್ಷರು :** *[ಹಿಂದಿ ಇರುವಾಗ ಆ ಬಗ್ಗೆ ನೋಡೋಣ]*

**ಮಾನ್ಯ ಸಭಾಧ್ಯಕ್ಷರು :** ಮೊದಲನೇ ತಿದ್ದುಪಡಿ ಶ್ರೀ ಅಲ್ಲಾದಿ ಕೃಷ್ಣಸ್ವಾಮಿ ಅಯ್ಯರ್ ಅವರಿಂದ ಆಗಿದ್ದು, ಅದನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಒಪ್ಪಿದ್ದಾರೆ. ಸದನವು ಇದನ್ನು ಒಪ್ಪುತ್ತದೆ ಎಂದು ಭಾವಿಸುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಶ್ರೀ ನಜಿರುದ್ದೀನ್ ಅಹ್ಮದ್ :** ನಾನು ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಎರಡನೇ ತಿದ್ದುಪಡಿ ಶ್ರೀ ನಜಿರುದ್ದೀನ್ ಅಹ್ಮದ್ ಅವರದಾಗಿದ್ದು ಸದನವು ಅದನ್ನು ಹಿಂಪಡೆಯುವುದಕ್ಕೆ ಒಪ್ಪುವುದೆಂದು ನಂಬುತ್ತೇನೆ.

ತಿದ್ದುಪಡಿಯನ್ನು ಸಭೆಯ ಅನುಮತಿಯಿಂದ ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಬಾಬನ್ನು ನಾನು ಮತಕ್ಕೆ ಹಾಕುತ್ತೇನೆ.

ಬಾಬು ೩೧ ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಬಾಬು – ೩೨.

**ಮಾನ್ಯ ಸಭಾಧ್ಯಕ್ಷರು :** ನಾವೀಗ ೩೨ನೇ ಬಾಬನ್ನು ಕೈಗೆತ್ತಿಕೊಳ್ಳೋಣ.

**ಸರ್ ವಿ.ಟಿ. ಕೃಷ್ಣಮಾಚಾರಿ** (ಜೈಪುರ್ ರಾಜ್ಯ) : ನಾನು ಅದನ್ನು ಮಂಡಿಸುವುದಿಲ್ಲ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ :

"೩೨ನೇ ಬಾಬಿನ(ಬಿ) ಕಂಡಿಕೆಯಲ್ಲಿ 'ಪ್ರಸಾರ' ಎಂಬುದನ್ನು ಬಿಟ್ಟುಬಿಡುವುದು ಮತ್ತು ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು. 'ಒಕ್ಕೂಟ ಪ್ರಸಾರ ಮತ್ತು ಪ್ರಸಾರ ಕಾನೂನು ಮತ್ತು ನಿಯಂತ್ರಣ'."

೩೨ನೇ ತಿದ್ದುಪಡಿಯನ್ನು ಮಂಡಿಸಲಾಗುವುದೆಂದು ನಾನು ನಿರೀಕ್ಷಿಸಿದ್ದೆ ಮತ್ತು ಅದನ್ನು ಮಂಡಿಸಿದ್ದರೆ ನಾನು ಬೆಂಬಲಿಸುತ್ತಿದ್ದೆ. ಈ ಬಾಬು ಈಗ ಇರುವಂತೆ ಅದರಲ್ಲೂ, ಒಕ್ಕೂಟದ ಒಡೆತನಕ್ಕೆ ಒಳಪಟ್ಟಿರಲಿ ಅಥವಾ ಇಲ್ಲದಿರಲಿ, ದೂರವಾಣಿ, ನಿಸ್ತಂತು, ಪ್ರಸಾರ ಮತ್ತು ಸಂಪರ್ಕದ ಇತರ ಪ್ರಕಾರಗಳ ಕಾನೂನು ರಚನೆ, ಒಡೆತನ, ನಿಯಂತ್ರಣವನ್ನು ಕೇಂದ್ರದ ನಿಯಂತ್ರಣಕ್ಕೆ ನೀಡಲಾಗಿದೆ. ಈ ಸಂಪರ್ಕಗಳ ಕಾನೂನು ಹಾಗೂ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಖಂಡಿತವಾಗಿಯೂ ಅದು ಕೇಂದ್ರದ ಅಧಿಕಾರಕ್ಕೆ ಒಳಪಟ್ಟಿರಬೇಕು. ಅದಕ್ಕೆ ಪೂರಕವಾಗಿ ಘಟಕಗಳು ಈ ಸಂಪರ್ಕ ಪ್ರಕಾರಗಳನ್ನು ಹೊಂದಿರಬೇಕೇ ಎಂಬ ಅಂಶವನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಇಂಥ ದೊಡ್ಡ ದೇಶದಲ್ಲಿ ಹಲವಾರು ರೀತಿಯ ತೊಂದರೆಗಳು, ವಿವಿಧ ಭಾಷೆಗಳು ಇರುವಾಗ ಬಿಗಿಧೋರಣೆ ಸಾಧ್ಯವಿಲ್ಲ. ಆದರೆ ಕಡೇಪಕ್ಷ ಪ್ರಸಾರ ಮಾಧ್ಯಮಕ್ಕೆ ಸಂಬಂಧಿಸಿದಂತೆ ಪ್ರತಿಯೊಂದು ಭಾಷಿಕ ಘಟಕವು ಕೇಂದ್ರದ ಕಾನೂನು ಹಾಗೂ ಕ್ರಮಬದ್ಧಗೊಳಿಸಬೇಕಾದ ಇತರ ವಿಷಯಗಳ ಬಗ್ಗೆ ಕೇಂದ್ರದ ನಿಯಂತ್ರಣಕ್ಕೊಳಪಟ್ಟು ತನ್ನದೇ ಪ್ರಸಾರವ್ಯವಸ್ಥೆಯನ್ನು ಹೊಂದಿರಲು ಅನುಮತಿ ಇರಬೇಕು. ದೂರವಾಣಿ ಹಾಗೂ ಇತರ ಸಂಪರ್ಕ ವಿಷಯಗಳನ್ನು ಪ್ರಸ್ತಾವಿಸಲಾಗಿತ್ತು. ಆದರೆ ಆ ತಿದ್ದುಪಡಿಗಳನ್ನು ಮಂಡಿಸಲಿಲ್ಲ. ಕನಿಷ್ಠಪಕ್ಷ ಪ್ರಸಾರ ವಿಷಯವಾದರೂ ಬರಲಿ ಎಂದು ನಾನು ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ, ಮಾನ್ಯರೆ, ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಶ್ರೀ ಎ.ಪಿ. ಪಟ್ಟಾಣಿ :** (ಪಶ್ಚಿಮ ಭಾರತ ರಾಜ್ಯಗಳ ಸಮೂಹ ೪) : ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸುವ ತಿದ್ದುಪಡಿಯ ಪಾಠ ಇಂತಿದೆ :

"೩೨ನೇ ಬಾಬಿನ(ಬಿ) ಕಂಡಿಕೆಗೆ ಮುಂದಿನದನ್ನು ಬದಲಿಸುವುದು:

'ಒಕ್ಕೂಟದ ಒಡೆತನಕ್ಕೊಳಪಟ್ಟಿರುವ ದೂರವಾಣಿ, ನಿಸ್ತಂತು, ಪ್ರಸಾರ ಮತ್ತು ಅಂಥ ಇತರ ಸಂಪರ್ಕ ಪ್ರಕಾರಗಳು, ಪ್ರಾಂತ್ಯಗಳು ಅಥವಾ ರಾಜ್ಯಗಳ ಒಡೆತನಕ್ಕೊಳಪಟ್ಟಿರುವ ಅಂಥವೇ ಸಂಪರ್ಕ ಪ್ರಕಾರಗಳ ನಿಯಂತ್ರಣ'."

ಮಾನ್ಯರೆ, ರಾಜ್ಯಗಳು ರಕ್ಷಣೆ, ಸಂಪರ್ಕ ಹಾಗೂ ವಿದೇಶ ವ್ಯವಹಾರ ಈ ಮೂರು ವಿಷಯಗಳಲ್ಲಿ ಕೇಂದ್ರದೊಂದಿಗೆ ಸೇರಲು ಒಪ್ಪಿವೆ. ನನ್ನ ಅರ್ಥವಿವರಣೆ ಸರಿಯಿದ್ದರೆ ಅವು ಈ ವಿಷಯಗಳಲ್ಲಿ ಕೇಂದ್ರದೊಂದಿಗೆ ಸಹಕರಿಸಲು ಮನಃಪೂರ್ವಕವಾಗಿ ಸಿದ್ಧವಾಗಿವೆ.

ಅಗತ್ಯಕ್ಕಿಂತ ಹೆಚ್ಚಿನ ಷರತ್ತುಗಳನ್ನು ಹಾಕುವುದಿಲ್ಲ. ರಕ್ಷಣೆ ಹಾಗೂ ಸಂಪರ್ಕ, ಸ್ವತಂತ್ರ ವಿಷಯಗಳು, ಸರಿಯಾದ ಸಂಪರ್ಕಗಳಿದ್ದರೆ ಮಾತ್ರ ರಕ್ಷಣೆ ಸಾಧ್ಯವಾಗುತ್ತದೆ. ಆದ್ದರಿಂದ ನನ್ನ ತಿದ್ದುಪಡಿಯಲ್ಲಿ ಕೇಂದ್ರದ ಅಧಿಕಾರಿಗಳನ್ನು ನಿರ್ಬಂಧಿಸಲು ಬಯಸುವುದಿಲ್ಲ. ನನ್ನ ಸಲಹೆ ಏನೆಂದರೆ ಒಕ್ಕೂಟದ ದೂರವಾಣಿ, ನಿಸ್ತಂತು, ಪ್ರಸಾರ ಮುಂತಾದವುಗಳು ಹಾಗೂ ಪ್ರಾಂತ್ಯ ಹಾಗೂ ರಾಜ್ಯಗಳ ಒಡೆತನದಲ್ಲಿರುವ ಅಂಥವೇ ಇತರ ಸಂಪರ್ಕ ಪ್ರಕಾರಗಳಲ್ಲಿಯೂ ಭೇದವಿರಬೇಕು. ಎರಡನೆಯದನ್ನು ಒಕ್ಕೂಟ ನಿಯಂತ್ರಿಸಬೇಕು. ನಾನು ಎರಡರ ಒಡೆತನದಲ್ಲಿ ವ್ಯತ್ಯಾಸಮಾಡಲು ಬಯಸುತ್ತೇನೆ. ಅಷ್ಟೆ. ನಾನು ತಿದ್ದುಪಡಿಯನ್ನು ಮಂಡಿಸುತ್ತೇನೆ.

**ಶ್ರೀ ಎನ್. ಮಾಧವರಾವ್ :** ಮಾನ್ಯ ಸಭಾಧ್ಯಕ್ಷರೆ, ಈ ಬಾಬಿನ ಸರಿಯಾದ ಪ್ರಾರೂಪಣೆಗೆ ಕೊಡುಗೆ ಸಲ್ಲಿಸುವುದಕ್ಕಿಂತ ಮಾಹಿತಿಯನ್ನು ಕೊಡಲು ನಾನು ಈ ತಿದ್ದುಪಡಿಗಳನ್ನು ಮಂಡಿಸುತ್ತಿದ್ದೇನೆ. ನನ್ನ ಉದ್ದೇಶ ಹೀಗಿದೆ :

"ಮೊದಲನೇ ಉಪಬಾಬಿನಲ್ಲಿ ಅಂಚೆ ಮತ್ತು ತಂತಿ ಬಗ್ಗೆ ಹೀಗಿದೆ : 'ಪರಂತು, ಈ ಸಂವಿಧಾನ ಪ್ರಾರಂಭವಾಗುವಾಗ ಯಾವುದೇ ಒಂದು ಘಟಕದ ಪರವಾಗಿ ಇರುವ ಹಕ್ಕುಗಳು, ಅವು ಮಾರ್ಪಾಟಾಗುವವರೆಗೆ ಅಥವಾ ಕೊನೆಗೊಳ್ಳುವವರೆಗೆ ಆ ಘಟಕಕ್ಕೆ ನಿಗದಿಪಡಿಸಿದವುಗಳಾಗಿರತಕ್ಕದ್ದು' ಇತ್ಯಾದಿ."

ಈಗ ಅಂಚೆ ಮತ್ತು ತಂತಿಗೆ ಸಂಬಂಧಿಸಿದಂತೆ, ಕೆಲವು ರಾಜ್ಯಗಳ ಪರವಾಗಿ ಕೆಲವು ಹಕ್ಕುಗಳು

ಗುತ್ತಿಗೆ ಸ್ವರೂಪದಲ್ಲಿರುತ್ತವೆ. ದೂರತಂತಿಗೆ ಸಂಬಂಧಿಸಿದ ಹಕ್ಕುಗಳು ನನಗೆ ಗೊತ್ತಿಲ್ಲ. ದೂರವಾಣಿಗೆ ಸಂಬಂಧಿಸಿದಂತೆ ರಾಜ್ಯಗಳು ತಮ್ಮ ವ್ಯವಸ್ಥೆಗೆ ಉಪಕರಣಗಳನ್ನು ನಿರ್ಮಿಸಿ ಕಾರ್ಯಾಚರಣೆ ಮಾಡಲು ಸ್ವಾತಂತ್ರ್ಯ ಪಡೆದಿವೆ. ಭಾರತೀಯ ರಾಜ್ಯಗಳು ದೂರವಾಣಿ ವ್ಯವಸ್ಥೆಯನ್ನು ಕಲ್ಪಿಸಿ, ನಿರ್ವಹಿಸಲು, ಸಾರ್ವಜನಿಕರಿಗೆ ತಲಪಿಸಲು, ಲಾಭಕ್ಕಾಗಿ ಬಳಸಲು, ಖಾಸಗಿ ಕಂಪನಿಗಳಿಗೆ, ವ್ಯಕ್ತಿಗಳಿಗೆ ಅವುಗಳ ಲಾಭಕರ ಬಳಕೆಗೆ ಪರವಾನಗಿ ನೀಡಲು ಹಕ್ಕು ಹೊಂದಿವೆ. ಪರಂತು ಆ ಮಾರ್ಗಗಳು ರಾಜ್ಯದ ಎಲ್ಲೆ ಮೀರಿ ಬ್ರಿಟಿಷ್ ಭಾರತದೊಳಗೆ ಅಥವಾ ಇತರ ರಾಜ್ಯದೊಳಗೆ ಹೋಗಬಾರದು. ಸಂಯುಕ್ತ ಸಂಘದ ಪಟ್ಟಿಯ ಈ ಬಾಬನ್ನು ಅಂಗೀಕರಿಸುವುದರಿಂದ ಹಿಂದೆ ನೀಡಲಾಗಿದ್ದ ಭರವಸೆ ಮೇಲೆ ಯಾವ ಪರಿಣಾಮವಾಗುತ್ತದೆ ಎಂದು ತಿಳಿಯಬಯಸುತ್ತೇನೆ.

ಮಾನ್ಯರೆ, ಇನ್ನು ಸೇವಿಂಗ್ಸ್ ಬ್ಯಾಂಕ್, ವಿಷಯ. ಈ ಬಾಬು ಸಂಪರ್ಕಕ್ಕೆ ಸೇರುವುದೇ ಇಲ್ಲ. ಸೇವಿಂಗ್ಸ್ ಬ್ಯಾಂಕನ್ನು ಅಂಚೆ ಇಲಾಖೆ ನೋಡಿಕೊಳ್ಳುತ್ತಿರುವುದರಿಂದ ಅದನ್ನು ಇಲ್ಲಿ ನಮೂದಿಸಲಾಗಿದೆ. ಸೇವಿಂಗ್ಸ್ ಬ್ಯಾಂಕ್ ಪ್ರಶ್ನೆಯನ್ನು ಡೇವಿಡ್‌ಸನ್ ಸಮಿತಿಯ ಮುಂದೆ ಎತ್ತಲಾಯಿತು. ಸಮಿತಿಯು ಭಾರತ ಸರ್ಕಾರದೊಂದಿಗೆ ಸಮಾಲೋಚಿಸಿತು. ಸರ್ಕಾರವು ತನ್ನ ಅಭಿಪ್ರಾಯವನ್ನು ಹೀಗೆ ತಿಳಿಸಿತು.

"ಸೇವಿಂಗ್ಸ್ ಬ್ಯಾಂಕ್ ಖಾತೆ ಮತ್ತು ಕ್ಯಾಷ್ ಸರ್ಟಿಫಿಕೇಟುಗಳ ಮಾರಾಟ ವಾಣಿಜ್ಯ ವಿನಿಮಯ ಪ್ರಕಾರವಾಗಿದ್ದು, ಅದರಿಂದ ಸಂಬಂಧಪಟ್ಟ ಪಕ್ಷಕ್ಕೇ ಲಾಭ ಸಿಗುತ್ತದೆ, ಅದನ್ನು ಪರಿಶೀಲಿಸಿ ಸರಿದೂಗಿಸಲಾಗುತ್ತದೆ. ಆಳ್ವಿಕೆದಾರರ ಇಚ್ಛೆಗೆ ವಿರುದ್ಧವಾಗಿ, ಕೆಲವು ಸಂದರ್ಭಗಳಲ್ಲಿ ದರ್ಬಾರ್‌ನ ಸ್ವಂತ ಸ್ಥಳೀಯ ವ್ಯವಸ್ಥೆಗೆ ಸ್ಪರ್ಧೆಗೆ ನಿಂತು, ರಾಜ್ಯಗಳಲ್ಲಿ ಇಂಥ ವ್ಯವಸ್ಥೆ ನಡೆಸಲು ಪರಮಾಧಿಕಾರವು ಹಕ್ಕು ಹೊಂದಿದೆ ಎಂದು ಹೇಳುವುದು ಹೊಸ ಹಾಗೂ ನ್ಯಾಯೋಚಿತವಲ್ಲದ ರಾಜಕೀಯ ಪದ್ಧತಿ ಎಂಬುದನ್ನು ನಾವು ಒಪ್ಪುತ್ತೇವೆ. ಯಾವುದೇ ರಾಜ್ಯ ಕೇಳಿದರೆ ಅದರ ಪ್ರದೇಶದೊಳಗೆ ಈ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಲು ನಾವು ಸಿದ್ಧರಿದ್ದೇವೆ."

ಈಗ ಕೆಲವು ರಾಜ್ಯಗಳು ತಮ್ಮದೇ ಉಳಿತಾಯದ ಬ್ಯಾಂಕ್‌ಗಳನ್ನು ಸ್ಥಾಪಿಸುವ ಯೋಚನೆ ಮಾಡುತ್ತಿವೆಯಂತೆ, ಅವುಗಳ ಸರಿಯಾದ ಕಾರ್ಯಾಚರಣೆಗಾಗಿ, ಅಂಚೆ ಇಲಾಖೆಯು ತನ್ನ ಉಳಿತಾಯ ಬ್ಯಾಂಕ್ ವ್ಯವಸ್ಥೆಯನ್ನು ಹಿಂತೆಗೆದುಕೊಳ್ಳುವಂತೆ ಕೇಳುವುದು ಅಗತ್ಯವಾಗುತ್ತದೆ. ಈಗ, ಮೇಲಿನ ಕಂಡಿಕೆ. ನೀಡಿದ ಭರವಸೆ ಊರ್ಜಿತವೇ ಅಥವಾ ಯಾವಾಗ ಬೇಕಾದರೂ ಬದಲಾಗಬಹುದಾದ ಅಲ್ಪಕಾಲಿಕ ವಿಷಯವೇ ಎಂಬುದನ್ನು ನಾನು ತಿಳಿಯಬಯಸುತ್ತೇನೆ.

ಮೂರನೆಯದಾಗಿ, ನಿಸ್ತಂತು ಹಾಗೂ ಪ್ರಸಾರಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರ ಅಧಿನಿಯಮದ ೧೨೯ನೇ ಪ್ರಕರಣದಲ್ಲಿ, ಉಪಬಂಧ ಕಲ್ಪಿಸಲಾಗಿದೆ. ಅದಕ್ಕೆ ಸಂವಾದಿಯಾಗಿ ಹೊಸ ಸಂವಿಧಾನದಲ್ಲಿ ಏನನ್ನಾದರೂ ಪುನರುಚ್ಚರಿಸಲಾಗುತ್ತದೆಯೇ ಎಂದು ತಿಳಿಯಬಯಸುತ್ತೇನೆ. ಈ ವಿವರಗಳ ಬಗೆಗೆ ಖಚಿತಪಡಿಸಿಕೊಳ್ಳಲು ಮುಂದಿನ ಮೂರು ತಿದ್ದುಪಡಿಗಳನ್ನು ಮಂಡಿಸಿದ್ದೇನೆ. :

"೩೨ನೇ ಬಾಬಿನ(ಎ) ಕಂಡಿಕೆಯ ಅನಂತರ 'ಅಂಚೆ ಮತ್ತು ತಂತಿ' ಎಂಬ ಪದಗಳ ತರುವಾಯ 'ದೂರವಾಣಿ, ಅಂಚೆ ಕಚೇರಿ ಉಳಿತಾಯ ಬ್ಯಾಂಕ್' ಎಂಬ ಪದಗಳನ್ನು ಸೇರಿಸುವುದು."

"೩೨ನೇ ಬಾಬಿನ (ಬಿ) ಕಂಡಿಕೆಯ 'ದೂರವಾಣಿ' ಎಂಬ ಪದಗಳನ್ನು ಕೈಬಿಟ್ಟು, ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು :

'೧೯೩೫ ಭಾರತ ಸರ್ಕಾರ ಅಧಿನಿಯಮದ ೧೨೯ನೇ ಪ್ರಕರಣಕ್ಕೆ ಸಂವಾದಿಯಾಗಿರುವ ಸಂವಿಧಾನದ ಉಪಬಂಧಕ್ಕೆ ಒಳಪಟ್ಟು'."

**ಶ್ರೀ ನಜಿರುದ್ದೀನ್ ಅಹ್ಮದ್** : ೩೨ನೇ ಬಾಬಿನಲ್ಲಿ(ಬಿ) ಕಂಡಿಕೆಯ ಅನಂತರ ಮುಂದಿನ ಹೊಸ ಕಂಡಿಕೆಯನ್ನು ಸೇರಿಸಬೇಕೆಂದು ಮಂಡಿಸಲು ಬಯಸುತ್ತೇನೆ :

"೩೨ನೇ ಬಾಬಿನಲ್ಲಿ (ಬಿ) ಕಂಡಿಕೆಯ ತರುವಾಯ ಮುಂದಿನ ಹೊಸ ಕಂಡಿಕೆಯನ್ನು ಸೇರಿಸುವುದು.

'(ಬಿಬಿ) ಸಂಪರ್ಕದ ಬೇರೆ ಅಂಥವೇ ಪ್ರಕಾರಗಳು'."

ಇದು ಪ್ರಾರೂಪಣ ಸ್ವರೂಪದ ತಿದ್ದುಪಡಿಯಾಗಿದ್ದು, ಗಣನೆ ಪೂರ್ಣಗೊಳ್ಳಲು ಉದ್ದೇಶಿಸಲಾಗಿದೆ. (ಎ) ಖಂಡದಲ್ಲಿ ಸರ್ಕಾರದ ಒಡೆತನದಲ್ಲಿದ್ದು, ಅದರ ನಿರ್ವಹಣೆಗೊಳಪಟ್ಟ ಅಂಚೆ ಮತ್ತು ತಂತಿ ಇದೆ. (ಬಿ) ಖಂಡದಲ್ಲಿ ದೂರವಾಣಿ, ನಿಸ್ತಂತು, ಪ್ರಸಾರ ಇದೆ. ಉಪಕಂಡಿಕೆಯ ಮೂಲಕ ನಾನು ಈ ಪಟ್ಟಿಯಲ್ಲಿ ಸೇರಿಸಲಿಚ್ಛಿಸುತ್ತಿರುವುದು. "ಸಂಪರ್ಕದ ಇತರ ಅಂಥ ಪ್ರಕಾರಗಳು". ಖಾಸಗಿ ವ್ಯಕ್ತಿಗಳು ನಡೆಸುವ ಖಾಸಗಿ ಅಂಚೆ ಉದ್ಯಮಗಳಿರಬಹುದು. ಭಾರತ ಸರ್ಕಾರವು ಅಂಚೆ ಸಂಪರ್ಕದ ಏಕಸ್ವಾಮ್ಯ ಹೊಂದಿದೆ. ಯಾರೇ ಖಾಸಗಿ ವ್ಯಕ್ತಿಗಳು ಸಮಾನಾಂತರ ಅಂಚೆ ಸೇವೆ ನಡೆಸಲು ಸಾಧ್ಯವಾಗಬಹುದಾದ ಬಿರುಕಿನ ವಿರುದ್ಧ ಕಾಯಲು ನಾನು ಈ ಉಪಖಂಡದ ಸೇರ್ಪಡೆಯನ್ನು ಸೂಚಿಸಿದ್ದೇನೆ. ನಾನು ಮಾಡಿರುವ ತಿದ್ದುಪಡಿ ಪ್ರಾರೂಪಣ ಸಮಿತಿಗೆ ನೀಡಿರುವ ಸೂಚನೆಯಾಗಿದ್ದು, ಅದು, ಅದನ್ನು ನೋಡಿ ಅಗತ್ಯಕ್ರಮ ಕೈಗೊಳ್ಳಬಹುದಾಗಿದೆ.

ಈ ವಿಷಯದಲ್ಲಿ ಶ್ರೀ ಮಾಧವರಾವ್ ಅವರ ತಿದ್ದುಪಡಿ ಅಥವಾ ಅಂಚೆ ಉಳಿತಾಯ ಬ್ಯಾಂಕ್ ಬಗ್ಗೆ ಹೇಳುವುದಾದರೆ ಐತಿಹಾಸಿಕವಾಗಿ ಅದು ಅಂಚೆ ಇಲಾಖೆಗೆ ಸಂಬಂಧಿಸಿದ್ದರೂ, ರಾಜ್ಯಗಳು ಒಪ್ಪಿರುವ "ಸಂಪರ್ಕದ" ಭಾಗವಾಗುವುದಿಲ್ಲ. ಆದ್ದರಿಂದ ಅಂಚೆ ಉಳಿತಾಯ ಬ್ಯಾಂಕಿಗೆ ಸಂಬಂಧಿಸಿದ ಕಾನೂನಿನ ಬಗ್ಗೆ ವ್ಯವಹರಿಸುವುದಕ್ಕೆ ಮುಂಚೆ ರಾಜ್ಯಗಳ ಪ್ರಾಧಿಕಾರಗಳೊಂದಿಗೆ ಸಮಾಲೋಚಿಸುವುದು ಒಳಿತು. ಈ ಬಗ್ಗೆ ನಾನು ಬೇಳಬೇಕಿದ್ದುದನ್ನು ಹೇಳಿದ್ದೇನೆ.

**ಶ್ರೀ ಹಿಮ್ಮತ್‌ಸಿಂಗ್ ಕೆ. ಮಹೇಶ್ವರಿ :** ಮಾನ್ಯ ಸಭಾಧ್ಯಕ್ಷರೆ, ನಾನು ಮಂಡಿಸುವ ತಿದ್ದುಪಡಿ :

"೩೨ನೇ ಬಾಬಿನ (ಎ) ಕಂಡಿಕೆಯಲ್ಲಿ 'ಅಥವಾ ಒಕ್ಕೂಟ ಅರ್ಜಿಸಿದ' ಎಂಬ ಪದಗಳನ್ನು ಬಿಡುವುದು ಮತ್ತು ೩೨ನೇ ಬಾಬಿನ(ಸಿ) ಕಂಡಿಕೆಯಲ್ಲಿ ಕೊನೆಯಲ್ಲಿ 'ಒಂದು ಪ್ರಾಂತ್ಯದಲ್ಲಿ' ಎಂಬ ಪದಗಳನ್ನು ಸೇರಿಸುವುದು."

ಮಾನ್ಯರೆ, ಇಂದು ಬೆಳಗ್ಗೆ ನಾನು ಇತರ ತಿದ್ದುಪಡಿಗಳನ್ನು ಮಂಡಿಸುವ ಹುಚ್ಚುಧೈರ್ಯ ಮಾಡಿದ್ದೆ. ನನ್ನ ಭಾವಾವೇಶ ಹಾಗೂ ಶಂಕೆಗಾಗಿ ಆರೋಪಕ್ಕೊಳಗಾಗಿದ್ದೆ. ಈಗ ತಪ್ಪಿತಸ್ಥನೆಂದು ಒಪ್ಪಿಕೊಳ್ಳುತ್ತೇನೆ. ಕೇಂದ್ರದ ಅರ್ಜನಶೀಲ ಪ್ರವೃತ್ತಿ ಕುರಿತು ನನಗಿರುವ ಶಂಕೆಯು ೩೨ನೇ ಬಾಬು ಅಥವಾ ಅದರ ಉಪಬಾಬಿನಿಂದ ನಿವಾರಣೆಯಾಗುವುದಿಲ್ಲ, ನಾನು ಉಪಬಾಬು(ಎ) ಮತ್ತು (ಸಿ) ಸಂಬಂಧದಲ್ಲಿ ಮಾತ್ರ ತಿದ್ದುಪಡಿ ಮಂಡಿಸಿದ್ದೇನೆ. ಆದರೆ ೩೨ನೇ ಬಾಬಿನ (ಬಿ) ಖಂಡದ ಸಂಬಂಧದಲ್ಲಿ ಮಂಡಿಸಲಾದ ತಿದ್ದುಪಡಿಗೆ ನನ್ನ ಪೂರ್ಣ ಒಪ್ಪಿಗೆ ಇದೆ.

ಈ ಸಂಬಂಧದಲ್ಲಿ ೧೯೪೭ರ ಏಪ್ರಿಲ್‌ನಲ್ಲಿ ಈ ಸದನಕ್ಕೆ ಸಲ್ಲಿಸಲಾದ ವರದಿಯ ಸಿ ಖಂಡದ(ಎ) ಉಪಖಂಡದ ಬಾಬು೪ರ ಕಡೆಗೆ ಸದನದ ಗಮನ ಸೆಳೆಯಲು ಬಯಸುತ್ತೇನೆ. ಆ ಸಮಯದಲ್ಲಿ ವರದಿಯ ರಚನಾಕಾರರಿಗೆ ಅಂಚೆ ಮತ್ತು ತಂತಿಗೆ ಸಂಬಂಧಪಟ್ಟಂತೆ ರಾಜ್ಯಗಳಿಗಿದ್ದ ಹಕ್ಕನ್ನು ಪಡೆಯುವ ಉದ್ದೇಶ ಇರಲಿಲ್ಲ. ಆ ಹಕ್ಕುಗಳನ್ನು ಪಡೆಯುವ ಉದ್ದೇಶ ತದನಂತರದಲ್ಲಿ ಮೂಡಿರಬಹುದು.

"ಏಪ್ರಿಲ್ ವರದಿಯ (ಸಿ) ಖಂಡದ ೪ನೇ ಬಾಬಿನ(ಬಿ) ಖಂಡದ ಬಗ್ಗೆ ಮತ್ತೆ ಉಲ್ಲೇಖಿಸಬಹುದಾಗಿದೆ. ಆಗ ಕೇಂದ್ರ ದೂರವಾಣಿ, ಕೇಂದ್ರ ಪ್ರಸಾರ, ಕೇಂದ್ರ ನಿಸ್ತಂತು ಕುರಿತು ವ್ಯವಹರಿಸುವ ಉದ್ದೇಶವಿತ್ತೇ ಹೊರತು ರಾಜ್ಯಗಳ ಒಡೆತನ ಅಥವಾ ನಿಯಂತ್ರಣದಲ್ಲಿದ್ದ ದೂರವಾಣಿ, ನಿಸ್ತಂತು ಮತ್ತು ಪ್ರಸಾರದ ಬಗೆಗಿಲ್ಲ. ರಾಜ್ಯಗಳ ಒಡೆತನದಲ್ಲಿದ್ದ ನಿಸ್ತಂತು ಮತ್ತು ಪ್ರಸಾರ ಮತ್ತು ಅಂಥ ಬೇರೆ ಸಂಪರ್ಕ ಸಾಧನಗಳನ್ನು ಕ್ರಮಬದ್ಧಗೊಳಿಸುವ ಉದ್ದೇಶವಿತ್ತೇ ಹೊರತು ಅವುಗಳ ನಿಯಂತ್ರಣದ ಉದ್ದೇಶವಲ್ಲ. ಪ್ರಸ್ತುತ ಬಾಬಿನಲ್ಲಿ, ಒಕ್ಕೂಟದ ಒಡೆತನದಲ್ಲಿರಲಿ ಅಥವಾ ಇಲ್ಲದಿರಲಿ ಎಲ್ಲ ದೂರವಾಣಿ, ನಿಸ್ತಂತು ಕೇಂದ್ರಗಳು, ಪ್ರಸಾರ ಕೇಂದ್ರಗಳು ಮತ್ತಿತರ ಸಂಪರ್ಕ ಪ್ರಕಾರಗಳನ್ನು ನಿಯಂತ್ರಿಸಲು ಉದ್ದೇಶಿಸಲಾಗಿದೆ. ಮೊದಲಿನ ಏಪ್ರಿಲ್

ವರದಿ ತಯಾರಿಸುವಾಗ ಉದ್ದೇಶಿಸಲಾಗಿದ್ದ ತತ್ತ್ವದ ವಿಸ್ತರಣೆ ಇದು ಎಂದು ನನ್ನ ಭಾವನೆ.

(ಸಿ) ಖಂಡಕ್ಕೆ ಸಂಬಂಧಿಸಿದಂತೆ ಬೇರೆ ಭಾಷಣಕಾರರು ಈಗಾಗಲೇ ಅಂಚೆ ಕಚೇರಿ ಉಳಿತಾಯ ಬ್ಯಾಂಕ್ ರಾಜ್ಯಗಳು ಒಕ್ಕೂಟಕ್ಕೆ ಒಪ್ಪಿಗೆ ನೀಡಿರುವ ಅಥವಾ ಮುಂದೆ ನೀಡಲು ಉದ್ದೇಶಿಸಿರುವ ಮೂರು ವಿಷಯಗಳ ಪೈಕಿ ಒಂದಾಗಿರುವ ಸಂಪರ್ಕದ ಭಾಗವಾಗಿಲ್ಲ ಎಂದು ತಿಳಿಸಿದ್ದಾರೆ. ಮಾನ್ಯರೆ, ರೂಢಿಯಲ್ಲಿ, ಅಂಚೆ ಕಚೇರಿಯು ನಡೆಸುವ ವ್ಯವಹಾರವು ಅಂಚೆ ಕಚೇರಿಗೆ ತುಸು ಲಾಭ ತರುವಂಥದ್ದಾದ್ದರಿಂದ, ತಮ್ಮ ಸ್ವಂತ ಬ್ಯಾಂಕುಗಳನ್ನು ಸ್ಥಾಪಿಸಿರುವ ರಾಜ್ಯಗಳು ಉಳಿತಾಯ ಬ್ಯಾಂಕ್ ವ್ಯವಹಾರವನ್ನು ನಡೆಸಲು ಅನುಮತಿಸುವುದು ಕಾನೂನು ಸಮ್ಮತವಾಗಿದೆ, ಮುಂದೆ ಭಾರತೀಯ ರಾಜ್ಯಗಳಲ್ಲಿ ಅಂಚೆ ಕಚೇರಿಯು ಈ ವ್ಯವಹಾರ ನಡೆಸುವುದು ನಿಂತು ಹೋಗುತ್ತದೆ.

**ಪ್ರೊ. ಶಿಬನ್‌ಲಾಲ್ ಸಕ್ಸೇನ** (ಸಂಯುಕ್ತ ಪ್ರಾಂತ್ಯಗಳು : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ನನ್ನ ತಿದ್ದುಪಡಿ ಮುಂದಿನಂತಿದೆ:

"೩೨ನೇ ಬಾಬಿನ (ಬಿ) ಕಂಡಿಕೆಯ ಬದಲಿಗೆ ಮುಂದಿನದನ್ನು ಪ್ರತಿಯೋಜಿಸುವುದು :

'(ಬಿ)ದೂರವಾಣಿ, ನಿಸ್ತಂತು, ಪ್ರಸಾರ ಮತ್ತು ಸಂಪರ್ಕದ ಅಂತಹ ಇತರ ಪ್ರಕಾರಗಳು, ಪ್ರಸ್ತುತ ಒಕ್ಕೂಟದ ಒಡೆತನದಲ್ಲಿಲ್ಲದಿರುವ ಅಂತಹ ಸಂಪರ್ಕ ವ್ಯವಸ್ಥೆಗಳ ಸ್ವಾಮ್ಯ'."

ಮಾನ್ಯರೆ, ರಕ್ಷಣೆ, ಸಂಪರ್ಕ ಮತ್ತು ವಿದೇಶ ವ್ಯವಹಾರ ಈ ಮೂರು ವಿಷಯಗಳ ಬಗ್ಗೆ ರಾಜ್ಯಗಳು ಒಪ್ಪಿಗೆ ನೀಡಿವೆ. ಒಕ್ಕೂಟ ವಿಷಯಗಳ ಪಟ್ಟಿಯಲ್ಲಿ ತೋರಿಸಲಾಗಿರುವಂತೆ ವಿದೇಶ ವ್ಯವಹಾರಗಳ ಸಂಪೂರ್ಣ ಅಧಿಕಾರವ್ಯಾಪ್ತಿ ಒಕ್ಕೂಟ ಸರ್ಕಾರಕ್ಕೆ ಸೇರಿದೆ. ರಕ್ಷಣಾ ವಿಷಯದ ಸಂಪೂರ್ಣ ನಿಯಂತ್ರಣವನ್ನು ಒಕ್ಕೂಟ ಸರ್ಕಾರವೇ ತೆಗೆದುಕೊಂಡಿದೆ. ವಾಸ್ತವವಾಗಿ ೫ನೇ ಬಾಬಿನಲ್ಲಿ ರಾಜ್ಯಗಳು ತಮ್ಮ ಸೈನ್ಯವನ್ನಿರಿಸಿಕೊಳ್ಳಲು ಉಪಬಂಧ ಕಲ್ಪಿಸಲಾಗಿದ್ದರೂ ಸಂಖ್ಯಾಬಲ, ಸಂಘಟನೆ ಹಾಗೂ ನಿಯಂತ್ರಣದ ಅಧಿಕಾರ ಒಕ್ಕೂಟ ಸರ್ಕಾರದ ಕೈಯಲ್ಲಿರುತ್ತದೆ. ಈ ಉಪಬಂಧ ಹಾಗೂ ಯಾವ ಘಟಕದಲ್ಲಿಯೂ ಪ್ರತ್ಯೇಕ ಸೈನ್ಯವನ್ನಿರಿಸಿಕೊಳ್ಳಲು ಅನುಮತಿ ಸಂಪರ್ಕ ವಿಷಯದಲ್ಲಿಯೂ ಹೇಳುವುದಾದರೆ ಅದು ಸಂಪೂರ್ಣವಾಗಿ ಒಕ್ಕೂಟದ ಒಡೆತನದಲ್ಲಿದ್ದರೆ ಮಾತ್ರ ರಕ್ಷಣಾ ವ್ಯವಸ್ಥೆ ಕಾರ್ಯನಿರ್ವಹಿಸಬಲ್ಲದು. ಏಕೆಂದರೆ ಹಿಂದಿನ ಯುದ್ಧದಲ್ಲಿ ಬೇಹುಗಾರರು ನಿಸ್ತಂತು ವಾಹಕಗಳು ಹಾಗೂ ಇತರ ವಸ್ತುಗಳನ್ನು ಗೂಢಚರ್ಯೆಗೆ ಬಳಸಿದ್ದ ವಿಷಯ ನಮಗೆ ತಿಳಿದಿದೆ. ಮತ್ತೊಂದು ಯುದ್ಧದ ಛಾಯೆಯನ್ನು ಗುರುತಿಸಬಹುದು. ಒಕ್ಕೂಟಕ್ಕೆ ಸಂಪರ್ಕದ ಮೇಲೆ ಸಂಪೂರ್ಣ ನಿಯಂತ್ರಣವಿಲ್ಲದಿದ್ದರೆ ಅದು ರಕ್ಷಣೆಯ ಹೊಣೆಯನ್ನು ಸೂಕ್ತವಾಗಿ ನಿರ್ವಹಿಸಲಾರದು. ಸಂಪರ್ಕದ ವಿಷಯ ಸಂಪೂರ್ಣವಾಗಿ ಒಕ್ಕೂಟ ಸರ್ಕಾರದ ಒಡೆತನದಲ್ಲಿರಬೇಕು ಎಂದು ನನ್ನ ಭಾವನೆ. ನಮ್ಮ ಒಕ್ಕೂಟ ಸರ್ಕಾರಕ್ಕೆ ಘಟಕಗಳ ಬಗ್ಗೆ ನಂಬಿಕೆ ಇದೆ ಮತ್ತು ಸಾಮಾನ್ಯ ದಿನಗಳಲ್ಲಿ ತನ್ನ ಅಧಿಕಾರಗಳನ್ನು ಅವುಗಳಿಗೆ ಪ್ರತ್ಯಾಯೋಜಿಸುತ್ತದೆ ಮತ್ತು ಒಕ್ಕೂಟ ಸರ್ಕಾರದ ಕಾನೂನುಗಳ ಮೂಲಕ ಪೂರ್ಣಸ್ವಾಯತ್ತತೆ ನೀಡುತ್ತದೆ. ಆದರೆ ತುರ್ತುಸಂದರ್ಭಗಳಲ್ಲಿ ಎಲ್ಲ ನಿಯಂತ್ರಣವನ್ನು ತಾನು ವಹಿಸಿಕೊಂಡು ಆ ತುರ್ತನ್ನು ಎದುರಿಸಲು ಸಂಪೂರ್ಣ ಸಿದ್ಧವಾಗಬೇಕಾಗುತ್ತದೆ. ಆಗ ನಮಗೆ ಸಂಪರ್ಕ ಮಾಧ್ಯಮಗಳ ಮೇಲೆ ಒಡೆತನದ ಅಧಿಕಾರವಿಲ್ಲದಿದ್ದರೆ ಅವುಗಳ ಒಡೆತನ ನಮಗೆ ಸೇರುವುದಿಲ್ಲ.

ಈ ಒಕ್ಕೂಟ ಸರ್ಕಾರದ ಪಟ್ಟಿಯಲ್ಲಿ ಸಂಪರ್ಕದ ಎಲ್ಲ ಮಾಧ್ಯಮಗಳ ಒಡೆತನವನ್ನು ಸಂಯುಕ್ತ ಸರ್ಕಾರಕ್ಕೆ ವಹಿಸಲು ವ್ಯವಸ್ಥೆ ಕಲ್ಪಿಸಿದರೆ ಹಾಗೂ ಈಗ ಸಂಯುಕ್ತ ಸರ್ಕಾರಕ್ಕೆ ಒಡೆತನದಲ್ಲಿಲ್ಲದಿರುವ ವ್ಯವಸ್ಥೆಗಳ ಒಡೆತನವನ್ನು ಒಕ್ಕೂಟ ಸರ್ಕಾರಕ್ಕೆ ಅರ್ಜಿಸುವ ಅಧಿಕಾರವನ್ನು ಕಲ್ಪಿಸಿದರೆ ಮಾತ್ರ ಇದು ಸಾಧ್ಯ. ಎಲ್ಲ ರಾಜ್ಯಗಳ ಸದಸ್ಯರು ಈ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದರಿಂದ ತಮ್ಮ ರಾಜ್ಯಗಳಲ್ಲಿ ತಮ್ಮದೇ ಭಾಷೆಯಲ್ಲಿ ತಮ್ಮದೇ ಪ್ರಸಾರ ವ್ಯವಸ್ಥೆಯನ್ನು ಹೊಂದಿರುವ ತಮ್ಮ ಹಕ್ಕನ್ನು ಯಾವುದೇ ರೀತಿಯಲ್ಲಿ

ಕಳೆದುಕೊಳ್ಳುವುದಿಲ್ಲ ಎಂದು ನನ್ನ ಭಾವನೆ. ಯುದ್ಧ ಸಮಯದಲ್ಲಿ ಮಾತ್ರ ಎಲ್ಲ ಪ್ರಸಾರ ವ್ಯವಸ್ಥೆಯ ಪೂರ್ಣ ನಿಯಂತ್ರಣವನ್ನು ಒಕ್ಕೂಟ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಆದ್ದರಿಂದ ನಾನು ಪ್ರಸ್ತುತ ಖಂಡದ ಕೊನೆಯಲ್ಲಿ ಈಗಿರುವ 'ಒಕ್ಕೂಟ ಸರ್ಕಾರಕ್ಕೆ ಒಡೆತನದಲ್ಲಿರಲಿ ಅಥವಾ ಇಲ್ಲದಿರಲಿ' ಎಂಬ ಪದಗಳನ್ನು ತೆಗೆದು 'ಈಗ ಒಕ್ಕೂಟ ಸರ್ಕಾರದ ಒಡೆತನದಲ್ಲಿಲ್ಲದಿರುವ ಅಂತಹ ಸಂಪರ್ಕ ವ್ಯವಸ್ಥೆಯ ಸ್ವಾಮ್ಯ" ಎಂಬುದನ್ನು ಈಗಿರುವ ಖಂಡಕ್ಕೆ ಸೇರಿಸಬೇಕೆಂದು ಸೂಚಿಸಿದ್ದೇನೆ. ಏಕೆಂದರೆ ಕೆಲವು ರಾಜ್ಯಗಳಲ್ಲಿ ಅವುಗಳದೇ ಸ್ವಂತ ಸಂಪರ್ಕ ವ್ಯವಸ್ಥೆ ಇದೆ. ಆದ್ದರಿಂದ (ಒಕ್ಕೂಟ ಸರ್ಕಾರವು ಕಡೇ ಪಕ್ಷ) ತುರ್ತುಸಂದರ್ಭಗಳಲ್ಲಿ ಅವುಗಳನ್ನು ಅರ್ಜಿಸುವ ಹಕ್ಕು ಹೊಂದಿದ್ದರೆ ಅದನ್ನು ಯಾರೂ ಆಕ್ಷೇಪಿಸಬಾರದು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ನಾನು ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ. ಕೇಂದ್ರ ಸರ್ಕಾರವು ಪ್ರಸಾರದ ಮೇಲೆ ನಿಯಂತ್ರಣ ಹೊಂದಿರಬೇಕೆಂಬುದನ್ನು ನಾವೆಲ್ಲ ಒಪ್ಪಿದ್ದೇವೆ. ತಿದ್ದುಪಡಿಗಳನ್ನು ಸೂಚಿಸಿದ ರಾಜ್ಯಗಳ ಮಂತ್ರಿಗಳು ಸಹ ಒಕ್ಕೂಟ ಸರ್ಕಾರದ ನಿಯಂತ್ರಣವನ್ನು ತಪ್ಪಿಸಲು ಪ್ರಯತ್ನಿಸಿಲ್ಲ. ಅವರು ತಿದ್ದುಪಡಿಗಳ ಮೂಲಕ ತಮ್ಮ ಪ್ರಸಾರ ಕೇಂದ್ರಗಳನ್ನು ಸ್ಥಾಪಿಸಲು ಹಾಗೂ ಅವುಗಳ ಮೇಲೆ ತಕ್ಕಮಟ್ಟಿಗೆ ಹಿಡಿತ ಹೊಂದಿರಲು ಅನುಮತಿ ನೀಡಬೇಕೆಂದು ಕೇಳಿರುವುದು ಕಂಡು ಬರುತ್ತದೆ. ಭಾರತ ಸರ್ಕಾರ ಅಧಿನಿಯಮದ ೧೨೯ನೇ ಪ್ರಕರಣದಲ್ಲಿ ಈಗಿರುವ ಉಪಬಂಧದಂಥದನ್ನೇ ಅಧಿನಿಯಮದಲ್ಲಿಯೂ ಕಲ್ಪಿಸಲಾಗುತ್ತದೆ. ಅದರಲ್ಲಿ ಕೇಂದ್ರ ಅಥವಾ ಒಕ್ಕೂಟ ಸರ್ಕಾರ ಹಾಗೂ ರಾಜ್ಯಗಳು ಅಥವಾ ರಾಜ್ಯಗಳ ಆಳ್ವಿಕೆದಾರರ ನಡುವೆ ಆಗುವ ಒಡಂಬಡಿಕೆ ಮತ್ತು ಕರಾರುಗಳ ಬಗ್ಗೆ ಉಲ್ಲೇಖಿಸಲಾಗಿದ್ದು, ಅಧಿಕಾರ ಚಲಾವಣೆಯ ರೀತಿ ಹಾಗೂ ಪ್ರಸಾರ ವ್ಯವಸ್ಥೆ ರಾಜ್ಯ ಅಥವಾ ಪ್ರಾಂತ್ಯದ ಪರಿಧಿಯೊಳಗೆ ಇದ್ದರೂ ತುರ್ತುಸಂದರ್ಭಗಳಲ್ಲಿ ಗವರ್ನರ್ ಜನರಲ್ ಇಡೀ ಪ್ರಸಾರ ವ್ಯವಸ್ಥೆಯನ್ನು ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲು ಅವರಿಗೆ ಇರುವ ಅಧಿಕಾರದ ಬಗ್ಗೆ ತಿಳಿಸಲಾಗಿರುತ್ತದೆ. ಅಲ್ಲದೇ ತುರ್ತುಸಂದರ್ಭದಲ್ಲಿ ಕೇಂದ್ರ ಸರ್ಕಾರವು ನಿಯಂತ್ರಣ ಹೊಂದಿರಲು ಸಾಧ್ಯವಾಗುವಂಥ ಉಪಬಂಧವನ್ನು ಕಲ್ಪಿಸಲಾಗುತ್ತದೆ. ಶ್ರೀ ಸಂತಾನಮ್ ಅವರು, ಕೇಂದ್ರ ಸರ್ಕಾರವು ಮಾಡುವ ಕಾನೂನು ಹಾಗೂ ವಿನಿಯಮಗಳಿಗೆ ಒಳಪಟ್ಟು ಪ್ರಾಂತ್ಯ ಹಾಗೂ ರಾಜ್ಯಗಳು ತಮ್ಮ ಸ್ವಂತದ ಪ್ರಸಾರ ಕೇಂದ್ರಗಳನ್ನು ಸ್ಥಾಪಿಸಲು ಅನುಮತಿಸಬಹುದಾಗಿದೆ ಎಂಬ ಅಂಶವನ್ನು ತಿಳಿಸಿದ್ದು, ಅವರ ತಿದ್ದುಪಡಿಯಲ್ಲಿ ಇದಕ್ಕೆ ಉಪಬಂಧ ಕಲ್ಪಿಸಲಾಗಿದೆ.

ಶ್ರೀ ಮಹೇಶ್ವರಿಯವರು ೩೨ನೇ ಬಾಬಿನ (ಎ) ಖಂಡದಲ್ಲಿರುವ ರಾಜ್ಯದ ಪರಿಧಿಯಲ್ಲಿರುವ ಪ್ರಸಾರ ಕೇಂದ್ರಗಳು ಮತ್ತು ಅಂಚೆ ಮತ್ತು ತಂತಿ ಇಲಾಖೆಗಳ ಸ್ವಾಮ್ಯ ಕುರಿತ ವಿಷಯದ ಬಗ್ಗೆ ಆಕ್ಷೇಪವೆತ್ತಿದ್ದಾರೆ. ಭಾರತ ಸರ್ಕಾರ ಅಧಿನಿಯಮದ ಪಟ್ಟಿ-೧ರ ೭ನೇ ನಮೂದಿನಲ್ಲಿ ಇದು ಇಲ್ಲವೆಂಬುದು ನಿಜ. ಮಾನ್ಯರೆ, ಒಂದು ರಾಜ್ಯವು ಅಂಚೆ ಮತ್ತು ತಂತಿ ಸಂಪರ್ಕ ವ್ಯವಸ್ಥೆಯನ್ನು ಮಾರಾಟಮಾಡಲು ಸಿದ್ಧವಾದರೆ ಅದನ್ನು ಹೊಂದಲು ಏಕರೂಪತೆಯ ಕಾರಣಕ್ಕಾಗಿ ಕೇಂದ್ರಕ್ಕೆ ಅವಕಾಶವಿರಬೇಕು. ಸ್ವಾಮ್ಯ ಎಂದರೆ ಸ್ವಇಚ್ಛೆಯ ಸ್ವಾಮ್ಯ ಅಥವಾ ಎರಡು ಪಕ್ಷಗಳ ನಡುವಣ ಒಪ್ಪಂದ ಮಾತ್ರವಾಗಿರದೇ ಕಡ್ಡಾಯ ಒಡೆತನ. ಈ ಕಡ್ಡಾಯ ಒಡೆತನದ ಬಗ್ಗೆ ಅವರ ಆಕ್ಷೇಪ.

ರೈಲ್ವೆಗೆ ಸಂಬಂಧಿಸಿದಂತೆ, ಇಡೀ ರಾಜ್ಯದ ಪ್ರಯೋಜನಕ್ಕಾಗಿ ರೈಲ್ವೆ ವ್ಯವಸ್ಥೆಯನ್ನು ಕೇಂದ್ರೀಕರಿಸಲು ಪ್ರಯತ್ನಿಸಲಾಗುತ್ತಿದೆ. ಸಮ್ಮತಿ ನೀಡದಿರುವ ರಾಜ್ಯಗಳ ಬಗ್ಗೆ ನಾನು ಮಾತನಾಡುತ್ತಿಲ್ಲ. ಕ್ಯಾಬಿನೆಟ್ ಮಿಷನ್ ಪ್ಲ್ಯಾನ್ ಮೇರೆಗೆ ಮೂಲದಲ್ಲೇ ಸಮ್ಮತಿಸಿದ್ದ ರಾಜ್ಯಗಳು ರಕ್ಷಣೆ, ವಿದೇಶ ವ್ಯವಹಾರ ಹಾಗೂ ಸಂಪರ್ಕ ಈ ಮೂರು ವಿಷಯಗಳಿಗೆ ಒಪ್ಪಿಗೆ ನೀಡಬೇಕೆಂದು ಉದ್ದೇಶಿಸಲಾಗಿತ್ತು. ಸಂಪರ್ಕ ವ್ಯವಸ್ಥೆ ಎಂಬುದು ರಕ್ಷಣಾ ವ್ಯವಸ್ಥೆಯ ಬೆನ್ನೆಲುಬಿನಂತಿದ್ದು, ರಕ್ಷಣಾ ವ್ಯವಸ್ಥೆಯ ಕುರಿತು ಉಲ್ಲೇಖಿಸಿದಾಗಲೆಲ್ಲ ತುರ್ತುಸಂದರ್ಭವನ್ನು

ದೃಷ್ಟಿಯಲ್ಲಿರಿಸಿಕೊಂಡು ಯೋಚಿಸಬೇಕಾಗುತ್ತದೆ. ಆದ್ದರಿಂದ ಸಂಪರ್ಕವು ಒಕ್ಕೂಟ ವಿಷಯವಾಗಿರಬೇಕು, ಅದರಿಂದ ವಿಚಲಿತವಾಗುವ ಮಾತೇ ಇಲ್ಲ. ಇದು ರಾಜ್ಯಗಳಿಗೆ ಮರ್ಯಾದೆಯ ಪ್ರಶ್ನೆಯಾಗಬಾರದು. ಆದ್ದರಿಂದ ರಾಜ್ಯದ ಪರಿಧಿಯೊಳಗಿನ ಅಂಚೆ ಮತ್ತು ತಂತಿ ವ್ಯವಸ್ಥೆಯ ಅಧಿಕಾರವನ್ನು ರಾಜ್ಯಗಳು ಸ್ವ-ಇಚ್ಛೆಯಿಂದಾಗಲೀ ಅಥವಾ ಒಪ್ಪಂದದ ಮೂಲಕವಾಗಲೀ ಅಥವಾ ಕಡ್ಡಾಯವಾಗಿಯಾದರೂ ಕೇಂದ್ರ ಸರ್ಕಾರವು ಬಿಟ್ಟುಕೊಡಬೇಕು.

ನಾನು ನನ್ನ ಗೌರವಾನ್ವಿತ ಮಿತ್ರ ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಬೆಂಬಲಿಸುತ್ತೇನೆ ಮತ್ತು ಇತರ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

**ಶ್ರೀ ಎಸ್.ವಿ. ಕೃಷ್ಣಮೂರ್ತಿ ರಾವ್** (ಮೈಸೂರು ರಾಜ್ಯ) : ಮಾನ್ಯರೆ, ಪ್ರಸಾರ, ನಿಸ್ತಂತು, ದೂರವಾಣಿಯ ಒಡೆತನ ಹೊಂದಿರುವ ಘಟಕದ ಹಕ್ಕನ್ನು ೩೨ನೇ ಬಾಬಿನಲ್ಲಿ ನಿರಾಕರಿಸಲಾಗುತ್ತದೆ ಎಂದು ನನಗೆ ತೋರುವುದಿಲ್ಲ. ಏಕೆಂದರೆ (ಬಿ) ಖಂಡದಲ್ಲಿ, ದೂರವಾಣಿ, ನಿಸ್ತಂತು, ಪ್ರಸಾರ ಹಾಗೂ ಸಂಪರ್ಕದ ಇತರ ಪ್ರಕಾರಗಳು ಒಕ್ಕೂಟದ ಒಡೆತನದಲ್ಲಿರಲಿ ಅಥವಾ ಇಲ್ಲದಿರಲಿ ಎಂದು ತಿಳಿಸಲಾಗಿದೆ. ಆದ್ದರಿಂದ ಸಂಪರ್ಕದ ಈ ಎಲ್ಲ ಸಾಧನಗಳು ಒಕ್ಕೂಟದ ಒಡೆತನದಲ್ಲಿರಲಿ ಅಥವಾ ಇಲ್ಲದಿರಲಿ, ಈ ಖಂಡವು ಒಕ್ಕೂಟದ ಶಾಸಕಾಂಗಕ್ಕೆ ಕಾನೂನು ರಚನಾಧಿಕಾರವನ್ನು ನೀಡುತ್ತದೆ. ಅದರಲ್ಲೂ ಭಾರತದಂಥ ದೇಶದಲ್ಲಿ ಯುದ್ಧ ಮತ್ತು ತುರ್ತು ಸಂದರ್ಭದಲ್ಲಿ ಸಂಪರ್ಕವು ರಕ್ಷಣಾ ವ್ಯವಸ್ಥೆಯೊಂದಿಗೆ ನಿಕಟ ಸಂಬಂಧ ಹೊಂದಿರುವುದರಿಂದ ಈ ಸಂಪರ್ಕ ವ್ಯವಸ್ಥೆಯನ್ನು ಕ್ರಮಬದ್ಧಗೊಳಿಸುವ ಹಾಗೂ ಅದಕ್ಕಾಗಿ ಕಾನೂನುಮಾಡುವ ಅಧಿಕಾರವು ಕೇಂದ್ರಕ್ಕೆ ಮಾತ್ರವೇ ಇರಬೇಕು.

ಸೇವಿಂಗ್ಸ್ ಬ್ಯಾಂಕನ್ನು ಅಂಚೆ ಕಚೇರಿಗಳಿಂದ ಹೊರತುಪಡಿಸುವ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಸೇವಿಂಗ್ಸ್ ಬ್ಯಾಂಕ್ ಕೆಲಸ ಅಂಚೆ ಕಚೇರಿಗಳ ದೈನಂದಿನ ಕೆಲಸದಲ್ಲಿ ಸೇರುತ್ತದೆ. ನನಗೆ ಗೊತ್ತಿರುವಂತೆ ಯಾವ ರಾಜ್ಯದಲ್ಲಿಯೂ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅಂಚೆ ಕಚೇರಿ ಸೇವಿಂಗ್ಸ್ ಬ್ಯಾಂಕ್‌ಗಳು ನೀಡುತ್ತಿರುವ ಸೇವೆಯನ್ನು ಬೇರಾವ ರೀತಿಯಲ್ಲಿಯೂ ಒದಗಿಸಲು ಸಾಧ್ಯವಿಲ್ಲ. ಪ್ರತಿಯೊಂದು ರಾಜ್ಯದಲ್ಲಿಯೂ ಖಜಾನೆಗಳಲ್ಲಿ ಮತ್ತು ರಾಜ್ಯದ ಪೂರ್ಣ ಅಥವಾ ಭಾಗಶಃ ಹಣಕಾಸು ನೆರವಿನಿಂದ ನಡೆಯುವ ಬ್ಯಾಂಕುಗಳಲ್ಲಿ ಸ್ವಂತದ ಸೇವಿಂಗ್ಸ್ ಬ್ಯಾಂಕುಗಳಿವೆ. ಗ್ರಾಮೀಣ ಪ್ರದೇಶಗಳಲ್ಲಿ ಅಂಚೆ ಕಚೇರಿಗಳು ಚಿಕ್ಕ ಗ್ರಾಮಗಳಲ್ಲಿವೆ. ಯಾವುದೇ ರಾಜ್ಯ ಅಥವಾ ಪ್ರಾಂತ್ಯ ಗ್ರಾಮೀಣ ಪ್ರದೇಶಗಳಲ್ಲಿ ಸೇವಿಂಗ್ಸ್ ಬ್ಯಾಂಕ್ ಪ್ರಾರಂಭಿಸಲು ಸಾಧ್ಯವಾಗುವುದಿಲ್ಲ ಎಂದು ನನ್ನ ಭಾವನೆ. ಈ ಕೆಲಸವನ್ನು ಅಂಚೆ ಕಚೇರಿಗಳು, ಶಾಖಾ ಅಂಚೆ ಕಚೇರಿಗಳು ಸಹ ಉಪಯುಕ್ತ ರೀತಿಯಲ್ಲಿ ಈ ಕೆಲಸಮಾಡಬಹುದು ಮತ್ತು ಮಾಡುತ್ತಿವೆ. ಆದ್ದರಿಂದ ಅಂಚೆ ಕಚೇರಿಯ ಪರಿಧಿಯಿಂದ ಸೇವಿಂಗ್ಸ್ ಬ್ಯಾಂಕುಗಳನ್ನು ಹೊರತುಪಡಿಸುವ ತಿದ್ದುಪಡಿಯನ್ನು ನಾನು ವಿರೋಧಿಸುತ್ತೇನೆ.

ನಾನು ಎಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ ಮತ್ತು ಮೂಲಖಂಡ ಹಾಗೇ ಉಳಿಯುವುದನ್ನು ಬೆಂಬಲಿಸುತ್ತೇನೆ.

**ಶ್ರೀ ಗೋಪಿಕೃಷ್ಣ ವಿಜಯ ವರ್ಗೀಯ** (ಗ್ವಾಲಿಯರ್ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ಪ್ರಸಾರವನ್ನು ಸಂಪರ್ಕದೊಂದಿಗೆ ಸೇರಿಸಬೇಕೆಂದು ನನ್ನ ಅಭಿಪ್ರಾಯ. ಪ್ರಸಾರ ಎಂಬುದು ಒಬ್ಬರ ವಿಚಾರಗಳನ್ನು ತಿಳಿಯಪಡಿಸುವ ಸಾಧನಗಳಲ್ಲೊಂದಾಗಿರುವುದರಿಂದ ಇದೂ ಒಕ್ಕೂಟ ಸರ್ಕಾರದ ವಿಷಯವಾಗಿರಬೇಕು. ಈ ಕುರಿತ ಆಕ್ಷೇಪಗಳಲ್ಲಿ ಹುರುಳಿಲ್ಲ. ಈ ಸಂಬಂಧದಲ್ಲಿ ಶ್ರೀ ಸಂತಾನಮ್ ಅವರು ಹೇಳಿದ ತಿದ್ದುಪಡಿ ಸೂಕ್ತವಾಗಿದೆ ಮತ್ತು ಪ್ರಸಾರವು ಕೇಂದ್ರದ ವಿಷಯವಾಗಿರಬೇಕು. ಈ ಹಕ್ಕು ತಮಗೆ ಇರಬೇಕೆಂದು ಹಲವು ರಾಜ್ಯಗಳು ಇಂದು ಒತ್ತಾಯಿಸುತ್ತಿವೆ. ಈ ಬಗ್ಗೆ ನನ್ನ ಅಭಿಪ್ರಾಯವೇನೆಂದರೆ ನಾವೆಲ್ಲ ಒಟ್ಟಾಗಿ ಒಕ್ಕೂಟ

ಸರ್ಕಾರವನ್ನು ರಚಿಸುತ್ತಿರುವಾಗ ಈ ಹಕ್ಕು ರಾಜ್ಯಗಳಿಗೆ ಸಂಬಂಧಿಸಿದ್ದು, ಕೇಂದ್ರ ಇದರಲ್ಲಿ ಹಸ್ತಕ್ಷೇಪಮಾಡುವಂತಿಲ್ಲ ಎಂದು ಹೇಳುವುದು ಸರಿಯಲ್ಲ. ಇದು ಪ್ರತಿನಿಧಿಗಳ ಸಹಕಾರದಿಂದ ಒಕ್ಕೂಟ ಸರ್ಕಾರವನ್ನು ರಚಿಸುತ್ತಿದ್ದೇವೆ. ಆದ್ದರಿಂದ ಕೆಲವು ವಿಷಯಗಳಲ್ಲಿ ಕೆಲವು ಹಕ್ಕುಗಳನ್ನು ಬಿಟ್ಟುಕೊಡಬೇಕಾಗುತ್ತದೆ. ಇದರಲ್ಲಿ ಅಂಚೆ ಮತ್ತು ತಂತಿ ವ್ಯವಸ್ಥೆ ಸೇರುತ್ತದೆ. ಅದನ್ನು ಒಕ್ಕೂಟಕ್ಕೆ ಕೊಡಬೇಕು.

ಸಣ್ಣ ರಾಜ್ಯಗಳಲ್ಲಿ ರಾಜ್ಯ ಅಂಚೆ ಕಚೇರಿಗಳಿದ್ದು ರಾಜ್ಯಗಳು ಜನರ ಸ್ವಾತಂತ್ರ್ಯದ ಮೇಲೆ ನಿರ್ಬಂಧ ಹೇರುತ್ತವೆ. ಕೆಲವು ಬಾರಿ ರಾಜ್ಯಗಳು ಅಂಚೆ ಕಚೇರಿ, ಸಿಐಡಿ ಸಹಕಾರದಿಂದ ಮತ್ತಿತರ ಅಂಥವೇ ವಿಧಾನಗಳಿಂದ ರವಾನಿಸಲಾದ ಸುದ್ದಿಯನ್ನು ತಡೆಹಿಡಿಯುತ್ತವೆ, ಜನರ ರಹಸ್ಯ ಪತ್ರಗಳನ್ನು ತಡೆಹಿಡಿಯಲಾಗುತ್ತದೆ ಮತ್ತು ವ್ಯಾಜ್ಯಗಳಲ್ಲಿ ಅವರ ವಿರುದ್ಧವೇ ಬಳಸಲಾಗುತ್ತದೆ. ಆದ್ದರಿಂದ ಅಂಚೆಕಚೇರಿ ಮುಂತಾದವುಗಳಿಗೆ ಇನ್ನಷ್ಟು ಸ್ವಾತಂತ್ರ್ಯವಿರಬೇಕು, ರಾಜ್ಯಗಳು ಅವುಗಳ ಮೇಲೆ ಕನಿಷ್ಠ ಹಕ್ಕನ್ನಾದರೂ ಹೊಂದಿರಬೇಕು, ಇದರಿಂದ ಜನರಿಗೆ ಅಂಚೆ ಕಚೇರಿಗಳು ಒದಗಿಸುವ ಸೇವೆ ಉತ್ತಮವಾಗಿರುತ್ತದೆ. ಇದು ಒಕ್ಕೂಟ ಸರ್ಕಾರದ ವಿಷಯವಾದರೆ, ಆಗ ಅಂಚೆ ಕಚೇರಿಗಳು ರಾಜ್ಯಗಳ ಒಳಸಂಚುಗಳಿಂದ, ಕೆಟ್ಟ ನಿರ್ವಹಣೆಯಿಂದ, ಪಾರಾಗಬಹುದು.

ಆದ್ದರಿಂದ ಈ ಇಡೀ ವಿಷಯವನ್ನು ಶ್ರೀ ಸಂತಾನಮ್ ಅವರ ತಿದ್ದುಪಡಿಯಲ್ಲಿ ಸೂಚಿಸಲಾದಂತೆ ಪರಿಗಣಿಸಬೇಕು.]*

**ಚೌಧರಿ ನಿಹಾಲ್‌ಸಿಂಗ್ ತಕ್ಷಕ್** (ಜಿಂದ್ ರಾಜ್ಯ) : *[ಮಾನ್ಯ ಸಭಾಧ್ಯಕ್ಷರೆ, ನಾನು ಶ್ರೀ ಮಹೇಶ್ವರಿಯವರ ತಿದ್ದುಪಡಿಯ ಅರ್ಧಭಾಗವನ್ನು ವಿರೋಧಿಸುತ್ತೇನೆ. ಒಂದು ಭಾರತೀಯ ರಾಜ್ಯದ ನಿವಾಸಿಯಾದ ನನಗೆ ಸ್ವಂತದ ಅಂಚೆ ವ್ಯವಸ್ಥೆಯಿರುವ ರಾಜ್ಯಗಳ ಅದರಲ್ಲೂ ಚಿಕ್ಕ ರಾಜ್ಯಗಳ ಬಗ್ಗೆ ಅನುಭವವಿದೆ. ರಾಜ್ಯದ ಜನತೆಗೆ ಅಲ್ಲಿ ಹಲವಾರು ತೊಂದರೆಗಳಿರುತ್ತವೆ. ಅಂಚೆ ಕಚೇರಿಗಳನ್ನು ರಾಜ್ಯದ ಆದಾಯ ಮೂಲಗಳೆಂದು ಪರಿಗಣಿಸುವುದರಿಂದ ರಾಜ್ಯಗಳು ಹೆಚ್ಚು ಸಂಖ್ಯೆಯ ಅಂಚೆ ಕಚೇರಿಗಳನ್ನು ಆದಷ್ಟು ಕಡಿಮೆ ಸಂಖ್ಯೆಯ ಅಂಚೆ ಸಿಬ್ಬಂದಿಯನ್ನು ಹೊಂದಿರಲು ಪ್ರಯತ್ನಿಸುತ್ತವೆ. ಭಾರತದ ಪ್ರಾಂತ್ಯಗಳಲ್ಲಿ ವಾರದಲ್ಲಿ ಹೆಚ್ಚೆಂದರೆ ಎರಡು ಬಾರಿ ಅಂಚೆಯನ್ನು ವಿತರಿಸಲಾಗುತ್ತದೆ. ಭಾರತದ ರಾಜ್ಯಗಳಲ್ಲಿ ವಾರದಲ್ಲೊಮ್ಮೆಯೂ ಅಲ್ಲ, ತಿಂಗಳಿಗೆ ಎರಡು ಬಾರಿ ವಿತರಿಸಲಾಗುತ್ತದೆ. ಇದಕ್ಕೆ ಕಾರಣ ಅಂಚೆಯ ಪೇದೆಯರ ಕೊರತೆ.

ಇನ್ನೊಂದು ತೊಂದರೆ ಎಂದರೆ ಮನಿಆರ್ಡರ್‌ಗಳ ವಿಷಯದಲ್ಲಿ ಬ್ರಿಟಿಷ್ ಭಾರತದಲ್ಲಿ ಅಂಚೆ ಕಚೇರಿಗಳಲ್ಲಿ "ವಿನಿಮಯ" ನಡೆಯುತ್ತದೆ. ಇದಕ್ಕೆ ಬಹಳ ಸಮಯ ಬೇಕಾಗುತ್ತದೆ. ಕೆಲವು ಬಾರಿ ರಾಜ್ಯ ಖಜಾನೆಗಳಲ್ಲಿ ಹಣದ ಕೊರತೆ ಇರುವುದೂ ಇದಕ್ಕೆ ಕಾರಣ. ಮನಿಆರ್ಡರ್‌ಗಳನ್ನು ಹಲವು ದಿನಗಳ ಕಾಲ ಅಥವಾ ಹಲವು ತಿಂಗಳ ಕಾಲ ತಡಮಾಡಿ ತಲುಪಿಸಲಾಗುತ್ತದೆ.

ಇಂಥ ರಾಜ್ಯಗಳಲ್ಲಿ ಇನ್ನೊಂದು ತೊಂದರೆ ಎಂದರೆ ಅಲ್ಲಿ ಅವುಗಳದೇ ಅಂಚೆ ವ್ಯವಸ್ಥೆ ಇರುವುದರಿಂದ ಭಾರತೀಯ ರಾಜ್ಯಗಳಿಂದ ನಿವೃತ್ತಿವೇತನ ಸಂದಾಯವಾದರೂ ಸ್ವೀಕರಿಸುವವರು ಅದನ್ನು ಪಡೆಯಲು ಬಹಳ ದೂರ ಹೋಗಬೇಕಾಗುತ್ತದೆ. ವಿಧವೆಯರು ನಿವೃತ್ತಿವೇತನ ಸ್ವೀಕರಿಸಲು ಅಂಚೆ ಕಚೇರಿಗೆ ಹೋಗಲು ಎಷ್ಟು ಅನನುಕೂಲವಾಗುತ್ತದೆ ಎಂಬುದನ್ನು ನಾನು ನೋಡಿದ್ದೇನೆ.

ಇನ್ನೊಂದು ಅಂಶವೆಂದರೆ ಅಂಚೆ ಕಚೇರಿಯನ್ನು ಬಾಬಿನಲ್ಲಿ ಸೇರಿಸಲಾಗಿದೆ. ಆದರೆ ಸೇವಿಂಗ್ಸ್ ಬ್ಯಾಂಕ್ ಖಂಡವನ್ನು ಅದರಿಂದ ಪ್ರತ್ಯೇಕಿಸುವಂತಿಲ್ಲ. ರಾಜ್ಯಗಳಲ್ಲಿ ಸ್ಥಳೀಯ ಅಂಚೆ ಕಚೇರಿಗಳಿರುವಲ್ಲಿ ಸೇವಿಂಗ್ಸ್ ಬ್ಯಾಂಕ್ ಸೌಲಭ್ಯವನ್ನು ಒದಗಿಸಿಲ್ಲ. ಆದ್ದರಿಂದ ಒಕ್ಕೂಟದಿಂದ "ಗಳಿಸಲಾದ" ಎಂಬ ಪದಗಳನ್ನು ಕೈಬಿಡುವಂತಿಲ್ಲ. ಸಂವಿಧಾನವು ಕಾರ್ಯಾಚರಣೆಗೆ ಬಂದೊಡನೆ ಪ್ರಾರಂಭದಿಂದಲೇ ಅಂಚೆ ಕಚೇರಿಗಳು ಒಕ್ಕೂಟ ಸರ್ಕಾರದ ವಿಷಯವಾಗಿರಬೇಕು, ಇದರಿಂದ ರಾಜ್ಯದ ಜನತೆಯ ತೊಂದರೆಗಳು ನಿವಾರಣೆಯಾಗುವುದು ಎಂದು ಸಭೆಯನ್ನು ವಿನಂತಿಸುತ್ತೇನೆ.]*

**ಶ್ರೀ ಎ.ಪಿ. ಪಟ್ಟಾಣಿ :** ಮಾನ್ಯರೆ, ಪ್ರತಿಯೊಂದು ರೀತಿಯಲ್ಲಿಯೂ ಸಹಕರಿಸಲು ಬಯಸುವ ರಾಜ್ಯಗಳ ಬಗ್ಗೆ ಮುಂಚಿನ ಸದಸ್ಯರು ವ್ಯಕ್ತಪಡಿಸಿದ ಅಭಿಪ್ರಾಯಗಳು, ರಾಜ್ಯಗಳ ಸದಸ್ಯನಾದ ನನಗೆ ಅರ್ಥವಾಗುತ್ತಿಲ್ಲ. ರಾಜ್ಯಗಳ ಯಾವ ಒಳಸಂಚಿನ ಬಗ್ಗೆ ಅವರು ಮಾತನಾಡುತ್ತಾರೆ? ಕೇಂದ್ರಕ್ಕೆ ಅಗತ್ಯವಿರುವ ಸಂಪರ್ಕವನ್ನು ತೆಗೆದುಕೊಳ್ಳಲು ನಾವು ಕೋರುತ್ತಿದ್ದೇವೆ. ನಮ್ಮ ಕೋರಿಕೆ ಏನೆಂದರೆ ಕೇಂದ್ರಕ್ಕೆ ಅಗತ್ಯವಿರುವ, ಪ್ರಾಂತ್ಯ ಅಥವಾ ರಾಜ್ಯದ ಒಡೆತನದಲ್ಲಿರುವ ಸಂಪರ್ಕಗಳನ್ನು ಕೇಂದ್ರವೇ ಕ್ರಮಬದ್ಧಗೊಳಿಸಬೇಕು. ಇದರಲ್ಲಿ ಯಾವ ಒಳಸಂಚು ಇದೆ? ನನಗೆ ಅರ್ಥವಾಗುತ್ತಿಲ್ಲ. ಆ ಸದಸ್ಯರೇ ಇದನ್ನು ವಿವರಿಸಬೇಕು.

**ಶ್ರೀ ಗೋಪಿಕೃಷ್ಣ ವಿಜಯವರ್ಗೀಯ :** ವಿಷಯ ಹೀಗಿದೆ. ನಾನು ಹೇಳಿದ ಒಳಸಂಚು ಈಗಿನ ವ್ಯವಹಾರಗಳ ಕುರಿತಾಗಿ ಅಲ್ಲ. ಆದರೆ ಕೆಲವು ಅಂಚೆ ಕಚೇರಿಗಳಲ್ಲಿ ರಾಜ್ಯಗಳು ಪತ್ರಗಳನ್ನು ತಡೆಹಿಡಿದ, ಮತ್ತಿತರ ವಿಷಯಗಳ ಘಟನೆಗಳಾಗಿವೆ. ನಾನು ಆ ಕುರಿತು ಉಲ್ಲೇಖಿಸಿದೆ. ಪ್ರಸ್ತುತ ವ್ಯವಹಾರಗಳ ಬಗೆಗಲ್ಲ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಈ ಬಾಬಿಗೆ ಮೊದಲನೇ ತಿದ್ದುಪಡಿಯನ್ನು ಶ್ರೀ ಸಂತಾನಮ್ ಅವರು ಮಂಡಿಸಿದ್ದಾರೆ. ಈ ಪಟ್ಟಿಯಲ್ಲಿನ ಮುಂಚಿನ ತಿದ್ದುಪಡಿ ಮಂಡನೆಯಾಗಲಿಲ್ಲ. ಸರ್. ವಿ.ಟಿ. ಕೃಷ್ಣಮಾಚಾರಿಯವರು ತಿದ್ದುಪಡಿಯನ್ನು ಮಂಡಿಸದಿದ್ದರೂ ಅಂಥದೇ ತಿದ್ದುಪಡಿಯನ್ನು ಶ್ರೀ ಪಟ್ಟಾಣಿ ಮಂಡಿಸಿದ್ದಾರೆ. ಸದನವು ಒಪ್ಪುವುದಾದರೆ ಶ್ರೀ ಪಟ್ಟಾಣಿಯವರ ತಿದ್ದುಪಡಿಯ ತಾತ್ಪರ್ಯದ ಅಂಗೀಕಾರಕ್ಕೆ ಪ್ರಸ್ತಾವಿಸುತ್ತೇನೆ. ವಿ.ಟಿ. ಕೃಷ್ಣಮಾಚಾರಿಯವರು ಮಂಡಿಸದಿರುವ ತಿದ್ದುಪಡಿ ಭಾಷೆಯಲ್ಲಿ ಒಂದು ಪದಬದಲಾವಣೆಗೆ ಸಂಬಂಧಿಸಿದ್ದು 'ಯೂನಿಯನ್' ಎಂಬ ಪದಕ್ಕೆ 'ಒಕ್ಕೂಟ ಸಂಘ' ಎಂಬ ಪದವನ್ನು ಪ್ರತಿಯೋಜಿಸುವುದು. ಆಗ ಅದರ ಪಾಠ ಮುಂದಿನಂತಿರುತ್ತದೆ. 'ಒಕ್ಕೂಟ ಟೆಲಿಫೋನ್ಸ್, ವೈರ್‌ಲೆಸ್, ಪ್ರಸಾರ ಮತ್ತಿತರ ಸಂಪರ್ಕ ಸಾಧನಗಳು" ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ನಾನು ಒಪ್ಪುವುದಿಲ್ಲ.

**ಶ್ರೀ ಕೆ. ಸಂತಾನಮ್ :** ನಾನು ಅದನ್ನು ಹಿಂತೆಗೆದುಕೊಳ್ಳುತ್ತೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಈ ಬಾಬಿನ ಪದಬಳಕೆ ಕುರಿತು ಶ್ರೀ ಮಾಧವರಾವ್ ನೀಡಿದ ಕೆಲ ಅಂಶಗಳ ಬಗ್ಗೆ ನಾನು ಮಾತನಾಡಬೇಕು. ಒಂದು ರಾಜ್ಯದಲ್ಲಿ ದೇಶದ ಪರಮಾಧಿಕಾರ ಹಾಗೂ ರಾಜ್ಯದ ನಡುವೆ ಟೆಲಿಗ್ರಾಫ್ ಬಗ್ಗೆ ಕೆಲವು ಒಪ್ಪಂದಗಳಾದವು. ನಾನು ಕಾಶ್ಮೀರದ ಬಗ್ಗೆ ಹೇಳುತ್ತಿದ್ದೇನೆ. ಕಾಶ್ಮೀರದಲ್ಲಿ ಭಾರತೀಯ ಟೆಲಿಗ್ರಾಫ್ ವ್ಯವಸ್ಥೆ ಕಾರ್ಯಮಾಡುತ್ತಿರುವುದಲ್ಲದೆ, ಆ ರಾಜ್ಯದ ಟೆಲಿಗ್ರಾಫ್ ವ್ಯವಸ್ಥೆಯೂ ಇದೆ. ಇವೆರಡರ ನಡುವಣ ಸಮನ್ವಯ ಹಾಗೂ ಸಂಬಂಧಕ್ಕಾಗಿ ಆ ರಾಜ್ಯ ಹಾಗೂ ಭಾರತ ಸರ್ಕಾರದ ನಡುವಣ ಒಪ್ಪಂದದ ಮೂಲಕ ವ್ಯವಸ್ಥೆ ಕಲ್ಪಿಸಲಾಗಿದೆ. ಅಂಚೆ ಕಚೇರಿ, ಟೆಲಿಫೋನ್, ಅಂಚೆ ಕಚೇರಿ ಸೇವಿಂಗ್ಸ್ ಬ್ಯಾಂಕ್, ವೈರ್‌ಲೆಸ್ ವಿಷಯದಲ್ಲಿ ಚಕ್ರವರ್ತಿಯ ಪ್ರತಿನಿಧಿಯು ಮಾಡಿರುವ ಕೆಲವು ಆಶ್ವಾಸನೆಗಳು ಹಾಗೂ ಹೇಳಿಕೆಗಳ ಬಗೆಗೂ ಅವರು ಉಲ್ಲೇಖಿಸಿದರು. ಈಗ ನಿಷ್ಕ್ರಿಯವಾಗಿರುವ ಆ ಸೌರ್ವಭೌಮ ಅಧಿಕಾರದ ಹೇಳಿಕೆಗಳ ಬಗ್ಗೆ ನಾನೇನೂ ಹೇಳುವುದಿಲ್ಲ. ಆದರೆ ಆ ಭರವಸೆಗಳು ಯಾವುವೂ ಶಾಶ್ವತವಲ್ಲ ಎಂದು ಮಾತ್ರ ಹೇಳಬಲ್ಲೆ. ಈ ದೇಶದಲ್ಲಿ ಸಾರ್ವಭೌಮ ಅಧಿಕಾರವು ಮುಂದುವರಿದಿದ್ದರೂ, ರಾಜ್ಯ ಹಾಗೂ ಸಾರ್ವಭೌಮ ಅಧಿಕಾರದ ನಡುವೆ ಒಪ್ಪಂದ ನಡೆದು ಈ ವ್ಯವಸ್ಥೆಗಳ ಪರಿಷ್ಕರಣೆಯಾಗುತ್ತಿತ್ತು. ಈಗ ಅದು ಅಸ್ತಿತ್ವದಲ್ಲಿಲ್ಲ. ಆ ವ್ಯವಸ್ಥೆಗೆ ಈಗಲೂ ಅವಕಾಶವಿದೆ. ಈ ವಿಷಯದ ಬಗ್ಗೆ ಶ್ರೀ ಮಾಧವರಾವ್ ಅವರಿಗೆ ನನ್ನ ಸಂಕ್ಷಿಪ್ತ ಉತ್ತರವೆಂದರೆ ಇತ್ತೀಚೆಗೆ ಆಧಿಪತ್ಯಕ್ಕೆ ಸೇರಿದ ಎಲ್ಲ ರಾಜ್ಯಗಳು ಸೇರ್ಪಡೆ ಲಿಖಿತಪತ್ರಕ್ಕೆ ಸಹಿ ಮಾಡಿವೆ. ಆ ಪೈಕಿ ಸಂಪರ್ಕಕ್ಕೆ ಸಂಬಂಧಿಸಿದ ಬಾಬಿನ ವಿಷಯದಲ್ಲಿ ರಾಜ್ಯಗಳು, ಫೆಡರಲ್ ಶಾಸಕಾಂಗಕ್ಕೆ ಕಾನೂನು ರಚನಾಧಿಕಾರವಿರಬೇಕು ಎಂಬುದಕ್ಕೂ ಒಪ್ಪಿಗೆ ನೀಡಿವೆ. ಅದರ ಪಾಠ ಮುಂದಿನಂತಿದೆ :

"ಟೆಲಿಫೋನ್, ವೈರ್‌ಲೆಸ್, ಪ್ರಸಾರ ಮತ್ತಿತರ ಸಂಪರ್ಕ ಸಾಧನಗಳು ಸೇರಿ ಅಂಚೆ ಮತ್ತು ತಂತಿ."

ಇಲ್ಲಿ ಯಾವುದೇ ಮಿತಿ ಇಲ್ಲ. ವಾಸ್ತವವಾಗಿ ಬೇರೆ ಕೆಲವು ವ್ಯವಸ್ಥೆಗಳಿಂದಾಗಿ ಈ ಬಾಬಿಗೆ ಮಿತಿ ಉಂಟಾಗಿದೆ. ಈ ವಿಷಯಗಳನ್ನು ಕುರಿತ ಒಪ್ಪಂದಗಳ ಬಗ್ಗೆ ನಾನು ಹೇಳುತ್ತಿದ್ದೆ. ರಾಜ್ಯ ಹಾಗೂ ಭಾರತ ಸರ್ಕಾರದ ಮಧ್ಯೆ ಆದ ಮಾನಕ ಒಪ್ಪಂದದ ಒಂದು ಖಂಡ ಅನ್ವಯವಾಗುತ್ತಿದ್ದು ಅದರ ಪಾಠ ಮುಂದಿನಂತಿದೆ:

"ಈ ಬಗ್ಗೆ ಹೊಸ ಒಪ್ಪಂದಗಳಾಗುವವರೆಗೆ, ಚಕ್ರವರ್ತಿ ಹಾಗೂ ಭಾರತದ ಯಾವುದೇ ರಾಜ್ಯದ ನಡುವಿನ, ಈಗ ಅಸ್ತಿತ್ವದಲ್ಲಿರುವ, ಎಲ್ಲ ಒಪ್ಪಂದಗಳು ಹಾಗೂ ಸಾಮಾನ್ಯ ವಿಷಯಗಳಿಗೆ ಸಂಬಂಧಿಸಿದ ಆಡಳಿತಾತ್ಮಕ ವ್ಯವಸ್ಥೆಗಳು ಭಾರತ ಆಧಿಪತ್ಯ ಅಥವಾ ಸಂದರ್ಭಾನುಸಾರ ಅದರ ಭಾಗ ಮತ್ತು ರಾಜ್ಯಗಳ ನಡುವೆ ಹಾಗೇ ಮುಂದುವರಿಯತಕ್ಕದ್ದು."

ಹಾಗಾದಾಗ, ಹೊಸ ವ್ಯವಸ್ಥೆಗಳಾಗುವವರೆಗೆ ಈಗಾಗಲೇ ಇರುವ ಭರವಸೆಗಳು ಅಥವಾ ಒಪ್ಪಂದಗಳು ಮುಂದುವರಿಯುತ್ತವೆ. ಸ್ಥಗಿತ ಒಪ್ಪಂದದ ಅನುಸೂಚಿಯ ಪ್ರಕಾರ, ಅಂಥ ಒಪ್ಪಂದಗಳು ಅಂಚೆ, ತಂತಿ, ದೂರವಾಣಿಗಳಿಗೆ ಸಂಬಂಧಪಟ್ಟಿರುತ್ತವೆ. ಕೇಂದ್ರ ಅಧಿಕಾರಗಳ ಸಮಿತಿ ವರದಿಯಲ್ಲಿನ ಒಕ್ಕೂಟ ಪಟ್ಟಿಯ ಬಾಬಿನ ಭಾಷೆಯ ಬಗ್ಗೆ ವಿವಾದವೇ ಇರುವುದಿಲ್ಲ. ನೀವು ಈಗಾಗಲೇ ಸಹಿ ಮಾಡಿರುವ ಸೇರ್ಪಡೆ ಲಿಖಿತ ಪತ್ರದಲ್ಲಿ ಕಂಡುಬಾರದ, ಒಕ್ಕೂಟ ಶಾಸಕಾಂಗದ ಅಧಿಕಾರಗಳ ಮೇಲಣ ಮಿತಿ ಹೊಸ ಸಂವಿಧಾನದಲ್ಲಿ ಕಂಡುಬರುತ್ತದೆ. ಯಾವುದೇ ರಾಜ್ಯದ ಪರವಾಗಿ ಇರುವ ಹಕ್ಕನ್ನು ಇದು ಹೊಸ ಸಂವಿಧಾನದ ಆರಂಭದಿಂದಲೇ ಕಾಪಾಡುತ್ತದೆ. ಆ ಹಕ್ಕುಗಳು, ಒಕ್ಕೂಟ ಹಾಗೂ ಸಂಬಂಧಪಟ್ಟ ಘಟಕದ ನಡುವೆ ಒಪ್ಪಂದವಾಗಿ ಅವು ಮಾರ್ಪಾಟಾಗುವವರೆಗೆ ಅಥವಾ ರದ್ದಾಗುವವರೆಗೆ ಕಾಪಾಡಲ್ಪಡುತ್ತವೆ. ಇದು, ಶ್ರೀ ಮಾಧವರಾವ್ ಬಯಸಿದ ಸ್ಪಷ್ಟೀಕರಣ ಎಂದು ನಾನು ಅಂದುಕೊಂಡಿದ್ದೇನೆ.

ನನ್ನ ಮಿತ್ರ ಶ್ರೀ ಹಿಮ್ಮತ್‌ಸಿಂಗ್ ಒಂದು ತಿದ್ದುಪಡಿ ಮಂಡಿಸಿ ೩೨ನೇ ಬಾಬಿನ (ಎ) ಖಂಡದ ಬಗ್ಗೆ ಆಕ್ಷೇಪವೆತ್ತಿದ್ದಾರೆ. ಈ ಖಂಡದಲ್ಲಿರುವ "ಒಕ್ಕೂಟ ಸರ್ಕಾರ"ದಿಂದ ಪಡೆಯಲಾದ ಎಂಬ ಪದಗಳಿಂದಾಗಿ ಕೇಂದ್ರದ ಬಗ್ಗೆ ತಮಗೆ ಇರುವ ಶಂಕೆ ಹೆಚ್ಚಾಗಿರುವುದಾಗಿ ತಿಳಿಸಿದ್ದಾರೆ. ನಾನು ಸದನಕ್ಕೆ ಒಂದು ಅಂಶವನ್ನು ತಿಳಿಸುತ್ತೇನೆ: ಕೇಂದ್ರ ಹಾಗೂ ಘಟಕಗಳ ಮಧ್ಯೆ ನಡೆಯುವ ಅಧಿಕಾರ ಹಂಚಿಕೆ ಪ್ರಕಾರ ಅಂಚೆ ಮತ್ತು ತಂತಿ ವ್ಯವಸ್ಥೆ ಸಾಮಾನ್ಯವಾಗಿ ಒಕ್ಕೂಟದ ಸಂಪೂರ್ಣ ನಿಯಂತ್ರಣದಲ್ಲಿರಬೇಕು.

ಒಕ್ಕೂಟಕ್ಕೆ ಸಮ್ಮತಿ ತಿಳಿಸಿದ ರಾಜ್ಯಗಳಲ್ಲಿ ಈಗಿರುವ ವ್ಯವಸ್ಥೆ ಹೊಸ ವ್ಯವಸ್ಥೆಯಾಗುವವರೆಗೆ ಮುಂದುವರಿಯುತ್ತದೆ ಎಂಬ ವಾಸ್ತವಾಂಶವನ್ನು ನಾವು ಮಾನ್ಯ ಮಾಡುತ್ತೇವೆ. ಭವಿಷ್ಯದಲ್ಲಿ ಒಮ್ಮೆ ಒಕ್ಕೂಟವು ದೇಶದ ಹಿತದೃಷ್ಟಿಯಿಂದ ಒಂದು ರಾಜ್ಯದ ಅಂಚೆ ಆಡಳಿತವನ್ನು ಕೈಗೆತ್ತಿಕೊಳ್ಳುವುದು ಅಗತ್ಯವೆಂದು ಭಾವಿಸುತ್ತದೆ. ಮಾನ್ಯರೆ, ಭಾರತದ ಒಟ್ಟಾರೆ ಹಿತದ ದೃಷ್ಟಿಯಿಂದ, ಆ ನಿರ್ದಿಷ್ಟ ರಾಜ್ಯಕ್ಕಿರುವ ಯಾವುದೇ ಹಕ್ಕುಗಳನ್ನು ಪಡೆಯುವ ಅಧಿಕಾರ ಒಕ್ಕೂಟಕ್ಕೆ ಇರಬೇಕು. ಎಂದು ನನ್ನ ಭಾವನೆ. ಅಥವಾ "ಒಕ್ಕೂಟವು ಗಳಿಸಿದರೆ" ಎಂದು ನಾವು ಹೇಳಿದಾಗ ಅದರ ಅರ್ಥವೇನೆಂದರೆ ಒಕ್ಕೂಟ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಕ್ಕೆ ತಕ್ಕ ನಷ್ಟ ಪರಿಹಾರ ನೀಡಲಾಗುವುದು. ಒಕ್ಕೂಟ ವ್ಯವಸ್ಥೆಯನ್ನು ಮೆಚ್ಚುವ ಯಾರೇ ಆಗಲಿ, ಕೇಂದ್ರಕ್ಕೆ ಇಂಥ ಅಧಿಕಾರ ಇರುವ ಬಗ್ಗೆ ಆಕ್ಷೇಪವೆತ್ತಲಾರರು.

ಮಾನ್ಯರೆ, ಶ್ರೀ ಹಿಮ್ಮತ್‌ಸಿಂಗ್ ಅವರು ಮಂಡಿಸಿದ ಇನ್ನೊಂದು ತಿದ್ದುಪಡಿಯ ಬಗ್ಗೆ ಹೇಳುವುದಾದರೆ ಅವರು ಅಂಚೆ ಕಚೇರಿ ಉಳಿತಾಯ ಬ್ಯಾಂಕುಗಳನ್ನು ಪ್ರಾಂತ್ಯಗಳಿಗೆ ಸೀಮಿತಗೊಳಿಸಬೇಕೆಂದು ಹೇಳುತ್ತಾರೆ. ಅದರ ಪ್ರಯೋಜನಗಳನ್ನು ಹೊರತುಪಡಿಸಿ ನೋಡಿದಾಗ, ನಾವು ಹಾಗೆ ಮಾಡಿದರೆ ಅದರಿಂದ ಈಗಿರುವ ವ್ಯವಸ್ಥೆ ಸಂಪೂರ್ಣವಾಗಿ ಅಸ್ಥಿರವಾಗುತ್ತದೆ. ಈಗ ನೂರಾರು ರಾಜ್ಯಗಳಿವೆ ಹಾಗೂ ಅಲ್ಲಿ ಈ ಕೆಲಸ ಮಾಡುತ್ತಿರುವ ಸಾವಿರಾರು ಅಂಚೆ ಕಚೇರಿಗಳಿವೆ. ಹಾಗಾದರೆ ಯಾವುದೇ ಭಾರತೀಯ ರಾಜ್ಯದ ಈ ಬಗೆಯ ವ್ಯವಸ್ಥೆ ಕುರಿತು ಒಕ್ಕೂಟ ಏನೂ ಮಾಡುವಂತಿಲ್ಲವೇ? ಆಗ ನಾವು ಮಾಡಬಹುದಾದುದೆಂದರೆ, ಒಂದು ರಾಜ್ಯದಲ್ಲಿ ಅಂಚೆ ಕಚೇರಿಯಿಂದ ಬೇರ್ಪಡಿಸಿ ತನ್ನದೇ ಸೇವಿಂಗ್ಸ್ ಬ್ಯಾಂಕ್ ನಡೆಸಲು ಮುಂದಾದರೆ,

ಆಗ ಆಡಳಿತಾತ್ಮಕ ದೃಷ್ಟಿಯಿಂದ ರಾಜ್ಯದಲ್ಲಿರುವ ಯಾವ ಅಂಚೆ ಕಚೇರಿಗಳೂ ಸೇವಿಂಗ್ಸ್ ಬ್ಯಾಂಕ್ ಕೆಲಸವನ್ನು ಮಾಡಬಹುದೆ ಅಥವಾ ಬೇಡವೆ ಎಂಬ ಬಗ್ಗೆ ರಾಜ್ಯ ಹಾಗೂ ಭಾರತ ಸರ್ಕಾರದ ಮಧ್ಯೆ ಮಾತುಕತೆಗಳಾಗಬೇಕಾಗುತ್ತದೆ. ಅದು ಸಾಧ್ಯವಿದೆ. ಆದರೆ ಯಾವುದೇ ರಾಜ್ಯದಲ್ಲಿ ಇದು ಘಟಿಸಿದರೆ ಮುಂದಿನ ಆಧಿಪತ್ಯದ ಸರ್ಕಾರ ಈ ಬಗ್ಗೆ ಪರಿಶೀಲಿಸುತ್ತದೆ ಎಂದು ಹೇಳಬಹುದು. ಎಲ್ಲ ಭಾರತೀಯ ರಾಜ್ಯಗಳಲ್ಲಿರುವ ಅಂಚೆ ಕಚೇರಿ ಸೇವಿಂಗ್ಸ್ ಬ್ಯಾಂಕ್‌ಗಳನ್ನು ಒಕ್ಕೂಟದ ಪರಿಧಿಯಿಂದ ತೆಗೆದು ಹಾಕಿದರೆ ಭಾರತೀಯ ರಾಜ್ಯಗಳ ಹಣಕಾಸು ಸ್ಥಿತಿ ತುಂಬ ಅಸ್ಥಿರಗೊಳ್ಳುವುದರಿಂದ ನಾನು ಸದನಕ್ಕೆ ಈ ವ್ಯವಸ್ಥೆಯ ಬಗ್ಗೆ ಶಿಫಾರಸು ಮಾಡುವುದಿಲ್ಲ.

ಮಾನ್ಯರೆ, ಶಿಬನ್‌ಲಾಲ್ ಸಕ್ಸೇನ ಅವರು ಮಂಡಿಸಿದ ತಿದ್ದುಪಡಿ ಮುಂದಿನಂತಿದೆ :

"೩೨ನೇ ಬಾಬಿನ (ಬಿ) ಕಂಡಿಕೆಗೆ ಈ ಮುಂದಿನದನ್ನು ಬದಲಿಸುವುದು :

'(ಬಿ) ದೂರವಾಣಿ, ನಿಸ್ತಂತು, ಪ್ರಸಾರ ಮತ್ತಿತರ ಸಂಪರ್ಕ ಪ್ರಕಾರಗಳು.

ಪ್ರಸ್ತುತ ಒಕ್ಕೂಟದ ಒಡೆತನಕ್ಕೆ ಸೇರಿರದ ಅಂಥ ಸಂಪರ್ಕ ವ್ಯವಸ್ಥೆಗಳ ಒಡೆತನ.' "

ಮಾನ್ಯರೆ, ಶ್ರೀ ಶಿಬನ್‌ಲಾಲ್ ಸಕ್ಸೇನ ಅವರು ಬಯಸಿರುವ ತಾತ್ಪರ್ಯವು ನಾನು ಈಗಾಗಲೇ ಹೇಳಿರುವ ಈ ಬಾಬಿನ ತಿದ್ದುಪಡಿ ರೂಪದಲ್ಲಿ ಸೇರುತ್ತದೆ.

ಇನ್ನು ನಾನು ಉಲ್ಲೇಖಿಸಬೇಕಾದ ಒಂದೇ ತಿದ್ದುಪಡಿ ಎಂದರೆ ಶ್ರೀ ನಜಿರುದ್ದೀನ್ ಅಹ್ಮದ್ ಅವರು ಮಂಡಿಸಿದ ತಿದ್ದುಪಡಿ. ಈಗ (ಬಿ)ಖಂಡದಲ್ಲಿ ಇರುವ "ಇತರ ಸಂಪರ್ಕ ಸಾಧನಗಳು" ಎಂಬ ಪದಗಳು ದೂರವಾಣಿ, ನಿಸ್ತಂತು ಹಾಗೂ ಪ್ರಸಾರದಂಥವೇ ಸಂಪರ್ಕಸಾಧನಗಳನ್ನು ಸೂಚಿಸುತ್ತವೆ ಎಂದು ಅವರು ಸರಿಯಾಗಿ ತಿಳಿಸಿದ್ದಾರೆ. ಕೇಂದ್ರವು ಅಂಚೆ ಕಚೇರಿಗಳು ಮತ್ತು ತಂತ್ರ ವ್ಯವಸ್ಥೆಯಂಥ ಸಂಪರ್ಕಸಾಧನಗಳನ್ನು ಕ್ರಮಬದ್ಧಗೊಳಿಸುವ ಅಧಿಕಾರ ಹೊಂದಿರಬೇಕು ಎಂಬುದು ಅವರ ಇಚ್ಛೆ. ಈ ಬಗ್ಗೆ ನಾನು ಹೇಳಬೇಕಾದುದಿಷ್ಟೆ (ಎ) ಬಾಬಿನಲ್ಲಿರುವ ಅಂಚೆ-ತಂತಿ ಕೇಂದ್ರದ ವಿಷಯವಾಗಿರುತ್ತದೆ. ಅಪರೂಪದ ವ್ಯವಸ್ಥೆಯಲ್ಲಿ ಭಾರತೀಯ ರಾಜ್ಯಗಳಲ್ಲಿ ಮುಂದುವರಿದಿರುವ ಅಂಚೆ ಅಥವಾ ತಂತಿ ವ್ಯವಸ್ಥೆಯ ಕ್ರಮಬದ್ಧತೆ ಹಾಗೂ ನಿಯಂತ್ರಣಕ್ಕೆ ಕಾನೂನುಮಾಡುವ ಅಧಿಕಾರ ಕೇಂದ್ರಕ್ಕೆ – ಒಕ್ಕೂಟದ ಸಂಸತ್ತಿಗೆ ಇರುತ್ತದೆ ಎಂಬುದು ನಿಮ್ಮ ಗಮನಕ್ಕೆ ಬರುತ್ತದೆ.

ಅಂಥ ವಿಶೇಷ ವ್ಯವಸ್ಥೆಗೆ ಒಳಪಡದ ಪ್ರದೇಶಗಳಲ್ಲಿ, ವ್ಯಕ್ತಿ-ವ್ಯಕ್ತಿಗಳ ನಡುವೆ, ವ್ಯಕ್ತಿ ಹಾಗೂ ವ್ಯಕ್ತಿ ಸಮೂಹಗಳ ನಡುವೆ ಬೇರಾವುದೇ ಪ್ರಕಾರದ ಅಂಚೆ ಸಂಪರ್ಕ ನಡೆಯುವುದನ್ನು ನಿಷೇಧಿಸುವ ಪೂರ್ಣ ಅಧಿಕಾರ ಸಂಯುಕ್ತ ಸಂಸತ್ತಿಗೆ ಇರುತ್ತದೆ. ಈಗಿರುವ ಅಂಚೆ ಕಚೇರಿ ಅಧಿನಿಯಮದ ಒಂದು ಪ್ರಕರಣದಲ್ಲಿ, ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಪತ್ರಗಳನ್ನು ರವಾನಿಸಲು, ಯಾವುದೇ ಖಾಸಗಿ ವ್ಯವಸ್ಥೆ ಮಾಡಿ ನಿಯತ ಅಂಚೆ ವ್ಯವಸ್ಥೆಗೆ ಮೋಸಮಾಡುವುದನ್ನು ಅಪರಾಧವೆಂದು ಪರಿಗಣಿಸಲಾಗಿದೆ. ಅಂಚೆ ಕಚೇರಿ ಅಧಿನಿಯಮದಡಿ ಅದು ಒಂದು ಅಪರಾಧ, ಆ ವ್ಯವಸ್ಥೆ ಮುಂದುವರಿಯುವುದು ಖಂಡಿತ ತಪ್ಪು. ಪ್ರಸ್ತುತ ಯಾರೊಬ್ಬರೂ ಸರ್ಕಾರದ ದೂರತಂತಿ ಕಚೇರಿಯನ್ನು ಹೊರತುಪಡಿಸಿ ಟೆಲಿಗ್ರಾಂ ಕಳುಹಿಸುವಂತಿಲ್ಲ. ಈ ದೃಷ್ಟಿಯಿಂದ ಅವರು ಬಯಸಿದ ಬಾಬಿನ ಸೇರ್ಪಡೆಗಾಗಿ ಅವರು ಆಗ್ರಹಿಸುವ ಅಗತ್ಯವಿಲ್ಲವೆನಿಸುತ್ತದೆ. ಮಾನ್ಯರೆ, ನಾನು ಹೆಚ್ಚಿಗೇನೂ ಹೇಳುವುದಿಲ್ಲ. ಪರಿಣಾಮವೆಂದರೆ ಸರ್ ವಿ.ಟಿ. ಕೃಷ್ಣಮಾಚಾರಿಯವರ ಶೈಲಿಯಲ್ಲಿರುವ ಶ್ರೀ ಪಟ್ಟಾಣಿಯವರ ತಿದ್ದುಪಡಿಯನ್ನು ಸ್ವೀಕರಿಸುತ್ತೇನೆ ಮತ್ತು ಉಳಿದೆಲ್ಲ ತಿದ್ದುಪಡಿಗಳನ್ನು ವಿರೋಧಿಸುತ್ತೇನೆ.

**ಮಾನ್ಯ ಸಭಾಧ್ಯಕ್ಷರು** : ನಾನು ಈಗ ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಇದಕ್ಕೆ ಸರಿಯಾದ ವಿಧಾನವೆಂದರೆ ಬಾಬನ್ನು ಒಂದೊಂದು ಕಂಡಿಕೆಯನ್ನಾಗಿ ತೆಗೆದುಕೊಳ್ಳುವುದು.

ಮೊದಲನೇ ತಿದ್ದುಪಡಿ ಶ್ರೀ ಮಾಧವರಾವ್ ಅವರದು :

"೩೨ನೇ ಬಾಬಿನಲ್ಲಿ(ಎ) ಕಂಡಿಕೆಯಲ್ಲಿ 'ಅಂಚೆ ಮತ್ತು ತಂತಿ' ಎಂಬ ಪದಗಳ ತರುವಾಯ 'ದೂರವಾಣಿ, ಅಂಚೆ ಕಚೇರಿ, ಸೇವಿಂಗ್ಸ್ ಬ್ಯಾಂಕ್' ಎಂಬ ಪದಗಳನ್ನು ಸೇರಿಸುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಅನಂತರದ ತಿದ್ದುಪಡಿ ಹಿಮ್ಮತ್‌ಸಿಂಗ್ ಅವರದು :

"೩೨ನೇ ಬಾಬಿನಲ್ಲಿ(ಎ) ಕಂಡಿಕೆಯಲ್ಲಿ 'ಅಥವಾ ಒಕ್ಕೂಟದಿಂದ ಗಳಿಸಲಾಗದ' ಎಂಬ ಪದಗಳನ್ನು ಬಿಟ್ಟುಬಿಡುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ನಾನು (ಬಿ) ಖಂಡಕ್ಕಿರುವ ತಿದ್ದುಪಡಿಗಳನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಕೆ. ಸಂತಾನಮ್** : (ಎ) ಖಂಡಕ್ಕೆ ಸಂಬಂಧಿಸಿದಂತೆ "ರಾಜ್ಯ ಘಟಕ" ಎಂಬ ಪದಗಳ ಬಗ್ಗೆ ನನ್ನದೊಂದು ತಿದ್ದುಪಡಿಯಿದೆ. ಈ ಪದಗಳು ಗೊಂದಲವನ್ನುಂಟುಮಾಡುವ ಸಾಧ್ಯತೆ ಇದೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಆ ವಾಕ್ಯ ಭಾಗವನ್ನು ಒಪ್ಪಗೊಳಿಸುವ ಕಾರ್ಯವನ್ನು ಅವರು ಪ್ರಾರೂಪಣಕಾರರಿಗೆ ಬಿಡಬಹುದು.

**ಶ್ರೀ ಕೆ. ಸಂತಾನಮ್** : ಇಲ್ಲಿ ಉದ್ದೇಶಿಸಲಾಗಿರುವುದು ರಾಜ್ಯಗಳು ಎಂದೇ?

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಹೌದು.

**ಮಾನ್ಯ ಸಭಾಧ್ಯಕ್ಷರು** : ೩೨(ಬಿ) ಬಾಬಿಗೆ ಮೊದಲನೇ ತಿದ್ದುಪಡಿ, ಸರ್. ವಿ.ಟಿ. ಕೃಷ್ಣಮಾಚಾರಿಯವರ ಭಾಷೆಯಲ್ಲಿ ಇರುವ ಶ್ರೀ ಪಟ್ಟಾಣಿಯವರ ತಿದ್ದುಪಡಿ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಸಂತಾನಮ್ ಅವರು ತಮ್ಮ ತಿದ್ದುಪಡಿಯನ್ನು ಹಿಂಪಡೆಯುತ್ತಾರೆಂದು ಭಾವಿಸುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಶ್ರೀ ಶಿಬನ್‌ಲಾಲ್ ಸಕ್ಸೇನ ಅವರ ತಿದ್ದುಪಡಿಯನ್ನು ಈಗ ಪ್ರತ್ಯೇಕವಾಗಿ ಸಭೆಯ ಮುಂದಿರಿಸುವುದು ಅನಗತ್ಯವೆಂದು ಭಾವಿಸುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು** : ನಾವು ಶ್ರೀ ಮಾಧವರಾವ್ ಅವರ ತಿದ್ದುಪಡಿಯನ್ನು ಕೈಗೆತ್ತಿಕೊಳ್ಳೋಣ.

**ಶ್ರೀ ಎನ್. ಮಾಧವರಾವ್** : ಇದು ಆನುಷಂಗಿಕವಾಗಿರುವುದರಿಂದ ಇದನ್ನು ಬಿಟ್ಟುಬಿಡಬಹುದು. ಅಂತೆಯೇ ೩೨(ಸಿ) ಸಂಬಂಧದ ನನ್ನ ತಿದ್ದುಪಡಿಯೂ (ಆನುಷಂಗಿಕ).

**ಮಾನ್ಯ ಸಭಾಧ್ಯಕ್ಷರು** : ನಾವೀಗ ಶ್ರೀ ಹಿಮ್ಮತ್‌ಸಿಂಗ್ ಅವರ ತಿದ್ದುಪಡಿಯನ್ನು ನೋಡೋಣ. ಅದು:

"೩೨ನೇ ಬಾಬಿನ (ಸಿ) ಕಂಡಿಕೆಯ ಕೊನೆಯಲ್ಲಿ 'ಒಂದು ಪ್ರಾಂತ್ಯದಲ್ಲಿ' ಎಂಬ ಪದಗಳನ್ನು ಸೇರಿಸುವುದು".

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಶ್ರೀ ನಜಿರುದ್ದೀನ್ ಅಹ್ಮದ್ ಅವರ ಒಂದು ತಿದ್ದುಪಡಿ ಮಾತ್ರ ಉಳಿದಿದೆ. ಅದು:

"೩೨ನೇ ಬಾಬಿನಲ್ಲಿ (ಬಿ) ಕಂಡಿಕೆಯ ಅನಂತರ ಮುಂದಿನ ಹೊಸ ಪರಿಚ್ಛೇದವನ್ನು ಸೇರಿಸುವುದು:

'(ಬಿಬಿ) ಸಂಪರ್ಕದ ಇತರ ಅಂಥವೇ ಪ್ರಕಾರಗಳು'."

**ಶ್ರೀ ನಜಿರುದ್ದೀನ್ ಅಹ್ಮದ್** : ನಾನು ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಬಾಬನ್ನು ತಿದ್ದುಪಡಿಯಾದ ರೂಪದಲ್ಲಿ ಸಭೆಯ ಮುಂದೆ ಮತಕ್ಕೆ ಹಾಕುತ್ತೇನೆ. ೩೨ನೇ ಬಾಬನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಬಾಬು – ೩೩

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ನಾನು ಮಂಡಿಸಲು ಅನುಮತಿ ಕೋರುತ್ತೇನೆ :

"೩೩ನೇ ಬಾಬಿನಲ್ಲಿ ಆವರಣದಲ್ಲಿರುವ 'ಸಣ್ಣ ರೈಲ್ವೆಯಲ್ಲದ ಇತರ' ಎಂಬ ಪದಗಳನ್ನು ಬಿಟ್ಟುಬಿಡುವುದು."

ಇದು ಕೇವಲ ಪ್ರಾರೂಪಣ ತಿದ್ದುಪಡಿ. ಇದು ಭಾರತ ಸರ್ಕಾರದ ಅಧಿನಿಯಮದ ಪಟ್ಟಿ ೧ರ ಬಾಬಿಗೆ ಸಂಬಂಧಿಸಿದೆ. ಇದು ಯಥಾವತ್ ಹಾಗೇ ಇದೆ. ಒಂದು ಅಪವಾದವೆಂದರೆ ಮಾದರಿಯಲ್ಲಿ ಇಲ್ಲದ ಎರಡು ಬ್ರಾಕೆಟ್ಟುಗಳು ಇಲ್ಲಿ ಕಾಣಿಸಿಕೊಂಡಿವೆ. ಬ್ರಾಕೆಟ್ಟುಗಳು ಅನಗತ್ಯ ಎಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಅವು ಇಲ್ಲದಿದ್ದರೇ ಈ ಬಾಬು ಚೆಂದವಾಗಿ ಕಾಣುತ್ತದೆ. ದಿಟದಲ್ಲಿ ನನಗೆ ಈ ಬ್ರಾಕೆಟುಗಳು ಅವಲಕ್ಷಣವಾಗಿ ತೋರುತ್ತವೆ. ಅವು ಓದುಗನಿಗೆ ತಡೆಯೊಡ್ಡುವ ಅಡಚಣೆಗಳಂತೆ ಭಾಸವಾಗುತ್ತವೆ.

ಇದು ಕೇವಲ ಪ್ರಾರೂಪಣ ತಿದ್ದುಪಡಿಯಷ್ಟೆ, ಅದನ್ನು ಪರಿಶೀಲಿಸಬೇಕೆಂದು ಸದನಕ್ಕೆ ಸೂಚಿಸುತ್ತಿದ್ದೇನೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ಈ ಬಗೆಯ ಪಟ್ಟಿಯಲ್ಲಿ ಆವರಣ ಚಿಹ್ನೆ ಅಸಂಗತ. ನಾನು ಈ ತಿದ್ದುಪಡಿಯನ್ನು ಒಪ್ಪುತ್ತೇನೆ. ಆದರೆ ಶ್ರೀ ನಜಿರುದ್ದೀನ್ ಅವರಿಗೆ ಅನುಚಿತವೆನಿಸುವುದಿಲ್ಲವೆಂದಾದರೆ ಆ ಅಭಿವ್ಯಕ್ತಿಯ ಮುಂಚೆ ಮತ್ತು ಅನಂತರ ಅಲ್ಪವಿರಾಮ ಚಿಹ್ನೆಯನ್ನು ಹಾಕುತ್ತೇನೆ. (ನಗು)

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯರೆ, ನಾನು ಒಪ್ಪುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಈ ಬಾಬಿಗೆ ಬೇರೆ ತಿದ್ದುಪಡಿ ಇಲ್ಲ. ಶ್ರೀ ನಜಿರುದ್ದೀನ್ ಅಹ್ಮದ್ ಅವರ ತಿದ್ದುಪಡಿಯನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಒಪ್ಪಿದ್ದಾರೆ.

ನಾನು ಈಗ ಈ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಈ ಬಾಬನ್ನು ತಿದ್ದುಪಡಿಯಾದಂತೆ ಮತಕ್ಕೆ ಹಾಕುತ್ತೇನೆ.

೩೩ನೇ ಬಾಬು ತಿದ್ದುಪಡಿಯಾದಂತೆ ಅಂಗೀಕೃತವಾಯಿತು.

## ಬಾಬು – ೩೪

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ೩೪ನೇ ಬಾಬಿನಲ್ಲಿ, ಕೊನೆಯಲ್ಲಿ ಈ ಮುಂದಿನದನ್ನು ಸೇರಿಸಬೇಕೆಂದು ಮಂಡಿಸುತ್ತೇನೆ.

"ವಾಣಿಜ್ಯ ನೌಕಾಪಡೆ ನೌಕಾಶಿಕ್ಷಣ ಮತ್ತು ತರಬೇತಿಗೆ ಏರ್ಪಾಡು ಕಲ್ಪಿಸುವುದು, ಘಟಕಗಳು ಮತ್ತು ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣ ಮತ್ತು ತರಬೇತಿಯ ನಿಯಂತ್ರಣ."

ವಾಣಿಜ್ಯ ನೌಕಾಪಡೆ ನೌಕಾಶಿಕ್ಷಣದ ಇಂಜಿನಿಯರ್, ಪೈಲಟ್ ಹಾಗೂ ಎಕ್ಸಿಕ್ಯೂಟಿವ್ ಇಂಜಿನಿಯರ್ ಅವರಿಗೆ ಇರಬೇಕಾದ ವಿದ್ಯಾರ್ಹತೆಯ ಕೇಂದ್ರೀಕರಣವನ್ನು ವಿಸ್ತರಿಸುವ ಅಗತ್ಯವಿಲ್ಲ. ಎಲ್ಲ ಗುಣಮಟ್ಟ ಮತ್ತು ಶಿಕ್ಷಣದ ಏರ್ಪಾಟು ಕೇಂದ್ರದ ನಿಯಂತ್ರಣದಲ್ಲಿರುವುದು ಅಗತ್ಯ. ಆದರೆ ವಿಶ್ವವಿದ್ಯಾಲಯಗಳು, ಇತರೆ ಏಜೆನ್ಸಿಗಳು ಅಂಥ ಶಿಕ್ಷಣ ಒದಗಿಸುವುದನ್ನು ನಿಷೇಧಿಸಲು ಯಾವ ಕಾರಣವೂ ಇಲ್ಲ. ಅಂಥ ಶಿಕ್ಷಣ ಮತ್ತು ತರಬೇತಿ ಕೇಂದ್ರವು ನಿರ್ದಿಷ್ಟಪಡಿಸಿದ ಗುಣಮಟ್ಟಕ್ಕೆ ಅನುಸಾರವಾಗಿರಬೇಕು. ಅಷ್ಟೇ, ನಾನು ಮಂಡಿಸುತ್ತಿರುವ ತಿದ್ದುಪಡಿಯು ಕೇಂದ್ರವು ಆ ಏರ್ಪಾಟು ಕಲ್ಪಿಸುವುದಕ್ಕೆ ಮತ್ತು ವಿಶ್ವವಿದ್ಯಾಲಯಗಳು

ಮತ್ತು ರಾಜ್ಯ ಏಜೆನ್ಸಿಗಳು ಕಲ್ಪಿಸುವ ವ್ಯವಸ್ಥೆಗೆ ಕೇಂದ್ರದ ನಿಯಂತ್ರಣಕ್ಕೆ ಅವಕಾಶವಿರುತ್ತದೆ.

(ಜಿ.ಎಲ್. ಮೆಹ್ತಾ ಮತ್ತು ಪ್ರೊ. ಶಿಬನ್‌ಲಾಲ್ ಸಕ್ಸೇನ ತಮ್ಮ ತಿದ್ದುಪಡಿಗಳನ್ನು ಮಂಡಿಸಲಿಲ್ಲ).

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಮಾನ್ಯರೆ, ನಾನು ಶ್ರೀ ಸಂತಾನಮ್ ಅವರ ತಿದ್ದುಪಡಿಯನ್ನು ಒಪ್ಪುತ್ತೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಸಂತಾನಮ್ ಅವರು ಮಂಡಿಸಿದ ತಿದ್ದುಪಡಿಯನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಒಪ್ಪುತ್ತಾರೆ. ಎಂದರೆ ೩೪ನೇ ಬಾಬಿನ ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು.

"ವಾಣಿಜ್ಯ ನೌಕಾಪಡೆ ನೌಕಾಶಿಕ್ಷಣ ಮತ್ತು ತರಬೇತಿಗೆ ಏರ್ಪಾಡು ಕಲ್ಪಿಸುವುದು, ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣ ಮತ್ತು ತರಬೇತಿಯ ನಿಯಂತ್ರಣ."

ಈಗ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

ಈ ತಿದ್ದುಪಡಿಯನ್ನು ಅಂಗೀಕರಿಸಲ್ಪಾಯಿತು.

**ಮಾನ್ಯ ಸಭಾಧ್ಯಕ್ಷರು :** ಮುಂದಿಟ್ಟಿರುವ ವಿಷಯವೇನೆಂದರೆ, ೩೪ನೇ ಬಾಬನ್ನು ತಿದ್ದುಪಡಿಯಾಗಿರುವಂತೆ ಅದನ್ನು ಅಂಗೀಕರಿಸುವುದು.

೩೪ನೇ ಬಾಬು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಬಾಬು – ೩೫

**ಮಾನ್ಯ ಸಭಾಧ್ಯಕ್ಷರು :** ೩೫ನೇ ಬಾಬಿಗೆ ಯಾವುದೇ ತಿದ್ದುಪಡಿ ಇಲ್ಲ. ಅದನ್ನು ಮತಕ್ಕೆ ಹಾಕುತ್ತೇನೆ. ಈ ಬಾಬನ್ನು ಅಂಗೀಕರಿಸಲಾಯಿತು.

## ಬಾಬು – ೩೬

**ಶ್ರೀ ಎಚ್.ವಿ. ಪಾಟಸ್ಕರ್ :** ಮಾನ್ಯರೆ, ೩೬ನೇ ಬಾಬಿನ, ಕೊನೆಯಲ್ಲಿ ಈ ಮುಂದಿನದನ್ನು ಸೇರಿಸಬೇಕೆಂದು ನಾನು ಮಂಡಿಸಲು ಇಚ್ಛಿಸುತ್ತೇನೆ :

"ಮತ್ತು ಅಲ್ಲಿಯ ಬಂದರು ಪ್ರಾಧಿಕಾರಗಳ ರಚನೆ ಮತ್ತು ಅಧಿಕಾರಗಳು."

**ಶ್ರೀ ಆರ್.ಕೆ. ಸಿಧ್ವಾ** (ಸಿ.ಪಿ. ಮತ್ತು ಬೇರಾರ್ : ಸಾಮಾನ್ಯ) : ಮಾನ್ಯರೆ, ೧೯೩೫ರ ಭಾರತ ಸರ್ಕಾರ ಅಧಿನಿಯಮ ಅಸ್ತಿತ್ವದಲ್ಲಿ ಬರುವವರೆಗೆ ಭಾರತದ ಎಲ್ಲ ಪ್ರಮುಖ ಬಂದರುಗಳನ್ನು ಪ್ರಾಂತೀಯ ಸರ್ಕಾರಗಳು ನಿಯಂತ್ರಿಸುತ್ತಿದ್ದವು, ಆದರೆ ಅದಕ್ಕೆ ಮುಂಚೆ ವಿವಿಧ ಪೋರ್ಟ್ ಟ್ರಸ್ಟ್‌ಗಳ ಆಡಳಿತ ಸಮಿತಿಗಳಿಗೆ ವ್ಯಾಪಕ ಹಕ್ಕು ನೀಡಲಾಗಿತ್ತು. ಇದರಿಂದ ಅಧಿಕಾರೇತರರ ಸಂಖ್ಯೆ ಹೆಚ್ಚಿತು. ಅಧಿಕಾರಶಾಹಿ ಭಾರತ ಸರ್ಕಾರವು ಆ ಪೋರ್ಟ್ ಟ್ರಸ್ಟ್‌ಗಳನ್ನು ನಿಯಂತ್ರಿಸುತ್ತಿದ್ದು ಕಾಲಕ್ರಮದಲ್ಲಿ ಆ ಅಧಿಕಾರವನ್ನು ಪ್ರಾಂತೀಯ ಸರ್ಕಾರಗಳಿಂದ ತೆಗೆದುಕೊಂಡಿತು. ಕೇಂದ್ರ ಸರ್ಕಾರಕ್ಕೆ ಮತ್ತೆ ಈ ಮುಖ್ಯ ಬಂದರುಗಳನ್ನು ನಿಯಂತ್ರಿಸುವ ಹೊರೆ ಬೇಡ ಎನಿಸಿತ್ತು. ಆದರೂ ಈಗಿರುವ ಸನ್ನಿವೇಶಗಳನ್ನು ನೋಡಿದಾಗ ಎಲ್ಲ ಪ್ರಮುಖ ಬಂದರುಗಳಿಗೆ ಏಕರೂಪದ ಕಾನೂನು ಇರಬೇಕು ಎನಿಸಿದರೆ ಈ ಬಾಬನ್ನು ಈ ಪಟ್ಟಿಯಿಂದ ತೆಗೆದು ೨ನೇ ಪಟ್ಟಿಗೆ ಸೇರಿಸಬೇಕೆಂಬ ತಿದ್ದುಪಡಿಗೆ ನಾನು ಆಗ್ರಹಿಸುವುದಿಲ್ಲ.

**ಶ್ರೀ ಎ.ಪಿ. ಪಟ್ಟಾಣಿ :** ಮಾನ್ಯ ಸಭಾಧ್ಯಕ್ಷರೆ, ಈ ಸಂಬಂಧದಲ್ಲಿ ನನ್ನ ಸೂಚನೆ ಏನೆಂದರೆ ಈ ಬಾಬಿಗೆ ಕೊನೆಯಲ್ಲಿ ಈ ಮುಂದಿನ ನಿಬಂಧನೆಯನ್ನು ಸೇರಿಸುವುದು, ಎಂದರೆ :

"ಪರಂತು ಒಕ್ಕೂಟಕ್ಕೆ ಸೇರಿದ ಕಡಲ ಸಮೀಪದ ರಾಜ್ಯಗಳೊಂದಿಗೆ ಸಮಾಲೋಚಿಸಿ ಆ ರಾಜ್ಯಗಳ ಬಂದರುಗಳಿಗೆ ಅಂಥ ಘೋಷಣೆ ಅಥವಾ ಸೀಮಾ ನಿರ್ಣಯ ಮಾಡತಕ್ಕದ್ದು."

ಹಿಂದೆ ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಸಮಾಲೋಚಿಸದೆ ತೀಕ್ಷ್ಣಕ್ರಮ ಕೈಗೊಳ್ಳುವ ಪ್ರವೃತ್ತಿ ಕಂಡುಬಂದುದರಿಂದ, ಈಗ ನಾವು ಒಕ್ಕೂಟಕ್ಕೆ ಸೇರುತ್ತಿರುವುದರಿಂದ ನಮ್ಮೊಡನೆ ಸಮಾಲೋಚಿಸದೆ ಒಮ್ಮೆಲೆ ನಮ್ಮ ಬಂದರುಗಳ ಸೀಮಾನಿರ್ಣಯ ಮಾಡಬಾರದೆಂಬುದಕ್ಕಾಗಿ ಈ ಸಲಹೆ ನೀಡುತ್ತಿದ್ದೇನೆ. ಸಣ್ಣ ಅಥವಾ ಪ್ರಮುಖ ಬಂದರಿನ ಘೋಷಣೆಗೂ ಇದೇ ಅನ್ವಯವಾಗುತ್ತದೆ ಎಂಬುದನ್ನು ಮಂಡಿಸುತ್ತಿದ್ದೇನೆ.

**ಶ್ರೀ ನಜಿರುದ್ದೀನ್ ಅಹ್ಮದ್** : ಮಾನ್ಯರೆ, ೩೬ನೇ ಬಾಬಿಗೆ ಮುಂದಿನದನ್ನು ಬದಲಿಸುವುದು:

"೩೬. ಪ್ರಮುಖ ಬಂದರುಗಳು ಎಂದರೆ ಅಂಥ ಬಂದರುಗಳ ಘೋಷಣೆ ಮತ್ತು ಸೀಮಾನಿರ್ಣಯ ಹಾಗೂ ಅಲ್ಲಿಯ ಬಂದರು ಪ್ರಾಧಿಕಾರಗಳ ರಚನೆ ಹಾಗೂ ಅಧಿಕಾರಗಳು."

ಮಾನ್ಯರೆ, ತಿದ್ದುಪಡಿಯು ಭಾರತ ಸರ್ಕಾರ ಅಧಿನಿಯಮದ ಪಟ್ಟಿ – ೧ರ ೨೨ನೇ ಬಾಬಿನ ತದ್ವತ್ ಪುನರುಚ್ಚಾರವಾಗಿದ್ದು, ಅದರಿಂದಲೇ ಪ್ರಸ್ತುತ ೩೬ನೇ ಬಾಬನ್ನು ತೆಗೆದುಕೊಳ್ಳಲಾಗಿದೆ. ತಾತ್ಪರ್ಯ ಅದೇ, ಪ್ರಾರೂಪಣೆ ವಿಭಿನ್ನ ಅಷ್ಟೆ. ವಿಷಯ ನಿರ್ವಹಣೆಗೆ ಎಂದರೆ ಒಂದು ಬಂದರನ್ನು ಪ್ರಮುಖ ಬಂದರನ್ನಾಗಿ ಘೋಷಿಸುವ ಸಂಪೂರ್ಣ ಅಧಿಕಾರವನ್ನು ಈ ತಿದ್ದುಪಡಿ ನೀಡುತ್ತದೆ. ತಿದ್ದುಪಡಿಯು, ಒಕ್ಕೂಟಕ್ಕೆ ಅಧಿಕಾರ ನೀಡುವ ಅಂಶಕ್ಕೆ ಒತ್ತು ನೀಡಿದರೆ, ಪರಿಶೀಲಿಸಲಾಗುತ್ತಿರುವ ಬಾಬು ಘೋಷಣೆಯ ಅಂಶಕ್ಕೆ ಅಥವಾ ಬಾಬಿನ ಅಡಿಯಲ್ಲಿ ಕೈಗೊಳ್ಳಬೇಕಾದ ಕ್ರಮಕ್ಕೆ ಒತ್ತು ನೀಡುತ್ತದೆ. ಈ ತಿದ್ದುಪಡಿಯಿಂದ ಉದ್ದೇಶ ಹೆಚ್ಚು ಸಫಲವಾಗುತ್ತದೆ ಎನಿಸುತ್ತದೆ. ಆದರೂ ಇದು ಕೇವಲ ಪ್ರಾರೂಪಣೆಯಲ್ಲಿ ಆಗಬೇಕಾದ ತಿದ್ದುಪಡಿಯಾಗಿದ್ದು, ಪ್ರಾರೂಪಣ ಸಮಿತಿಯ ಪರಿಶೀಲನೆಗಾಗಿ ಸಲ್ಲಿಸಲಾಗಿದೆ.

**ಶ್ರೀ ಲಕ್ಷ್ಮೀನಾರಾಯಣ ಸಾಹು** (ಒರಿಸ್ಸಾ : ಸಾಮಾನ್ಯ) : ಮಾನ್ಯ ಸಭಾಧ್ಯಕ್ಷರೆ, ಈ ಬಾಬನ್ನು ನಾನು ಪೂರ್ಣಮನಸ್ಸಿನಿಂದ ಒಪ್ಪಿದ್ದೇನೆ. ಜೊತೆಗೆ ಪ್ರತಿಯೊಂದು ಕರಾವಳಿ ಪ್ರಾಂತ್ಯದಲ್ಲಿ ಹೊಸ ಪ್ರಮುಖ ಬಂದರನ್ನು ತೆರೆಯಲು ಉಪಬಂಧ ಕಲ್ಪಿಸುವ ಅಂಶವನ್ನು ಸೇರಿಸಲು ಬಯಸುತ್ತೇನೆ. ನನ್ನ ತಿದ್ದುಪಡಿ ಮುಂದಿನಂತಿದೆ:

"೩೬ನೇ ಬಾಬಿನ ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು :

'ಮತ್ತು ಪ್ರತಿಯೊಂದು ಕರಾವಳಿ ಪ್ರಾಂತ್ಯದಲ್ಲಿ ಕಡೇಪಕ್ಷ ಒಂದು ಪ್ರಮುಖ ಬಂದರನ್ನು ತೆರೆಯುವುದು.' "

ನನ್ನ ಪ್ರಾಂತ್ಯವನ್ನು ಕುರಿತು ನನಗಿರುವ ಆತಂಕದಿಂದಾಗಿ ನಾನು ಈ ತಿದ್ದುಪಡಿಯನ್ನು ಸೂಚಿಸುತ್ತಿದ್ದೇನೆ. ಈಗಿನ ಒರಿಸ್ಸಾ ಪ್ರಾಂತ್ಯವು ಬಹಳ ಹೀನಸ್ಥಿತಿಯಲ್ಲಿದೆ. ಹಿಂದೆ ಅದು ಸಂಪದ್ಭರಿತವಾಗಿದ್ದು, ಈಗಿನ ಬಡತನದ ಸ್ಥಿತಿಗೆ ಪ್ರಮುಖ ಬಂದರು ಇಲ್ಲದಿರುವುದೇ ಕಾರಣವಾಗಿದೆ. ಆದ್ದರಿಂದ ಅಂಥದೊಂದು ಖಂಡದ ಸೇರ್ಪಡೆಯಾಗಬೇಕೆಂದು ನಾನು ಬಯಸುತ್ತೇನೆ. ಇದರಿಂದ ಕರಾವಳಿ ಪ್ರಾಂತ್ಯಕ್ಕೊಂದು ಪ್ರಮುಖ ಬಂದರು ಲಭಿಸುತ್ತದೆ. ಶ್ರೀ ಸಿಧ್ವಾ ಅವರು, ಇದು ಒಕ್ಕೂಟದ ಪಟ್ಟಿಯ ವಿಷಯವಾಗಿರಬಾರದು ಎನ್ನುತ್ತಿದ್ದಾರೆ. ನಾನು ಅದನ್ನು ವಿರೋಧಿಸುತ್ತೇನೆ. ಏಕೆಂದರೆ ಈ ವಿಷಯ ಕೇಂದ್ರದಡಿ ಇಲ್ಲದಿದ್ದರೆ ಪ್ರಾಂತ್ಯಕ್ಕೆ ಒಂದು ಹೊಸ ಬಂದರನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವುದಿಲ್ಲ. ಶ್ರೀ ನಜಿರುದ್ದೀನ್ ಅಹ್ಮದ್ ಅವರು ತಮ್ಮ ತಿದ್ದುಪಡಿಯ ಮೂಲಕ ನನ್ನನ್ನು ಭಾಗಶಃ ಬೆಂಬಲಿಸಿದ್ದಾರೆ. ಆದ್ದರಿಂದ ನನ್ನ ತಿದ್ದುಪಡಿಯೂ ಅಂಗೀಕೃತವಾಗುವುದೆಂದು ನಾನು ಭಾವಿಸಿದ್ದೇನೆ. ಮೊದಲು ಸಮೃದ್ಧವಾಗಿದ್ದ ಒರಿಸ್ಸಾ ಇಂಥ ಬಡತನದ ಸ್ಥಿತಿಗೆ ಬಂದಿರುವುದು ಇಡೀ ದೇಶಕ್ಕೇ ಅವಮಾನ. ಈ ಪ್ರಾಂತ್ಯವನ್ನು ಅಭಿವೃದ್ಧಿಪಡಿಸಿ ಇತರ ಪ್ರಾಂತ್ಯಗಳಿಗೆ ಸಮನಾಗುವಂತೆ ಮಾಡದಿದ್ದರೆ ಅದು ಇಡೀ ದೇಶಕ್ಕೇ ಅವಮಾನದ ವಿಷಯವಾಗಿಯೇ ಉಳಿಯುತ್ತದೆ. ನೀವು ಒಟ್ಟಿಗೆ ಹೊಸದಾಗಿ ಪ್ರಾರಂಭಿಸಿದಾಗ ಎಲ್ಲ ಪ್ರಾಂತ್ಯಗಳಲ್ಲಿ ಒಂದೇ ಸಲ ಪ್ರಾರಂಭವಾಗಬೇಕು. ಆದ್ದರಿಂದಲೇ ನಮ್ಮ ಪ್ರಾಂತ್ಯಕ್ಕೆ ಪ್ರಮುಖ ಬಂದರು ಬೇಕು, ಇದರಿಂದ ವ್ಯಾಪಾರ ಹಾಗೂ ಉದ್ದಿಮೆ ಅಭಿವೃದ್ಧಿಗೊಳ್ಳುತ್ತವೆ. ನಾವು ಸಮೃದ್ಧಿ ಸಾಧಿಸಲು ಒಂದು ದಾರಿ ಬೇಕು. ಒಮ್ಮೆ ಒರಿಸ್ಸಾದಲ್ಲಿ ಕಾಲುವೆಗಳನ್ನು ಪ್ರಾರಂಭಿಸುವ ಕಾರ್ಯನೀತಿ ಆರಂಭವಾಯಿತು, ಆದರೆ ಅದು ವಿಫಲವಾಗಿ, ಜನತೆಗೆ ಅನನುಕೂಲತೆ ಉಂಟಾಯಿತಲ್ಲದೆ ಖರ್ಚಿನ

ಹೊರೆಯೂ ಬಿತ್ತು. ಒರಿಸ್ಸಾದಲ್ಲಿ ರೈಲುಮಾರ್ಗವನ್ನು ಪ್ರಾರಂಭಿಸಲಾಯಿತು, ಆದರೆ ಅದೂ ವಿಫಲವಾಯಿತು. ಅಲ್ಲಿ ಹೆಚ್ಚಿನ ಮಾರ್ಗಗಳಿಲ್ಲ ಹಾಗೂ ಮೂರು ವರ್ಷಕ್ಕೊಮ್ಮೆ ಬರುವ ಪ್ರವಾಹದಿಂದ ನಾವು ತುಂಬ ತೊಂದರೆಗೊಳಗಾಗುತ್ತೇವೆ. ಕರಾವಳಿ ಪ್ರಾಂತ್ಯದ ಯಶಸ್ಸು ಅದರ ಬಂದರುಗಳನ್ನಾಧರಿಸಿರುತ್ತದೆ. ಹಿಂದಿನ ಕಾಲದಲ್ಲಿ ಒರಿಸ್ಸಾ ತನ್ನ ಬಂದರುಗಳ ಕಾರಣದಿಂದಾಗಿ ಉತ್ತಮ ಅಭಿವೃದ್ಧಿ ಹೊಂದಿತ್ತು. ಪ್ರತಿಯೊಂದು ಜಿಲ್ಲೆಯಲ್ಲೂ ಒಂದು ಅಥವಾ ಎರಡು ಬಂದರುಗಳಿರುತ್ತಿದ್ದವು. ಬಾಲಸೂರ್‌ನಲ್ಲಿ ಪಿಪ್ಲಿ ಮತ್ತು ಚಾಂದ್‌ಬಲಿ ಬಂದರುಗಳಿದ್ದವು. ಪ್ರಾಚೀನ ಕಾಲದಲ್ಲಿ ಪುರಿಯಲ್ಲಿ ಪ್ರಸಿದ್ಧ ಚೆಲಿಪೊಲಾ ಬಂದರು ಇತ್ತು. ಇಂದು ಈ ಎಲ್ಲ ಬಂದರುಗಳು ನಾಮಾವಶೇಷವಾಗಿವೆ. ಆದ್ದರಿಂದ ನಮ್ಮ ಹೊಸ ಸರ್ಕಾರದ ಸಹಾಯ ದೊರೆತರೆ ಒರಿಸ್ಸಾ ಪ್ರಾಂತ್ಯದಲ್ಲೊಂದು ಪ್ರಮುಖ ಬಂದರನ್ನು ಪ್ರಾರಂಭಿಸಲು ಸಾಧ್ಯವಾಗುತ್ತದೆ. ಆಂಧ್ರ ಪ್ರಾಂತ್ಯ–ಹೊಸ ಪ್ರಾಂತ್ಯವಾದರೂ ಅಲ್ಲಿ ವಿಶಾಖಪಟ್ಟಣ ಬಂದರು ಪ್ರಾರಂಭವಾಗುತ್ತದೆ. ನಮ್ಮ ಪ್ರಾಂತ್ಯ ೧೯೩೬ರಲ್ಲೇ ರಚನೆಯಾಗಿದ್ದರೂ, ಕರಾವಳಿ ಪ್ರಾಂತ್ಯವಾದರೂ, ನಮ್ಮಲ್ಲಿ ಪ್ರಮುಖ ಬಂದರು ಇಲ್ಲ. ಇದನ್ನು ೩೬ನೇ ಬಾಬಿನಲ್ಲಿ ಸೇರಿಸಬೇಕೆಂದು ಬಯಸುತ್ತೇನೆ. ಭಾಷೆಗೆ ಸಂಬಂಧಿಸಿದಂತೆ ನನಗೆ ವಿಷಯವನ್ನು ಸರಿಯಾಗಿ ನಿರೂಪಿಸಲು ಆಗುವುದಿಲ್ಲ. ಇದನ್ನು ಪ್ರಾರೂಪಣೆಯ ಹೊಣೆ ಹೊತ್ತವರು ನೋಡಿಕೊಳ್ಳುತ್ತಾರೆಂದು ಭಾವಿಸುತ್ತೇನೆ.

**ಶ್ರೀ ಜಿ.ಎಲ್. ಮೆಹ್ತಾ** (ಪಶ್ಚಿಮ ಭಾರತ ರಾಜ್ಯಗಳ ಸಮೂಹ) : ಮಾನ್ಯ ಸಭಾಧ್ಯಕ್ಷರೆ, ಕೆಲವು ಅಂಶಗಳನ್ನು ಸ್ಪಷ್ಟಪಡಿಸಲು ನಾನು ಈ ಚರ್ಚೆಯಲ್ಲಿ ಮಧ್ಯೆ ಪ್ರವೇಶಿಸುತ್ತಿದ್ದೇನೆ. ಈ ದೇಶದ ಬಂದರುಗಳ ಬಗ್ಗೆ ಹೇಳುವುದಾದರೆ ಕೇಂದ್ರ ವಿಷಯವಾದ ಸಂಪರ್ಕದ ಜೊತೆಗೆ ನಿಕಟ ಸಂಬಂಧ ಹೊಂದಿರುವುದಷ್ಟೇ ಅಲ್ಲ, ಕಾರ್ಯವೈಖರಿಯ ಮಹತ್ತ್ವವೂ ಇರುವುದರಿಂದ ಅವು ಕೇಂದ್ರದ ನಿಯಂತ್ರಣದಲ್ಲಿರಬೇಕು. ಕಳೆದ ವರ್ಷ ಭಾರತ ಸರ್ಕಾರವು ಬಂದರು ಅಭಿವೃದ್ಧಿ ಸಮಿತಿಯನ್ನು ರಚಿಸಿತು. ಆ ಸಮಿತಿ ತನ್ನ ವರದಿ ನೀಡಿತು. ಭಾರತದ ಕರಾವಳಿಯಲ್ಲಿ ಬಂದರುಗಳ ಕಾರ್ಯವೈಖರಿ, ರಕ್ಷಣೆ ಹಾಗೂ ವಾಣಿಜ್ಯ ದೃಷ್ಟಿಯಿಂದ ವಹಿಸಿರುವ ಮಹತ್ತ್ವದ ಪಾತ್ರ ಸಮಿತಿಗೆ ಅರಿವಾಗಿದ್ದು, ಅದನ್ನು ವರದಿಯಲ್ಲಿ ಎತ್ತಿ ತೋರಿಸಲಾಗಿದೆ ಎಂಬುದು ಸದನದ ಸದಸ್ಯರಿಗೆ ವರದಿಯ ಅಧ್ಯಯನದಿಂದ ತಿಳಿಯುತ್ತದೆ. ಮಾನ್ಯರೆ, ಬಂದರುಗಳು ಹಿನ್ನಾಡಿನಲ್ಲಿ ರೈಲ್ವೆಯೊಂದಿಗೆ ಸಂಪರ್ಕ ಹೊಂದಿದ್ದು, ರೈಲ್ವೆ ಕೇಂದ್ರ ವಿಷಯವಾಗಿದ್ದು ಬಂದರುಗಳು ಕೇಂದ್ರದ ನಿಯಂತ್ರಣದಲ್ಲಿರಬೇಕೆಂದು ಸೂಚಿಸುತ್ತೇನೆ. ಶ್ರೀ ಪಾಟಸ್ಕರ್ ಅವರು, ಬಂದರು ಪ್ರಾಧಿಕಾರಗಳ ರಚನೆ ಹಾಗೂ ಅಧಿಕಾರದ ವಿಷಯವನ್ನು ಒಕ್ಕೂಟ ಪಟ್ಟಿಗೆ ಸೇರಿಸಬೇಕೆಂದು ತಿದ್ದುಪಡಿ ಸೂಚನೆ ನೀಡಿದ್ದಾರೆ. ಬಂದರುಗಳ ಸೀಮಾ ನಿರ್ಣಯ ಸೇರಿಸಿದರೆ ಸಹಜವಾಗಿಯೇ ಬಂದರು ಪ್ರಾಧಿಕಾರಗಳ ರಚನೆ ಹಾಗೂ ಅಧಿಕಾರಗಳನ್ನು ಈ ಪಟ್ಟಿಯಲ್ಲಿಯೇ ಸೇರಿಸಬೇಕು. ಆದ್ದರಿಂದ ಆ ತಿದ್ದುಪಡಿ ಮುಕ್ತವಾಗಿಯೇ ಇದೆ. ಶ್ರೀ ಪಟ್ಟಾಣಿಯವರು ನೀಡಿರುವ ತಿದ್ದುಪಡಿಯಲ್ಲಿ "ಪರಂತು, ಒಕ್ಕೂಟಕ್ಕೆ ಸೇರಿದ ಕಡಲ ಸಂಬಂಧದ ರಾಜ್ಯಗಳ ಬಂದರುಗಳ ಬಗ್ಗೆ ಸಂಬಂಧಪಟ್ಟ ರಾಜ್ಯದೊಡನೆ ಸಮಾಲೋಚಿಸಿದ ತರುವಾಯ ಅಂಥ ಘೋಷಣೆ ಮಾಡಬೇಕು" ಎಂದು ತಿಳಿಸಲಾಗಿದೆ. ಆಗ ಮಾಡಬೇಕಾದದ್ದನ್ನು ಮಾಡುವುದು ಖಂಡಿತ. ಈ ಅಂಶ ಒಕ್ಕೂಟ ಪಟ್ಟಿಯಲ್ಲಿ ಸೇರುತ್ತದೆಯೆ ಇಲ್ಲವೆ ನನಗೆ ಗೊತ್ತಿಲ್ಲ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಈ ಬಗ್ಗೆ ಸದನಕ್ಕೆ ಅರಿವು ಮೂಡಿಸುತ್ತಾರೆ. ಈ ಬಾಬು ಒಕ್ಕೂಟ ಪಟ್ಟಿಯಲ್ಲಿ ಸೇರುವುದು ನ್ಯಾಯಸಮ್ಮತ ಎಂದು ನನ್ನ ವಿನಂತಿ. ೧೯೩೨ಕ್ಕೆ ಮುಂಚೆ ನಾವು ಮಾಡಿದ್ದ ತಪ್ಪನ್ನು ಮುಂದುವರಿಸುವುದರಲ್ಲಿ ಅರ್ಥವಿಲ್ಲ.

ಪ್ರತಿಯೊಂದು ಪ್ರಾಂತ್ಯದಲ್ಲಿ ಪ್ರಮುಖ ಬಂದರು ಇರಬೇಕೆನ್ನುವ ಸೂಚನೆ ಕುರಿತಂತೆ ವಿವರವಾದ ತಾಂತ್ರಿಕ ತನಿಖೆಯಾಗಬೇಕು ಮತ್ತು ಇದು ಸಂವಿಧಾನದಲ್ಲಿರಬೇಕಾದ ಅಥವಾ ಒಕ್ಕೂಟ ಪಟ್ಟಿಯಲ್ಲಿ ಸೇರಬೇಕಾದ ವಿಷಯವಾಗಿರದೆ, ಪ್ರಾಂತ್ಯದ ಹಾಗೂ ಇಡೀ ದೇಶದ ಆರ್ಥಿಕ ಸಂಪನ್ಮೂಲಗಳಿಗೆ ಸಂಬಂಧಿಸಿದ ವಿಷಯ. ನೀವು ಅದನ್ನು ನಿಲ್ಲಿಸಬೇಕೆಂದರೆ ಸಮನ್ವಯ ಹಾಗೂ ಕೇಂದ್ರ ನಿಯಂತ್ರಣ ಅಗತ್ಯವಾಗುತ್ತದೆ.

ಆದ್ದರಿಂದ ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಮಂಡಿಸಿದಂತೆ ಈ ಬಾಬು ಒಕ್ಕೂಟ ಪಟ್ಟಿಯಲ್ಲಿ ಸೇರುವುದನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ಬಂದರುಗಳ ನಿರ್ಮಾಣ ಹಾಗೂ ಅಭಿವೃದ್ಧಿಗೆ ಕೇಂದ್ರಕ್ಕೆ ಅಧಿಕಾರ ನೀಡಬೇಕೆಂಬ ಶ್ರೀ ಲಕ್ಷ್ಮೀನಾರಾಯಣ ಸಾಹು ಅವರ ಮಾತನ್ನು ನಾನು ಒಪ್ಪುತ್ತೇನೆ. ಬಂದರುಗಳ ನಡುವಣ ಸ್ಪರ್ಧೆಯ ಬಗ್ಗೆ ಹೇಳುವುದಾದರೆ ಇದು ಕೇಂದ್ರದ ವಿಷಯವಾಗಿದ್ದು ಬಂದರುಗಳ ನಡುವಣ ಸ್ಪರ್ಧೆಯನ್ನು ತಡೆಯಲು ನಿಯಂತ್ರಣ ಮಾಡುವ ಅಧಿಕಾರ ಸಂಯುಕ್ತ ಶಾಸಕಾಂಗಕ್ಕಿರುತ್ತದೆ. ಶ್ರೀ ಸಾಹು ಅವರು ಹೇಳಿದಂತೆ ಒರಿಸ್ಸಾಗೆ ಸಂಬಂಧಿಸಿದಂತೆ ರೈಲ್ವೆ ಸುಧಾರಣೆಯ ಪ್ರಯತ್ನಗಳು ವಿಫಲವಾಗಿವೆ. ಆದ್ದರಿಂದ ಏನೂ ಇಲ್ಲದಿರುವಲ್ಲಿ ಪ್ರಮುಖ ಬಂದರು ಒದಗಿಸುವುದೆ ಇನ್ನೊಂದು ಮೂಲವಾಗಬಲ್ಲದು. ೧೯೩೫ರ ಅಧಿನಿಯಮದಲ್ಲಿ ಹಾಗೂ ಈಗ ನಾವು ಪರಿಶೀಲಿಸುತ್ತಿರುವ ಪಟ್ಟಿಯಲ್ಲಿ ಹಾಗೆ ಅಭಿವೃದ್ಧಿಪಡಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಈಗಾಗಲೇ ಒಂದು ಪ್ರಮುಖ ಬಂದರು ಇದ್ದರೆ ಅದನ್ನು ಸುಧಾರಣೆ ಮಾಡಲು ಅವಕಾಶವಿದೆ; ಸಣ್ಣ ಬಂದರು ಇದ್ದರೆ ಒಕ್ಕೂಟ ಶಾಸಕಾಂಗವು ಅದನ್ನು ಪ್ರಮುಖ ಬಂದರು ಎಂದು ಘೋಷಿಸಲು ಅವಕಾಶವಿದೆ. ಆದರೆ ಹೊಸ ಸ್ಥಳದಲ್ಲಿ ಪ್ರಮುಖ ಬಂದರನ್ನು ಪ್ರಾರಂಭಿಸಲು ಒಕ್ಕೂಟ ಸರ್ಕಾರಕ್ಕೆ ಅಧಿಕಾರ ನೀಡಿಲ್ಲ. ಪ್ರಮುಖ ಬಂದರು ಇಲ್ಲದಿರುವಲ್ಲಿ ಅದನ್ನು ಸೃಜಿಸಲು ಉಪಬಂಧ ಕಲ್ಪಿಸಬೇಕೆಂದು ನನ್ನ ಭಾವನೆ. ಅಭಿವೃದ್ಧಿಯ ಬಗ್ಗೆ ಅಲ್ಲಿ ಏನನ್ನೂ ತಿಳಿಸಿಲ್ಲ. ಘೋಷಣೆ ಮತ್ತು ಸೀಮಾ ನಿರ್ಣಯ ಎಂಬ ಪದಗಳನ್ನು ಬಳಸಲಾಗಿದೆ. ಎಂದರೆ ಪ್ರಮುಖ ಬಂದರುಗಳ ಘೋಷಣೆ ಹಾಗೂ ಸೀಮಾ ನಿರ್ಣಯ ಎಂದೇ ಅರ್ಥ. ಇದು ನಿಸ್ಸಂಶಯವಾಗಿಯೂ, ಪ್ರಾಂತ್ಯವು ಅಭಿವೃದ್ಧಿಪಡಿಸಿದ ಯಾವುದೇ ಬಂದರನ್ನು ಪ್ರಮುಖ ಬಂದರು ಎಂದು ಘೋಷಿಸಲು ಕೇಂದ್ರಕ್ಕೆ ಸಾಕಷ್ಟು ಅಧಿಕಾರವನ್ನು ನೀಡುತ್ತದೆ. ಕೇಂದ್ರವು ಪ್ರಾಂತ್ಯಗಳಿಗೆ ಬಂದರು ಅಭಿವೃದ್ಧಿಗಾಗಿ ಹಣ ಒದಗಿಸಬೇಕು. ಆದ್ದರಿಂದ ನಾನು ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರಿಗೆ 'ಘೋಷಣೆ ಮತ್ತು ಸೀಮಾ ನಿರ್ಣಯ' ಎಂಬ ಪದಗಳ ಜೊತೆಗೆ 'ಸೃಜನೆ ಮತ್ತು ಅಭಿವೃದ್ಧಿ' ಎಂಬ ಪದಗಳನ್ನು ಸ್ವೀಕರಿಸಲು ಒತ್ತಾಯಿಸುತ್ತೇನೆ.

**ಶ್ರೀ ಟಿ.ಟಿ. ಕೃಷ್ಣಮಾಚಾರಿ** (ಮದ್ರಾಸ್ : ಸಾಮಾನ್ಯ) : ಮಾನ್ಯರೆ, ಈ ಸಂಬಂಧದಲ್ಲಿ ನಾನು ಒಂದೇ ಒಂದು ಅಂಶವನ್ನು ಹೇಳಲು ಬಯಸುತ್ತೇನೆ. ನನ್ನ ಮಿತ್ರ ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರು, "ಪ್ರಾಂತ್ಯಗಳು ಬಂದರುಗಳನ್ನು ಅಭಿವೃದ್ಧಿಪಡಿಸುತ್ತವೆ, ಕೇಂದ್ರವು ತರುವಾಯ ಅವುಗಳನ್ನು ತೆಗೆದುಕೊಳ್ಳುತ್ತದೆ" ಎಂದರು. ಆದರೆ ನನ್ನ ಪ್ರಾಂತ್ಯದ ವಿಷಯದಲ್ಲಿ ಹಾಗೆ ಆಗಲಿಲ್ಲ. ನನ್ನ ಪ್ರಾಂತ್ಯದಲ್ಲಿ ಸಣ್ಣ ಬಂದರುಗಳಿಗಾಗಿ ವಿಶೇಷ ನಿಧಿ ಇದ್ದು, ಅದರಲ್ಲಿ ೬೦ ಲಕ್ಷ ರೂ. ಸಂಗ್ರಹವಾಗಿತ್ತು. ಈ ಸಣ್ಣ ಬಂದರುಗಳ ನಿಧಿಯಿಂದ ೪೦ ಲಕ್ಷ ರೂ.ಗಳನ್ನು ಪ್ರಾಂತೀಯ ಸರ್ಕಾರವು ವಿನಿಯೋಗಿಸಿ ಸಾಮಾನ್ಯ ಆದಾಯದಲ್ಲಿ ಹಾಕಿತು. ಇದು ಯಾವಾಗಲೂ ಆಗುವುದಿಲ್ಲ. ಆದ್ದರಿಂದ ಪ್ರಾಂತೀಯ ಸರ್ಕಾರಗಳು ತಮ್ಮ ನಿಯಂತ್ರಣದಲ್ಲಿರುವ ಬಂದರುಗಳ ಬಗ್ಗೆ ಸರಿಯಾದುದನ್ನು ಮಾಡುತ್ತವೆ, ಕೇಂದ್ರ ತಪ್ಪು ಮಾಡುತ್ತದೆ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ೩೬ನೇ ಬಾಬಿನ ಕೊನೆಯಲ್ಲಿ ಸೇರಿಸಲು ಶ್ರೀ ಪಾಟಸ್ಕರ್ ಅವರು ಹೇಳಿದ ತಿದ್ದುಪಡಿ "ಮತ್ತು ಅಲ್ಲಿ ಬಂದರು ಪ್ರಾಧಿಕಾರಗಳ ರಚನೆ ಹಾಗೂ ಅಧಿಕಾರ" ಎಂಬುದನ್ನು ನಾನು ಒಪ್ಪುತ್ತೇನೆ. ಅದು ಸರಿಯಾದ ಸೇರ್ಪಡೆ ಮತ್ತು ಶ್ರೀ ನಜಿರುದ್ದೀನ್ ಅಹ್ಮದ್ ತಮ್ಮ ತಿದ್ದುಪಡಿ ಮೂಲಕ ಅದೇ ಅರ್ಥ ಬರುವಂತೆ ತಿಳಿಸಿದರು. ಶ್ರೀ ನಜಿರುದ್ದೀನ್ ಅಹ್ಮದ್ ಅವರು ಭಾರತ ಸರ್ಕಾರ ಅಧಿನಿಯಮದಲ್ಲಿರುವ ಪಟ್ಟಿಯಲ್ಲಿರುವಂತೆ ಆ ಬಾಬನ್ನು ಪುನರುಚ್ಚರಿಸಿದ್ದಾರೆ. ಬಾಬಿನ ಮೊದಲ ಭಾಗಕ್ಕೆ ಸಂಬಂಧಿಸಿದಂತೆ ನಾವು ತುಸು ವಿವರಣಾತ್ಮಕವಾಗಿ ಹೇಳಿದ್ದೇವೆ,. 'ಪ್ರಮುಖ ಬಂದರುಗಳು' ಎಂದು ಹೇಳುವ ಬದಲಾಗಿ ನಾವು 'ಅವುಗಳ ಸೀಮಾ ನಿರ್ಣಯವೂ ಸೇರಿದಂತೆ ಒಕ್ಕೂಟ ಕಾನೂನಿನ ಮೂಲಕ

ಅಥವಾ ಅದರಡಿಯಲ್ಲಿ ಪ್ರಮುಖ ಬಂದರುಗಳು ಎಂದು ಘೋಷಿಸಲಾದ ಬಂದರುಗಳು' ಎಂದು ತಿಳಿಸಿದ್ದೇವೆ. ಈ ಬಾಬಿಗೆ ಸಂಬಂಧಿಸಿದಂತೆ ಭಾರತ ಸರ್ಕಾರ ಅಧಿನಿಯಮದ ಪರವಾಗಿ ಇರುವಂಥ ಅಂಶ ಯಾವುದು ಇಲ್ಲ ಎಂದು ಭಾವಿಸುತ್ತೇನೆ.

ಚರ್ಚೆಯಲ್ಲಿ ಎತ್ತಲಾಗಿರುವ ಇನ್ನೊಂದು ಅಂಶವೆಂದರೆ ಕೆಲವು ಪ್ರಾಂತ್ಯಗಳಲ್ಲಿ ಪ್ರಮುಖ ಬಂದರುಗಳಿಲ್ಲ ಮತ್ತು ಸಣ್ಣ ಬಂದರುಗಳನ್ನು ಪ್ರಮುಖ ಬಂದರುಗಳೆಂದು ಘೋಷಿಸಲು ಸಾಧ್ಯವಾಗುವ ರೀತಿಯಲ್ಲಿ ಸಾಕಷ್ಟು ಅಭಿವೃದ್ಧಿಪಡಿಸಿಲ್ಲ. ಮಾನ್ಯರೆ, ಇವುಗಳಿಗೆ ಸಂಬಂಧಿಸಿದಂತೆ ನಮ್ಮಲ್ಲಿ ಈಗಾಗಲೇ ಕಾನೂನುಗಳಿವೆ ಹಾಗೂ ಮುಂದೆ ಹೊಸ ಕಾನೂನು ರಚನೆಗೆ ನಮಗೆ ಅಧಿಕಾರವಿರುತ್ತದೆ. ಸಂಯುಕ್ತ ಸರ್ಕಾರವು ಒಂದು ಬಂದರನ್ನು ಕಾನೂನಿಗನುಸಾರವಾಗಿ ಪ್ರಮುಖ ಬಂದರು ಎಂದು ಘೋಷಿಸಬೇಕಾದರೆ ಆ ಬಂದರು ಪೂರೈಸಬೇಕಾದ ಕೆಲವು ಷರತ್ತುಗಳನ್ನು ನಾವು ಸಂಯುಕ್ತ ಕಾನೂನಿನಲ್ಲಿ ಸೂಚಿಸಬೇಕಾಗುತ್ತದೆ. ಪ್ರತಿಯೊಂದು ಕರಾವಳಿ ಪ್ರಾಂತ್ಯದಲ್ಲಿ ಕಡೇಪಕ್ಷ ಒಂದು ಪ್ರಮುಖ ಬಂದರು ಇರಬೇಕೆಂದು ಸಂವಿಧಾನದಲ್ಲಿ ಉಪಬಂಧ ಕಲ್ಪಿಸುವುದು ತಪ್ಪಾಗುತ್ತದೆ ಎಂದು ನನ್ನ ಭಾವನೆ. ಏಕೆಂದರೆ ಒಂದು ನಿರ್ದಿಷ್ಟ ಪ್ರಾಂತ್ಯದ ಕರಾವಳಿಯಲ್ಲಿ ಪ್ರಮುಖ ಬಂದರಿನ ಸೃಜನೆ ಹಾಗೂ ಅಭಿವೃದ್ಧಿಗೆ ಅವಕಾಶವಿಲ್ಲದಿರಬಹುದು. ಅಂತಹುದಕ್ಕೆ ಅವಕಾಶವಿಲ್ಲದಿರುವ ಕರಾವಳಿಯ ಮೇಲೆ ಹಣ ವ್ಯರ್ಥಮಾಡುವುದರಲ್ಲಿ ಪ್ರಯೋಜನವಿಲ್ಲ. ಹೊಸ ವ್ಯವಸ್ಥೆಯಲ್ಲಿ, ಪ್ರಮುಖ ಬಂದರು ಹೊಂದಲು ಅಗತ್ಯವಿರುವ ಪರಿಸ್ಥಿತಿ ಹಾಗೂ ಸೌಕರ್ಯ ಹೊಂದಿರುವ ಯಾವುದೇ ಪ್ರಾಂತ್ಯ ಪ್ರಮುಖ ಬಂದರು ಅಭಿವೃದ್ಧಿಪಡಿಸುವ ಅವಕಾಶದಿಂದ ವಂಚಿತವಾಗುವುದಿಲ್ಲ ಎಂದು ನನ್ನ ಭಾವನೆ. ಅಂಥ ಬಂದರುಗಳ ಅಗತ್ಯವಿರುವಲ್ಲಿ ಹಾಗೂ ಅವುಗಳನ್ನು ಸೃಜಿಸಿ ಅಭಿವೃದ್ಧಿಪಡಿಸಬಹುದಾದ ಸ್ಥಳಗಳಲ್ಲಿ ಅವುಗಳನ್ನು ಸೃಜಿಸಿ ಅಭಿವೃದ್ಧಿಪಡಿಸುವ ಅಧಿಕಾರವನ್ನು ನಾವು ಪಡೆಯುತ್ತೇವೆ.

ಶ್ರೀ ಪಟ್ಟಾಣಿಯವರು ಪ್ರಸ್ತಾವಿಸಿದ ತಿದ್ದುಪಡಿಯ ಒಂದು ಅಂಶವನ್ನು ನಾನು ಉಲ್ಲೇಖಿಸಬೇಕು. ಸಮುದ್ರಕ್ಕೆ ಸಮೀಪವಿರುವ ಒಕ್ಕೂಟಕ್ಕೆ ಸೇರಲು ಒಪ್ಪಿರುವ ರಾಜ್ಯದ ಯಾವುದೇ ಪ್ರದೇಶವನ್ನು ಪ್ರಮುಖ ಬಂದರು ಎಂದು ಘೋಷಿಸುವುದಕ್ಕೆ ಮುಂಚೆ ಆ ರಾಜ್ಯದೊಂದಿಗೆ ಸಮಾಲೋಚಿಸುವ ಬಗ್ಗೆ ಉಪಬಂಧವಿದೆ. ಬೇರೆ ಬಾಬುಗಳ ಸಂಬಂಧದಲ್ಲಿ ನಾನು ಹೇಳಿರುವಂತೆ ಆ ಸಮಾಲೋಚನೆಯು ಮುಂದಿನ ದಿನಗಳಲ್ಲಿ ಸಾಮಾನ್ಯವಾಗಿ ಘಟಿಸಬೇಕಾದ ವಿಷಯವಾಗುತ್ತದೆ. ನಿರ್ದಿಷ್ಟ ಭಾರತೀಯ ರಾಜ್ಯಗಳ ನ್ಯಾಯಸಮ್ಮತ ಆಶಯಗಳು ಕೆಲವು ಅಂಶಗಳಿಂದಾಗಿ ಫಲಿಸಲಿಲ್ಲ ಎಂಬ ಶ್ರೀ ಪಟ್ಟಾಣಿಯವರ ಮಾತು ನನಗೆ ಅರ್ಥವಾಗುತ್ತದೆ. ಈ ರಾಜ್ಯಗಳ ವಿಷಯ ಈ ವಿವರಣೆಯಲ್ಲಿ ಬರುತ್ತದೆ. ಹಿಂದೆ ಭಾರತೀಯ ರಾಜ್ಯಗಳು ಸಾಂವಿಧಾನಿಕವಾಗಿ ಕೇಂದ್ರದಿಂದ ದೂರ ಉಳಿದವು. ಪ್ರಮುಖ ಬಂದರುಗಳ ವಿಷಯ ಭಾರತ ಸರ್ಕಾರದ ಮುಂದಿದ್ದ ಹಲವು ವಿಷಯಗಳಲ್ಲಿ ಒಂದಾಗಿತ್ತು. ಆ ರಾಜ್ಯಗಳು ಭಾರತ ಸರ್ಕಾರದೊಂದಿಗೆ ನೇರ ಸಂಪರ್ಕ ಹೊಂದಿರಲಿಲ್ಲ ಚಕ್ರವರ್ತಿ ಪ್ರತಿನಿಧಿಯ ಇಲಾಖೆಯ ಮೂಲಕ ಮಾತುಕತೆ ನಡೆಸಬೇಕಿತ್ತು. ಇದು, ಕೇಂದ್ರ ಹಾಗೂ ಸಂಬಂಧಪಟ್ಟ ರಾಜ್ಯ– ಎರಡಕ್ಕೂ ಸಮಾಧಾನವಾಗುವಂತೆ ಪ್ರಶ್ನೆಗಳನ್ನು ಇತ್ಯರ್ಥಪಡಿಸುವ ಸರಿಯಾದ ವಿಧಾನವಾಗಿರಲಿಲ್ಲ. ಇನ್ನು ಮುಂದೆ ಒಕ್ಕೂಟಕ್ಕೆ ಸೇರಿದ ರಾಜ್ಯಗಳು ಒಕ್ಕೂಟದ ಭಾಗವಾಗಿರುತ್ತವೆ. ಪ್ರಾಂತ್ಯಗಳ ಸಂಬಂಧದಲ್ಲಿ ಇರುವಂತೆ ಇಲ್ಲಿಯೂ, ಯಾವುದೇ ಪ್ರದೇಶವನ್ನು ಪ್ರಮುಖ ಬಂದರು ಎಂದು ಘೋಷಿಸುವುದಕ್ಕೆ ಮುಂಚೆ ಸಮಾಲೋಚನೆ ನಡೆಸಲಾಗುತ್ತದೆ. ಇದೇ ರೀತಿಯ ಸಮಾಲೋಚನೆ ಭಾರತೀಯ ರಾಜ್ಯಗಳಾಗಿರುವ ಘಟಕಗಳ ಸಂಬಂಧದಲ್ಲಿಯೂ ನಡೆಯುತ್ತದೆ. ಭಾರತೀಯ ರಾಜ್ಯಗಳ ಪ್ರತಿನಿಧಿಗಳು ಕೇಂದ್ರದಲ್ಲಿ ಇರುತ್ತಾರೆ. ಪ್ರತಿನಿಧಿಗಳು ಶಾಸಕಾಂಗದಲ್ಲಿ ಇರುತ್ತಾರೆ. ಕೆಲವರಿಗೆ ಭಾರತೀಯ ರಾಜ್ಯಗಳ ಜೊತೆ ಸಂಬಂಧ ಹಾಗೂ ಅನುಭವ ಇರುವುದರಿಂದ ಸರ್ಕಾರದಲ್ಲಿ ಇರುತ್ತಾರೆ. ಹಿಂದೆ ಘಟಿಸಿರುವುದು ಮುಂದೆ ಆಗುವುದಿಲ್ಲ ಎಂದು ಶ್ರೀ ಪಟ್ಟಾಣಿಯವರು ಭರವಸೆ ತಾಳಲಿ. ಹೀಗೆ ಘಟಿಸಿದ್ದಾದರೆ ಅವರು ಆ ರೀತಿಯ ವಿಷಯಗಳಲ್ಲಿ ಸಂಯುಕ್ತ ಸರ್ಕಾರವನ್ನು ವಿರೋಧಿಸಿ, ಹಾಗಾಗುವುದನ್ನು ತಡೆಯಲು ಅವಕಾಶವಿದೆ.

**ಶ್ರೀ ಎ.ಪಿ. ಪಟ್ಟಾಣಿ :** ನಾನೊಂದು ಮಾತು ಹೇಳಬಹುದೇ? ಪ್ರಸ್ತುತ ವ್ಯವಸ್ಥೆಯಲ್ಲಿ ಹಲವು ಬಾರಿ, ಕಡಲ ಸಮೀಪದ ಬೇರೆ ಬೇರೆ ರಾಜ್ಯಗಳ ಹಿತಾಸಕ್ತಿಗಳು ತಾಳೆಯಾಗುವುದಿಲ್ಲ. ಕಡಲ ಸಮೀಪದ ರಾಜ್ಯಗಳಿಗೆ ಅವುಗಳದೇ ಆಸಕ್ತಿಯಿದ್ದು, ತಮ್ಮ ಪ್ರಕರಣವನ್ನು ಸರ್ಕಾರದ ಮುಂದಿಡಲು ಆ ರಾಜ್ಯಗಳಿಗೆ ಸಾಧ್ಯವಾಗಬೇಕು. ಒಬ್ಬ ವ್ಯಕ್ತಿ ಅಥವಾ ಪ್ರತಿನಿಧಿಯ ಮೂಲಕ ಎಲ್ಲ ರಾಜ್ಯಗಳು ತಮ್ಮನ್ನು ತಾವು ಪ್ರತಿನಿಧಿಸುವುದು ಸಾಧ್ಯವಾಗುವುದಿಲ್ಲ.

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್ :** ಇದಕ್ಕೆ ನನ್ನ ಉತ್ತರವೆಂದರೆ ಯಾವುದೇ ಮಹತ್ತ್ವವುಳ್ಳ ಪ್ರತಿಯೊಂದು ಕಡಲ ಸಮೀಪದ ರಾಜ್ಯಕ್ಕೆ ಮುಂಬರುವ ಸಂಯುಕ್ತ ಶಾಸಕಾಂಗದಲ್ಲಿ ವೈಯಕ್ತಿಕ ಪ್ರಾತಿನಿಧ್ಯವಿರುತ್ತದೆ. ಅಂಥ ಪ್ರಾತಿನಿಧ್ಯವಿಲ್ಲದ ರಾಜ್ಯಗಳಿಗೆ ಸಂಬಂಧಪಟ್ಟಂತೆ ಹೇಳುವುದಾದರೆ ಒಕ್ಕೂಟ ಶಾಸಕಾಂಗಕ್ಕೆ ಬೇರೆ ರಾಜ್ಯಗಳೊಡನೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವ ಮೂಲಕ ಪ್ರಾತಿನಿಧ್ಯ ದೊರಕಿಸಿಕೊಳ್ಳುವ ಹಕ್ಕು ಅವುಗಳಿಗಿದ್ದು ಒಕ್ಕೂಟ ಸರ್ಕಾರಕ್ಕೆ ಸೇರಿದ ಯಾವುದೇ ರಾಜ್ಯ ಒಕ್ಕೂಟ ಶಾಸಕಾಂಗದಲ್ಲಿ ಪ್ರಾತಿನಿಧ್ಯ ಪಡೆಯದಿರುವ ಪ್ರಶ್ನೆಯೇ ಇರುವುದಿಲ್ಲ.

ನಾನು ಶ್ರೀ ಅನಂತಶಯನಮ್ ಅಯ್ಯಂಗಾರ್ ಅವರ ಸೂಚನೆಯ ಬಗ್ಗೆ ಉಲ್ಲೇಖಿಸುವುದನ್ನು ಮರೆತುದಕ್ಕೆ ವಿಷಾದಿಸುತ್ತೇವೆ. ಅವರು ಹೇಳಿರುವ ಅಂಶಗಳು, ಈಗಿರುವ ಅಧಿನಿಯಮದಲ್ಲಿ ಸೇರಿವೆ ಎಂದು ನನ್ನ ಅನಿಸಿಕೆ. ಬಂದರುಗಳು ಪ್ರಮುಖ ಬಂದರುಗಳಾಗುವುದಕ್ಕೆ ಘೋಷಣೆ ಮಾಡಲು ಸಂಯುಕ್ತ ಸರ್ಕಾರಕ್ಕೆ ಅವಕಾಶವಿದೆ. ಸಣ್ಣ ಬಂದರು ಪ್ರಮುಖ ಬಂದರು ಆಗಬೇಕೆಂದು ಘೋಷಿಸಲು ಮಾತ್ರ ಅವಕಾಶವಿದೆ ಎಂದರ್ಥವಲ್ಲ. ದೇಶದಲ್ಲಿರುವ ಯಾವುದೇ ಭಾಗವನ್ನು ಪ್ರಮುಖ ಬಂದರು ಎಂದು ಹೇಳಿ ಅದರ ಅಭಿವೃದ್ಧಿ ಮುಂತಾದವುಗಳಿಗಾಗಿ ಅಗತ್ಯವಿರುವ ಏಜೆನ್ಸಿಗಳ ರಚನೆಗೆ ಅವಕಾಶ ಕಲ್ಪಿಸಬಹುದು. ಅವರು ಹೇಳಿದ ಅಂಶವನ್ನು ಸೇರಿಸುವಷ್ಟು ಇದು ವ್ಯಾಪಕವಾಗಿದೆ.

**ಮಾನ್ಯ ಸಭಾಧ್ಯಕ್ಷರು :** ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಶ್ರೀ ನಜಿರುದ್ದೀನ್ ಅಹ್ಮದ್ ಅವರಿಂದ ಒಂದು ತಿದ್ದುಪಡಿ ಇದೆ.

**ಶ್ರೀ ನಜಿರುದ್ದೀನ್ ಅಹ್ಮದ್ :** ನಾನು ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಒಪ್ಪಿರುವ ಶ್ರೀ ಪಾಟಸ್ಕರ್ ಅವರ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

"೩೬ನೇ ಬಾಬಿನ, ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು: 'ಮತ್ತು ಅಲ್ಲಿಯ ಬಂದರು ಪ್ರಾಧಿಕಾರಗಳ ರಚನೆ ಮತ್ತು ಅಧಿಕಾರಗಳು'."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಮಾನ್ಯ ಅಧ್ಯಕ್ಷರು :** ಮುಂದಿನ ತಿದ್ದುಪಡಿ ಶ್ರೀ ಪಟ್ವಾಣಿಯವರದು –

"೩೬ನೇ ಬಾಬಿನ ಕೊನೆಯಲ್ಲಿ ಮುಂದಿನ ನಿಬಂಧನೆಯನ್ನು ಸೇರಿಸುವುದು.

'ಪರಂತು ಒಕ್ಕೂಟಕ್ಕೆ ಸೇರಿದ ಕಡಲ ಸಮೀಪದ ರಾಜ್ಯಗಳೊಂದಿಗೆ ಸಮಾಲೋಚಿಸಿ ಆ ರಾಜ್ಯಗಳ ಬಂದರುಗಳಿಗೆ ಅಂಥ ಘೋಷಣೆ ಅಥವಾ ಸೀಮಾ ನಿರ್ಣಯ ಮಾಡತಕ್ಕದ್ದು."

**ಶ್ರೀ ಎ.ಪಿ. ಪಟ್ವಾಣಿ :** ನಾನು ನನ್ನ ತಿದ್ದುಪಡಿಯನ್ನು ಹಿಂಪಡೆಯುತ್ತೇನೆ.

ಸಭೆಯ ಅನುಮತಿಯಿಂದ ತಿದ್ದುಪಡಿಯನ್ನು ಹಿಂಪಡೆಯಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಅನಂತರದ ತಿದ್ದುಪಡಿ ಶ್ರೀ ಲಕ್ಷ್ಮೀನಾರಾಯಣ ಸಾಹು ಅವರಿಂದ ಬಂದಿದ್ದು, ಅವರ ಸೂಚನೆ, ೩೬ನೇ ಬಾಬಿನ ಕೊನೆಯಲ್ಲಿ ಮುಂದಿನದನ್ನು ಸೇರಿಸುವುದರ ಕುರಿತಾಗಿದೆ. ಅದು :

"ಮತ್ತು, ಪ್ರತಿಯೊಂದು ಕರಾವಳಿ ಪ್ರಾಂತ್ಯದಲ್ಲಿ ಕಡೇಪಕ್ಷ ಒಂದು ಹೊಸ ಪ್ರಮುಖ ಬಂದರನ್ನು ತೆರೆಯುವುದು."

ಈ ತಿದ್ದುಪಡಿಯನ್ನು ನಿರಾಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಪಾಟಸ್ಕರ್ ಅವರ ತಿದ್ದುಪಡಿ ಮೂಲಕ ತಿದ್ದುಪಡಿಯಾದಂತೆ ಮೂಲ ಬಾಬನ್ನು ಮತಕ್ಕೆ ಹಾಕುತ್ತೇನೆ.

೩೬ನೇ ಬಾಬನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

## ಬಾಬು – ೩೭

**ಮಾನ್ಯ ಸಭಾಧ್ಯಕ್ಷರು :** ನಾವು ಈಗ ೩೭ನೇ ಬಾಬಿಗೆ ಹೋಗೋಣ.

(ಶ್ರೀ ಕೆ. ಸಂತಾನಮ್ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ).

**ಶ್ರೀ ಜಿ.ಎಲ್. ಮೆಹ್ತಾ :** ಮಾನ್ಯ ಸಭಾಧ್ಯಕ್ಷರೆ, ೩೭ನೇ ಬಾಬಿನ ಕೊನೆಯಲ್ಲಿ ಮುಂದಿನದನ್ನು ಸೇರಿಸಬೇಕೆಂದು ಮಂಡಿಸಲು ಅನುಮತಿ ಕೋರುತ್ತೇನೆ.

"ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣ ಮತ್ತು ತರಬೇತಿಯ ನಿಯಂತ್ರಣ."

ಮಾನ್ಯರೆ, ಈ ತಿದ್ದುಪಡಿಯನ್ನು ಅವರ ಒಪ್ಪಿಗೆಗಾಗಿ ಶಿಫಾರಸು ಮಾಡಲು ನಾನು ಸದನದ ಸಮಯವನ್ನು ಬಳಸಿಕೊಳ್ಳುವುದಿಲ್ಲ. ವಾಣಿಜ್ಯ ನೌಕಾಸೇವೆಗಳ ಕುರಿತ ಶಿಕ್ಷಣ ಹಾಗೂ ತರಬೇತಿ ಬಗ್ಗೆ ಸಂತಾನಮ್ ಅವರು ವಿವರಿಸಿದ ಕಾರಣಗಳಿಗಾಗಿಯೇ ವೈಮಾನಿಕ ಸೇವೆಗಳ ಶಿಕ್ಷಣದಲ್ಲಿ ಕೇಂದ್ರದಿಂದ ನಿಯಂತ್ರಣ ಹಾಗೂ ಸಮನ್ವಯದ ಅಗತ್ಯವಿದೆ. ನಾನು ಇಲ್ಲಿ ಇನ್ನೊಂದು ಅಂಶವನ್ನು ಸೇರಿಸಬೇಕು. ವಾಣಿಜ್ಯ ನೌಕಾಪಡೆ ಸೇವೆ ಹಾಗೂ ವಿಮಾನಯಾನ ಸೇವೆಯ ಶಿಕ್ಷಣಕ್ಕಾಗಿ ನಾವು ನಮ್ಮ ಸಂಪನ್ಮೂಲಗಳನ್ನೂ ಒಗ್ಗೂಡಿಸಬೇಕಾಗುತ್ತದೆ. ಪ್ರಾರಂಭಿಕ ಹಂತದಲ್ಲಿಯೇ, ಪ್ರತಿಯೊಂದು ಘಟಕ ಅಥವಾ ಪ್ರತಿಯೊಂದು ರಾಜ್ಯ ಇಂಥವೇ ಸಂಸ್ಥೆಗಳನ್ನೂ ಪ್ರಾರಂಭಿಸಲಿ ಎಂದು ನಿರೀಕ್ಷಿಸಲಾಗದು. ನಮಗೆ ತಾಂತ್ರಿಕ ಪರಿಣತರ ಕೊರತೆಯಿದೆ ಹಾಗೂ ಅಗತ್ಯವಿರುವ ವಿಮಾನ, ಸಾಧನಗಳು ಇತ್ಯಾದಿಗಳನ್ನು ದೊರಕಿಸಿಕೊಳ್ಳುವುದು ಕಷ್ಟವಾಗುತ್ತದೆ. ಆದ್ದರಿಂದ ಪ್ರಾರಂಭಿಕ ಹಂತದಲ್ಲಿ ಒಂದು ಕೇಂದ್ರ ಸಂಸ್ಥೆ ಇರಬೇಕು. ಘಟಕಗಳು ಅಂಥ ಸಂಸ್ಥೆಗಳನ್ನು ಪ್ರಾರಂಭಿಸಲು ಬಯಸಿದರೆ ಅವರನ್ನು ತಡೆಯುವ ಅಗತ್ಯವಿಲ್ಲ. ಆದರೆ ನಾವು ಶಿಕ್ಷಣ ಹಾಗೂ ತರಬೇತಿಯಲ್ಲಿ ಏಕರೂಪದ ಗುಣಮಟ್ಟವನ್ನು ಹಾಗೂ ಆ ವಿಷಯಗಳಲ್ಲಿ ಸಕ್ಷಮತೆಯನ್ನು ಹುಟ್ಟುಹಾಕಿ, ಅದನ್ನು ನಿರ್ವಹಿಸಬೇಕಾಗುತ್ತದೆ. ಮಾನ್ಯರೆ, ನಾನು ಈ ತಿದ್ದುಪಡಿಯನ್ನು ಮಂಡಿಸುತ್ತೇನೆ.

(ಶ್ರೀ ಜಿ.ಎಲ್. ಮೆಹ್ತಾ ಅವರು ಪಟ್ಟಿ ೨ರ. ಇನ್ನೊಂದು ತಿದ್ದುಪಡಿ ೧೬ನ್ನು ಮಂಡಿಸಲಿಲ್ಲ)

(ಪ್ರೊ. ಶಿಬನ್‌ಲಾಲ್ ಸಕ್ಸೇನ ತಮ್ಮ ತಿದ್ದುಪಡಿಯನ್ನು ಮಂಡಿಸಲಿಲ್ಲ.)

**ಶ್ರೀ ನಜಿರುದ್ದೀನ್ ಅಹ್ಮದ್ :** ಮಾನ್ಯ ಸಭಾಧ್ಯಕ್ಷರೆ, ನಾನು ಮುಂದಿನಂತೆ ಮಂಡಿಸಲು ಬಯಸುತ್ತೇನೆ.

"೩೭ನೇ ಬಾಬಿನಲ್ಲಿ ವಿವರಣ ವಿರಾಮ ಚಿಹ್ನೆಗೆ, ಅರ್ಧವಿವರಣ ವಿರಾಮ ಚಿಹ್ನೆಯನ್ನು ಬದಲಿಸುವುದು ಮತ್ತು ಅಲ್ಪವಿರಾಮಕ್ಕೆ ಅರ್ಧವಿವರಣ ವಿರಾಮ ಚಿಹ್ನೆಯನ್ನು ಬದಲಿಸುವುದು." (ನಗು)

ಮಾನ್ಯರೆ, ಈ ತಿದ್ದುಪಡಿಯ ಮೂಲಕ ನಾನು ಸದನದಲ್ಲಿ ತುಸು ವಿನೋದವನ್ನುಂಟುಮಾಡಿದೆನೆಂದು ತೋರುತ್ತದೆ. ಆದರೆ ಇದು ಗಂಭೀರ ವಿಷಯ. ವಾಸ್ತವವಾಗಿ ೩೭ಏ ಬಾಬಿನಲ್ಲಿ ಮೂರು ವಿಭಿನ್ನ ವಿಷಯಗಳಿವೆ. ಮೊದಲನೆಯದು ವಿಮಾನ ಮತ್ತು ವಿಮಾನಯಾನ. ಎರಡನೆಯದು ವಿಮಾನ ನಿಲ್ದಾಣಗಳ ಏರ್ಪಾಡು ಮೂರನೆಯದು ವಿಮಾನಸಂಚಾರ ಮತ್ತು ವಿಮಾನ ನಿಲ್ದಾಣಗಳ ನಿಯಂತ್ರಣ ಮತ್ತು ಸಂಘಟನೆ. ಈ ಮೂರೂ ಬೇರೆ ಬೇರೆ ಬಾಬುಗಳನ್ನು ಅಲ್ಪವಿವರಣ ವಿರಾಮ ಚಿಹ್ನೆಯಿಂದ ಪ್ರತ್ಯೇಕಿಸಬೇಕೆಂದು ವಿನಂತಿಸುತ್ತೇನೆ.

ಈ ಬಾಬುಗಳ ಪ್ರಾರೂಪಣೆಯಲ್ಲಿ ಆ ಪದ್ಧತಿಯಿದೆ. ಈ ಮೂರು ಬೇರೆ ಬೇರೆ ಉಪಬಾಬುಗಳನ್ನು

ಒಂದೇ ರೀತಿಯ ವಿರಾಮ ಚಿಹ್ನೆಗಳಿಂದ ಪ್ರತ್ಯೇಕಿಸಬೇಕು. ಆದರೆ ೧ನೆಯ ಹಾಗೂ ೨ನೆಯದನ್ನು ಪ್ರತ್ಯೇಕಿಸುವಲ್ಲಿ ವಿವರಣವಿರಾಮ ಚಿಹ್ನೆಯಿದೆ. ಓದುಗನಿಗೆ ಇಲ್ಲಿ ತಟ್ಟನೆ ತಡೆ ಉಂಟಾಗುತ್ತದೆ. ಇದು ಬಹುತೇಕ ಪೂರ್ಣವಿರಾಮದಂತೆನಿಸುತ್ತದೆ. ಆದರೆ ೨ನೇ ಹಾಗೂ ೩ನೇ ಉಪಬಾಬುಗಳ ನಡುವೆ ಅಲ್ಪವಿರಾಮಚಿಹ್ನೆ ಇದೆ. ಓದುಗನು ಒಂದರಿಂದ ಇನ್ನೊಂದಕ್ಕೆ ಮುಂದುವರಿಯುವಲ್ಲಿ ಆತುರತೆ ಉಂಟಾಗುತ್ತದೆ. ೩೭ಎ ಬಾಬಿಗೆ ಸಂವಾದಿಯಾದ, ಭಾರತ ಸರ್ಕಾರ ಅಧಿನಿಯಮದ ಪಟ್ಟಿ – ೧ರ ೨೪ನೇ ಬಾಬಿನೊಡನೆ ಇದನ್ನು ಎಚ್ಚರಿಕೆಯಿಂದ ಹೋಲಿಸಿ ನೋಡಿದ್ದೇನೆ. ಅಲ್ಲಿ ಚಿಹ್ನೆಯು ನಾನು ಸೂಚಿಸಿದಂತೆಯೇ ಇದೆ. ಮೂಲದಿಂದ ವಿಭಿನ್ನವಾಗಿರುವುದು ಉದ್ದೇಶಪೂರ್ವಕವಾಗಿ ಆಗಿರುವಂತೆ ತೋರುವುದಿಲ್ಲ. ಭಾರತ ಸರ್ಕಾರ ಅಧಿನಿಯಮದಲ್ಲಿ ಹಾಗೂ ಈ ಬಾಬಿನಲ್ಲಿಯ ಚಿಹ್ನೆಯ ವ್ಯತ್ಯಾಸ ಬರವಣಿಗೆಯ ತಪ್ಪಿನಿಂದಾಗಿರಬಹುದು. ಪ್ರಾರೂಪಣ ಸ್ವರೂಪದ್ದಾಗಿರುವ ಈ ತಿದ್ದುಪಡಿಯನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ಪರಿಶೀಲನೆಗಾಗಿ ಸಲ್ಲಿಸುತ್ತಿದ್ದೇನೆ.

**ಮಾನ್ಯ ಸಭಾಧ್ಯಕ್ಷರು :** ಶ್ರೀ ಸಂತಾನಮ್, ನಿಮ್ಮ ಹೆಸರಿನಲ್ಲಿ ಇನ್ನೊಂದು ತಿದ್ದುಪಡಿ ಇದೆ.

**ಶ್ರೀ ಕೆ. ಸಂತಾನಮ್ :** ಮಾನ್ಯರೆ, ನನಗೆ ಅದನ್ನು ಮಂಡಿಸುವ ಉದ್ದೇಶವಿಲ್ಲ.

**ಮಾನ್ಯ ಸಭಾಧ್ಯಕ್ಷರು :** ನಮಗೆ ಈಗ ಎರಡು ತಿದ್ದುಪಡಿಗಳಿವೆ. ಅವುಗಳ ಬಗ್ಗೆ ಯಾರಾದರೂ ಮಾತನಾಡಲಿದ್ದಾರೆಯೇ?

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್ :** ಮಾನ್ಯರೆ, ತರಬೇತಿ ಕುರಿತಂತೆ ಶ್ರೀ ಮೆಹ್ತಾ ಅವರು ಮಂಡಿಸಿದ ತಿದ್ದುಪಡಿ – ಆ ಬಗ್ಗೆ ನನ್ನ ಆಕ್ಷೇಪವಿಲ್ಲ. ಈಗಾಗಲೇ ಪ್ರದತ್ತವಾಗಿರುವ ಅಧಿಕಾರಗಳನ್ನು ಅದರಲ್ಲಿ ವಿವರಿಸಲಾಗಿದೆ. ನಿರ್ದಿಷ್ಟ ವಿದ್ಯಾರ್ಹತೆಯುಳ್ಳ ಪೈಲಟ್ ಅಥವಾ ಚಾಲಕರಿಗಾಗಿ ಒತ್ತು ನೀಡಿ. ತಮ್ಮ ಇಷ್ಟದ ಮೇರೆಗೆ ಶಾಲೆಗಳು ಪ್ರಾರಂಭವಾಗುತ್ತವೆ. ಆದ್ದರಿಂದ ವೈಮಾನಿಕ ತರಬೇತಿ ಅಥವಾ ನೌಕಾಯಾನ ಶಾಲೆಗಳನ್ನು ತೆರೆಯುವ ಅಗತ್ಯವಿಲ್ಲ. ನಾವಿಕರು ಅಥವಾ ವಿಮಾನ ಚಾಲಕರು ನಿರ್ದಿಷ್ಟ ವಿದ್ಯಾರ್ಹತೆ ಹೊಂದಿರಬೇಕೆಂಬ ಒಂದು ಶಾಸನದ ಮೂಲಕ ಸಮಸ್ಯೆಯನ್ನು ಪರಿಹರಿಸಬಹುದು. ಇಂಥದೊಂದು ತಿದ್ದುಪಡಿಯ ಅಗತ್ಯವಿರುವುದಿಲ್ಲ. ಅದನ್ನು ಸೇರಿಸುವುದರಿಂದ ತೊಂದರೆಯೂ ಇಲ್ಲ. ನಾನು ತಿದ್ದುಪಡಿಯನ್ನು ಬೆಂಬಲಿಸುತ್ತೇನೆ.

ಒಂದು ಮೂಲಭೂತ ಅಂಶದ ಕಡೆಗೆ ಸದನದ ಗಮನ ಸೆಳೆಯಲು ಬಯಸುತ್ತೇನೆ. ಹೆದ್ದಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿಗಳಿವೆ, ಪ್ರಾಂತೀಯ ಹೆದ್ದಾರಿಗಳಿವೆ. ರೈಲು ಮಾರ್ಗಗಳಿಗೆ ಸಂಬಂಧಿಸಿದಂತೆ ರಾಜ್ಯ ರೈಲುಮಾರ್ಗಗಳು, ಅಖಿಲ ಭಾರತ ರೈಲುಮಾರ್ಗಗಳು, ಸಣ್ಣ ರೈಲುಮಾರ್ಗಗಳು ಇವೆ. ಅಂತೆಯೇ ಜಲಮಾರ್ಗಗಳಿಗೆ ಸಂಬಂಧಿಸಿದಂತೆ ಒಳನಾಡು ಜಲಮಾರ್ಗಗಳು, ಸಂಯುಕ್ತ ಜಲಮಾರ್ಗಗಳೆಂದು ಘೋಷಿಸುವ ಜಲಮಾರ್ಗಗಳು ಇವೆ. ವಾಯುಮಾರ್ಗಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಪ್ರಾಂತ್ಯಗಳನ್ನು ಕೊರತೆ ಬೀಳಿಸುವ ಪ್ರವೃತ್ತಿ ಕೇಂದ್ರಕ್ಕೆ ಇರಬಹುದು. ವಾಯುಮಾರ್ಗಕ್ಕೆ ಸಂಬಂಧಿಸಿದಂತೆ ಹೆದ್ದಾರಿಗಳು ಕೇಂದ್ರಕ್ಕೆ ಮೀಸಲಾಗಿರಬಹುದು. ಶಾಖಾಮಾರ್ಗಗಳು ಅಥವಾ ಶಾಖಾ ವಾಯುಮಾರ್ಗಗಳನ್ನು, ಪ್ರಾಂತ್ಯಗಳು ಅಭಿವೃದ್ಧಿಪಡಿಸಲು ಅವಕಾಶ ನೀಡಬೇಕು, ಏಕೆಂದರೆ ಪ್ರಾಂತ್ಯಗಳು ಈ ಸಂಚಾರವನ್ನು ಕೇಂದ್ರಕ್ಕಿಂತ ಹೆಚ್ಚು ಸಮರ್ಥವಾಗಿ ಅಭಿವೃದ್ಧಿಪಡಿಸುತ್ತವೆ. ನಾನು ವಿರೋಧಿಸುತ್ತಿಲ್ಲ ಅಥವಾ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ಸದನವು ಈ ಹಂತದಲ್ಲಿ ಗಮನಿಸಬೇಕಾದ ಅಂಶವೆಂದರೆ ಒಂದು ಅಧಿನಿಯಮವು ಅಂಗೀಕಾರವಾದಾಗ ಸಂಯುಕ್ತ ಶಾಸಕಾಂಗವು ರಸ್ತೆ ಸಂಚಾರ ಸಮಿತಿಗಳಂತೆ ಪ್ರಾಂತೀಯ ವಾಯುಸಂಚಾರ ಸಮಿತಿಗಳಿಗೆ ಅವಕಾಶ ಕಲ್ಪಿಸಬೇಕು. ಇದರಿಂದ ಪ್ರಾಂತ್ಯಗಳಲ್ಲಿ ವಾಯುಸಂಚಾರ ನಿಯಂತ್ರಣ, ವಿಸ್ತರಣೆ, ಹೊಸ ಮಾರ್ಗಗಳ ಪ್ರಾರಂಭ ಸಾಧ್ಯವಾಗುವುದಲ್ಲದೆ ಮುಖ್ಯ ಮಾರ್ಗಗಳು ಅಥವಾ ಹೆದ್ದಾರಿಗಳು, ಪ್ರಾಂತ್ಯ–ಪ್ರಾಂತ್ಯಗಳ ನಡುವಿನ ಮಾರ್ಗಗಳಿಗೆ ಸರಬರಾಜು ಕಲ್ಪಿಸಿದಂತಾಗುತ್ತದೆ.

ಇನ್ನೊಂದು ಅಪಾಯವು ಇದೆ. ಕೇಂದ್ರೀಕೃತ ಬಂಡವಾಳವು ಎಲ್ಲ ಮಾರ್ಗಗಳಿಗೂ ಹರಿಯುವುದನ್ನು ನಾನು ಸ್ವಾಗತಿಸುತ್ತೇನೆ, ದೇಶದ ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗಲು ಅವಕಾಶವಾಗುತ್ತದೆ. ಕೇಂದ್ರವು ಕೆಲವು ವಿಮಾನಗಳನ್ನು ಹೊಂದಿರುವವರಿಗೆ ಮಾತ್ರ ಆದ್ಯತೆ ನೀಡಿ ಹಳ್ಳಿಗಳಿಗೆ ಹೋಗುವ ಸಾಧ್ಯತೆ ಇರುತ್ತದೆ. ಇದರಿಂದ ಪ್ರಾಂತ್ಯಗಳಲ್ಲಿ ಸಣ್ಣ ವಾಯುಸಂಚಾರ ಕಂಪೆನಿಗಳನ್ನು ಪ್ರಾರಂಭಿಸಿ ತುಸು ಹಣ ಸಂಪಾದಿಸಲು ಬಯಸುವವರಿಗೆ, ಹಾಗೂ ಪ್ರಾಂತ್ಯವು ಹಣ ಗಳಿಸುವುದಕ್ಕೆ ಅಡ್ಡಿಯಾಗುತ್ತದೆ. ಸ್ಪರ್ಧೆಯನ್ನು ತಡೆಗಟ್ಟಲು ವಾಯುಸಂಚಾರ ಸಮಿತಿ ಇರಬೇಕು. ಪ್ರಾಂತ್ಯಗಳಲ್ಲಿ ಪ್ರಾಂತೀಯ ಸಮಿತಿ ಸ್ಥಾಪಿಸಬೇಕು.

ನಾವು ಎಲ್ಲರ ಹಿತಾಸಕ್ತಿ ಕಾಪಾಡಲು ಒಕ್ಕೂಟದ ಕಾನೂನನ್ನು ಅಂಗೀಕರಿಸಿದಾಗ ಈ ಕೊರತೆಗಳನ್ನು ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಮತ್ತು ಸಾಮಾನ್ಯಸಭೆಗೆ ಇದು ಒಪ್ಪಿಗೆಯಾಗುತ್ತದೆ ಎಂಬ ಭಾವನೆಯಿಂದ ಯಾವುದೇ ತಿದ್ದುಪಡಿಯನ್ನು ಮಂಡಿಸುತ್ತಿಲ್ಲ. ನಮೂದು ಈಗ ಇರುವಂತೆ ಅದನ್ನು ನಾನು ಬೆಂಬಲಿಸುತ್ತೇನೆ.

**ಶ್ರೀ ಎಸ್. ಗೋಪಾಲಸ್ವಾಮಿ ಅಯ್ಯಂಗಾರ್** : ಮಾನ್ಯರೆ, ಈ ಬಾಬಿನ ಕೊನೆಯಲ್ಲಿ ಸೇರಿಸಲು ಶ್ರೀ ಮೆಹ್ತಾ ಹೇಳಿದ ಸೇರ್ಪಡೆಯನ್ನು ನಾನು ಒಪ್ಪುತ್ತೇನೆ. ಅದು–ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣ ಮತ್ತು ತರಬೇತಿಯ ನಿಯಂತ್ರಣ.

ಇನ್ನೊಂದು ತಿದ್ದುಪಡಿ ಈ ಬಾಬಿನ ಚಿಹ್ನೆಗಳಿಗೆ ಸಂಬಂಧಿಸಿದೆ. 'ನೌಕಾಯಾನ' ಎಂಬುದರ ತರುವಾಯ, ವಿವರಣ ಚಿಹ್ನೆಗೆ ಬದಲು ಅರೆವಿವರಣ ಚಿಹ್ನೆ ಇರಬೇಕಾಗಿತ್ತು. ತಪ್ಪಾಗಿದೆ. ನಾನು ಮಾನ್ಯ ನಜಿರುದ್ದೀನ್ ಅಹ್ಮದ್ ಅವರ ಮಾತನ್ನು ಸಂಪೂರ್ಣವಾಗಿ ಒಪ್ಪುತ್ತೇನೆ, ಆ ತಿದ್ದುಪಡಿಯನ್ನು ಒಪ್ಪುತ್ತೇನೆ. 'ವಿಮಾನ ನಿಲ್ದಾಣಗಳು' ಎಂಬುದರ ತರುವಾಯ ಅಲ್ಪವಿರಾಮದ ಬದಲು ಅರೆವಿವರಣಚಿಹ್ನೆ ಇರಬೇಕಿತ್ತೆಂಬ ಅವರ ಮಾತನ್ನು ಒಪ್ಪುತ್ತೇನೆ.

ಇಂಥ ಆಲೋಚನೆ ಅವರಿಗೆ ಇನ್ನೊಂದು ತಿದ್ದುಪಡಿಯನ್ನು ಪ್ರಸ್ತಾವಿಸಲು ಪ್ರೇರೇಪಿಸಬೇಕಿತ್ತು. ಅವರು ಒಪ್ಪುವುದಾದರೆ ಅದನ್ನು ನಾನು ಸೂಚಿಸುತ್ತೇನೆ. 'ಉಪಬಂಧ' ಎಂಬುದರ ಹಿಂದಿನ 'ದಿ' ಯನ್ನು ಕೈಬಿಡಬೇಕು. ಅದು ಅವರಿಗೆ ಒಪ್ಪಿಗೆಯಾಗದಿದ್ದರೆ ಎರಡನೇ ಅಲ್ಪವಿವರಣಚಿಹ್ನೆಯ ತರುವಾಯ ನಾವು ಇನ್ನೊಂದು 'ದಿ' ಸೇರಿಸಬೇಕು. 'ಉಪಬಂಧ' ಹಿಂದಿನ 'ದಿ' ಬಿಡುವುದನ್ನು ನಾನು ವೈಯಕ್ತಿಕವಾಗಿ ಸಮರ್ಥಿಸುತ್ತೇನೆ. ಇದರಿಂದ ಆ ಬಾಬಿನ ಒಕ್ಕಣೆ ಮುಂದಿನಂತಿರುತ್ತದೆ :

> "ವಿಮಾನ ಮತ್ತು ವಿಮಾನಯಾನ; ವಿಮಾನ ನಿಲ್ದಾಣಗಳ ಏರ್ಪಾಟು; ವಿಮಾನ ಸಂಚಾರ ಮತ್ತು ವಿಮಾನ ನಿಲ್ದಾಣಗಳ ನಿಯಂತ್ರಣ ಮತ್ತು ಸಂಘಟನೆ; ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣದ ಮತ್ತು ತರಬೇತಿಯ ನಿಯಂತ್ರಣ."

**ಮಾನ್ಯ ಸಭಾಧ್ಯಕ್ಷರು** : ಈಗ ನಾನು ತಿದ್ದುಪಡಿಗಳನ್ನು ಮತಕ್ಕೆ ಹಾಕುತ್ತೇನೆ. ಮೊದಲನೇ ತಿದ್ದುಪಡಿ ಶ್ರೀ ಮೆಹ್ತಾ ಅವರಿಂದ ಆಗಿದ್ದು ಅದನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಒಪ್ಪಿದ್ದಾರೆ. ಆ ತಿದ್ದುಪಡಿಯನ್ನು ಈಗ ಮತಕ್ಕೆ ಹಾಕುತ್ತೇನೆ. ೩೭ನೇ ಬಾಬಿನ ತರುವಾಯ ಮುಂದಿನ ಹೊಸ ಬಾಬನ್ನು ಸೇರಿಸುವುದು.

"ಸಿವಿಲ್ ಮತ್ತು ಮಿಲಿಟರಿ ವಿಮಾನಯಾನದ ವಿವಿಧ ಶಾಖೆಗಳಲ್ಲಿ ತರಬೇತಿ."

ಈ ಸೇರ್ಪಡೆಗೆ ಪರವಾಗಿರುವವರು 'ಐ' ಎಂದು ದಯವಿಟ್ಟು ಹೇಳಿ.

**ಅನೇಕ ಸದಸ್ಯರು** : 'ಐ'

**ಶ್ರೀ ಎನ್. ಗೋಪಾಲಸ್ವಾಮಿ ಅಯ್ಯಂಗಾರ್** : ಅವರು ಆ ತಿದ್ದುಪಡಿಯನ್ನು ಹಿಂಪಡೆದಿದ್ದಾರೆ.

**ಮಾನ್ಯ ಸಭಾಧ್ಯಕ್ಷರು** : ವಿಷಾದಿಸುತ್ತೇನೆ. ಇಲ್ಲಿ ತಪ್ಪಾಗಿದೆ. ಮತವನ್ನು ಹಿಂಪಡೆಯಲಾಗಿದೆ. ತಪ್ಪಾಗಿ ಅದನ್ನು ನಾನು ಮತಕ್ಕೆ ಹಾಕಿದೆ.

ಈಗ ಈ ತಿದ್ದುಪಡಿಯನ್ನು ಮತಕ್ಕೆ ಹಾಕುತ್ತೇನೆ.

೩೭ನೇ ಬಾಬಿನ ಕೊನೆಯಲ್ಲಿ ಮುಂದಿನದನ್ನು ಸೇರಿಸುವುದು.

"ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣದ ಮತ್ತು ತರಬೇತಿಯ ನಿಯಂತ್ರಣ."

ಈ ತಿದ್ದುಪಡಿಯನ್ನು ಅಂಗೀಕರಿಸಲಾಯಿತು.

**ಶ್ರೀ ಎಮ್. ಅನಂತಶಯನಮ್ ಅಯ್ಯಂಗಾರ್** : ಮಾನ್ಯರೆ, ನಮಗೆ 'ಐ' ಕೇಳಿಸಲೇ ಇಲ್ಲ. ಸದನದ ಅರಿವಿನ ಮೇರೆಗೆ ನೀವು ಘೋಷಿಸುತ್ತಿದ್ದೀರಿ. ಕಡೇಪಕ್ಷ ತಿದ್ದುಪಡಿಯ ಮಂಡನೆಕಾರರು 'ಐ' ಹೇಳಬೇಕು. ಇಲ್ಲವಾದರೆ ನಾವೇಕೆ ಅದನ್ನು ಒಪ್ಪಬೇಕು? ಇದು ಮಂಡನೆಕಾರರ ವ್ಯವಹಾರವಾಗಿರವಂತೆಯೇ ಸದನದ ಕಲಾಪವೂ ಆಗಿದೆ.

**ಮಾನ್ಯ ಸಭಾಧ್ಯಕ್ಷರು** : ಮಂಡನೆಕಾರರು 'ಐ' ಹೇಳಿದ್ದಾರೆ ಎಂದು ಗ್ರಹಿಸುತ್ತೇನೆ. ಈಗ ಅರೆವಿವರಣ ಚಿಹ್ನೆಗಳೊಂದಿಗಿನ ತಿದ್ದುಪಡಿ ಬಾಬನ್ನು ಮತಕ್ಕೆ ಹಾಕಲಾಗಿದೆ.

**ಒಬ್ಬ ಗೌರವಾನ್ವಿತ ಸದಸ್ಯ** : ಈಗ ಅದರ ಒಕ್ಕಣೆ ಹೇಗಿರುತ್ತದೆ ಎಂಬುದನ್ನು ಸದನಕ್ಕೆ ತಿಳಿಸಬಹುದೇ?

**ಮಾನ್ಯ ಸಭಾಧ್ಯಕ್ಷರು** : "ವಿಮಾನ ಮತ್ತು ವಿಮಾನಯಾನ; ವಿಮಾನ ನಿಲ್ದಾಣಗಳ ಏರ್ಪಾಟು; ವಿಮಾನ ಸಂಚಾರ ಮತ್ತು ವಿಮಾನ ನಿಲ್ದಾಣಗಳ ನಿಯಂತ್ರಣ ಮತ್ತು ಸಂಘಟನೆ; ವೈಮಾನಿಕ ಶಿಕ್ಷಣ ಮತ್ತು ತರಬೇತಿಗಾಗಿ ವ್ಯವಸ್ಥೆ ಮತ್ತು ಘಟಕಗಳು ಹಾಗೂ ಇತರ ಏಜೆನ್ಸಿಗಳು ನೀಡುವ ಅಂಥ ಶಿಕ್ಷಣದ ಮತ್ತು ತರಬೇತಿಯ ನಿಯಂತ್ರಣ."

ಈ ಬಾಬನ್ನು ತಿದ್ದುಪಡಿಯಾದಂತೆ ಅಂಗೀಕರಿಸಲಾಯಿತು.

**ಮಾನ್ಯ ಸಭಾಧ್ಯಕ್ಷರು** : ಈಗ ಮಧ್ಯಾಹ್ನ ಒಂದು ಗಂಟೆಯಾಗಿದೆ. ಸದನವನ್ನು ನಾಳೆ ಬೆಳಗ್ಗೆ ಹತ್ತು ಗಂಟೆಯವರೆಗೆ ಮುಂದೂಡಲಾಗಿದೆ.

ಸಭೆಯನ್ನು ೨೭ನೇ ಆಗಸ್ಟ್ ೧೯೪೭ರ ಬುಧವಾರ ಬೆಳಗ್ಗೆ ಹತ್ತು ಗಂಟೆಯವರೆಗೆ ಮುಂದೂಡಲಾಯಿತು.

*[ಹಿಂದೂಸ್ತಾನಿ ಭಾಷಣದ ಇಂಗ್ಲಿಷ್ ಅನುವಾದ.]*